ಕರ್ಮವೀರ

ಅನುವಾದಕರು: ಶ್ರೀ. ರಂಗರಾವ ದಿವಾಕರ
ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ಅವರ ಭಾಷಣ ಲೇಖನಗಳಿಂದಲೇ ಆಯ್ದು ಸಂಗ್ರಹಿಸಿದ ಪುಸ್ತಕ.
೩೦೦ ಪುಟ, ಬೆಲೆ: ೪—೮—೦
ಸಾಹಿತ್ಯ ಭಾಂಡಾರ ಹುಬ್ಬಳ್ಳಿ

ಸಂಪಾದಕರು: ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ


Editor: H. R. PUROHIT, M. A.

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೯—೨—೧೯೪೮ — [ಸಂಚಿಕೆ ೪೨] —

ಮಹಾತ್ಮರ ವಿಶ್ವಾದರ್ಶ ಜೀವನ

ಗಾಂಧಿಯವರ ಅಮಾನುಷ ಕೊಲೆ— ಅವರ ಬಾಲ್ಯ, ಯೌವನ— ದಕ್ಷಿಣ ಆಫ್ರಿಕದ ನೇತೃತ್ವ— ಭಾರತದ ಮುಖಂಡತ್ವ— ಸ್ವಾತಂತ್ರ್ಯ ಸಮರದಲ್ಲಿ ಅವರ ದಿಗ್ದರ್ಶನ- ವ್ರತನಿಷ್ಠೆ, ಪವಿತ್ರಸೇವೆ, ತ್ಯಾಗ, ವಿಶ್ವಕುಟುಂಬಿಭಾವ-

ಮೋಹನದಾಸ ಗಾಂಧಿಯವರು ಮಹಾತ್ಮರಾದರು, ಅಮರರಾದರು, ಅತಿಮಾನವಲೋಕಕ್ಕೈದಿದರು! ದಯೆಯ ಆಕರ, ಔದಾರ್ಯದ ಶಿಖರ, ತ್ಯಾಗಬುದ್ಧಿಯ ಅಪಾರ ಸಾಗರ ಎನಿಸಿದ, ಭಾರತ ಭಾಗ್ಯವಿಧಾತರಾದ ಕರ್ಮಯೋಗಿಚಕ್ರವರ್ತಿಪದಕ್ಕೇರಿದ, ಕಾರಣಪುರುಷರೆನಿಸಿದ ತಂದೆಯವರು ತಮ್ಮ ಬಾಳಿನ ವೈಯಕ್ತಿಕ ಮತ್ತು ರಾಜಕೀಯ ಮುಖಗಳಲ್ಲಿ ಆದರ್ಶ ರೀತಿಯಿಂದ ನಡೆದುಕೊಂಡು ಜಗತ್ತಿಗೊಂದು ಉದಿತೋದಿತ ನಾಗರಿಕತೆಯ ಉಚ್ಚಾದರ್ಶವನ್ನು ಬಿಟ್ಟು ಕೀರ್ತಿಕಾಯರಾದರೆಂಬುದನ್ನು ಕೇಳಿ ಧ್ರುವದಿಂದ ಧ್ರುವದ ವರೆಗಿನ ರಾಷ್ಟ್ರಗಳು ಮರುಗಿದವು; ಅದರಲ್ಲೂ ಹಿಂದುವೊಬ್ಬನ ನೀಚ ಯುಕ್ತಿಯಿಂದ ಅವರು ಪಾಂಚಭೌತಿಕ ಶರೀರವನ್ನು ಬಿಡುವಂತಾದುದರಿಂದ ಭಾರತವು ಲಜ್ಜೆಯಿಂದ ತಲೆಬಾಗಿ ನಿಂತಿತು! ಅವರ ಆತ್ಮಕ್ಕೆ ತಣಿವುಂಟಾಗಲೆನ್ನದ ಜೀವಿ ಬದುಕಿರುವನೆ?



ಶುಕ್ರವಾರ ತಾ ೩೦—೧—೪೮ ರಲ್ಲಿ ಪ್ರಾರ್ಥನಾ ವೇದಿಕೆಯನ್ನು ಮಹಾತ್ಮರು ಸಮೀಪಿಸುತ್ತಿದ್ದಾಗ ನಾಥುರಾಮ ವಿನಾಯಕ ಗೋಡ್ಸೆ ಎಂಬ ಮಹಾರಾಷ್ಟ್ರದ ಚಿತ್ತಪಾವನ ಬ್ರಾಹ್ಮಣ ತರುಣನು ನಾಲ್ಕುಬಾರಿ ಗುಂಡಿಕ್ಕಿ ಅವರನ್ನು ಕೊಲೆಮಾಡಿದನು. ಗುಂಡುಹೊಡೆದ ಬಳಿಕ ೩೫ ನಿಮಿಷಗಳ ಕಾಲ ಮಹಾತ್ಮರ ಜೀವಜ್ಯೋತಿ ಆರದೆ ಉರಿಯುತ್ತಿತ್ತು!

ಬಿರ್ಲಾ ಪ್ರಾರ್ಥನಾಂಗಣದಲ್ಲಿ ಸುಮಾರು ೫೦೦ ಜನರು ಅತ್ಯಂತ ಉತ್ಕಂಠೆಯಿಂದ ಗಾಂಧಿಯವರ ಬರವನ್ನು ನಿರೀಕ್ಷಿಸುತ್ತಿದ್ದರು. ಆಗ ಸಂಜೆ ೫ ಗಂಟೆಯಾಗಿತ್ತು. ಮಹಾತ್ಮರಿಗೆ ಹೊರಡಲು ೫ ನಿಮಿಷ ತಡವಾಯಿತು. ಅವರು ಬಿರ್ಲಾ ಭವನದಿಂದ ತಮ್ಮ ಮೊಮ್ಮಕ್ಕಳಾದ ಆಭಾಗಾಂಧಿ ಮತ್ತು ಮನುಗಾಂಧಿಯೆಂಬ ಹುಡುಗಿಯರ ಕೈಹಿಡಿದುಕೊಂಡು ತಮ್ಮ ರೂಢಿಯಂತೆ ವೇಗವಾಗಿ ಹೊರಟರು. ಸಭೆಯನ್ನು ಸಮೀಪಿಸುತ್ತಿದ್ದಾಗ ಜನರು ಇಬ್ಭಾಗವಾಗಿ ಅವರಿಗೆ ದಾರಿಮಾಡಿಕೊಟ್ಟರು. ವೇದಿಕೆಗೆ ೬ ಗಜ ದೂರದಲ್ಲಿದ್ದಾಗ ಗುಂಡಿನ ಸಪ್ಪಳ ಕೇಳಿಸಿತು. ಈಡುಗಾರನ ಕೈಯಲ್ಲಿ ಒಂದು ಪಿಸ್ತೂಲಿತ್ತು. ಅನಂತರ ಮತ್ತೆ ೩ ಗುಂಡುಗಳು ಹಾರಿದವು. ಆ ಕ್ಷಣದಲ್ಲಿ ಮಹಾತ್ಮರು ನೆಲಕ್ಕುರುಳಿದರು. ಗುಂಡುಗಳು ಅವರ ಹೊಟ್ಟೆಯನ್ನು ಹೊಕ್ಕಿದವು. ರಕ್ತವು ಪುಟಿನೆದ್ದು ಅವರ ಬಿಳಿಯ ಧೋತರವನ್ನು ತೊಯ್ಸಿತು. ಆ ಕೂಡಲೆ ಜನರ ಹಾಹಾಕಾರ ಎದ್ದಿತು. ೧ ನಿಮಿಷ ಕಾಲ ಎಲ್ಲೆಲ್ಲೂ ದಿಙ್ಮೂಢತೆ ವ್ಯಾಪಿಸಿತು. ಆ ನಿಮಿಷದಲ್ಲಿ ನೆರೆದ ಮಂದಿ ಕೊಲೆಪಾತಕಿಯನ್ನು ಮುತ್ತಿದರು; ಕೈಹಿಡಿದು ನಿಲ್ಲಿಸಿದರು. ಅವನ ಕೈಯಲ್ಲಿದ್ದ ಕೋವಿ ದೊಪ್ಪನೆ ಕೆಳಗೆ ಬಿದ್ದಿತು. ಕೊಲೆಗಡಕನು ಮಿಲಿಟರಿಯ ತರಹದ ಖಾಕಿ ಬಟ್ಟೆಯ ಒಂದು ಶರ್ಟು ಮತ್ತು ಚೊಣ್ಣವನ್ನು ಮಾತ್ರ ಹಾಕಿಕೊಂಡಿದ್ದನು. ಕಾವಲಿಗಿದ್ದ ಪೋಲೀಸರು ಆಗ ಅವನನ್ನು ಸೆರೆಹಿಡಿದರು.

ಮಹಾತ್ಮರ ಹೊಟ್ಟೆಯಿಂದ ಧಾರೆಧಾರೆಯಾಗಿ ನೆತ್ತರು ಚಿಮ್ಮುತ್ತಿತ್ತು; ಕಣ್ಣು ಮುಚ್ಚಿದ್ದವು, ತಲೆಬಾಗಿತ್ತು ... ಪ್ರಾರ್ಥನೆಯಲ್ಲಿದ್ದಂತೆ ಅವರ ಕೈಗಳು ಮುಗಿದಿದ್ದವು. ಅವರ ಮೊಮ್ಮಕ್ಕಳು ಅವರನ್ನು ಹಿಡಿದು ಕುಳ್ಳಿರಿಸಿದರು. ನಾಲ್ಕೈದು ಜನರು ಕೂಡಲೆ ಅವರನ್ನು ಬಿರ್ಲಾ ಭವನಕ್ಕೊಯ್ದರು. ಗಾಂಧಿಯವರನ್ನು ಇರಿಸಿದ ಕೋಣೆಯ ಬಾಗಿಲು ಮುಚ್ಚಲ್ಪಟ್ಟಿತು; ಯಾರಿಗೂ ಪ್ರವೇಶ ಕೊಡಲಿಲ್ಲ. ಬಿರ್ಲಾ ಭವನದ ಸುತ್ತಲೂ ದುಃಖಸಂತಪ್ತರಾದ ಅಸಂಖ್ಯ ಜನರು ನೆರೆದಿದ್ದರು. ೫.೩೫ಕ್ಕೆ ದಿವಾನ ಚಮನಲಾಲರು ಒಳಗಿಂದ ಹೊರಕ್ಕೆ ಬಂದರು. "ಬಾಪು ಹೇಗಿದ್ದಾರೆ" ಎಂದು ಪ್ರಶ್ನಿಸಿದ್ದಕ್ಕೆ ... ಬದುಕಿದ್ದಾರೆ" ಎಂದರು. ಅವರು ... ೫ ನಿಮಿಷಗಳ ನಂತರ ಶಿರಬಾಗಿಸಿದ್ದ ... ದುಃಖಭರದಿಂದ ವಿವರ್ಣಮುಖರಾಗಿ ... ಕೊಠಡಿಯಿಂದ ಹೊರಬಂದು ... ಮೃತರಾಗಿದ್ದಾರೆ" ಎಂದರು.

'ಹಾರಾಮ', 'ಹಾರಾಮ'

ಗಾಂಧಿಯವರ ... ಗಳಾದ ಮನು ಗಾಂಧಿಯು ಕಣ್ಣಾರೆ ಕಂಡ ... ಹೀಗಿದೆ:

'ಅಜ್ಜನು ವೇದಿಕೆಯ ಮೆಟ್ಟಿಲುಗಳನ್ನು ಹತ್ತುತ್ತಿದ್ದಾಗ ... ಕೊಲೆಗಡಿಕನು ಜನರ ನಡುವಿನಿಂದ ನುಗ್ಗಿ ಬಂದು ಅವನಿಗೆ ತಲೆಬಾಗಿ ಅವನ ಪಾದಮುಟ್ಟಲು ... ಕಗೆದುಕೊಳ್ಳಲು ಪ್ರಯತ್ನಿಸಿದನು. ಅಜ್ಜ ನಡೆಯುತ್ತಿರುವುದರಿಂದ ನಾನು ತೆಗೆದುಕೊಳ್ಳಹೋಗಬೇಡೆಂದು ಅವನನ್ನು ತಡೆಯಹೋಗಿ ಕೊಲೆಗಡಿಕನ ಎಡಗೈಯನ್ನು ಹಿಡಿದೆ. ಅವನು ಕೂಡಲೆ ನನ್ನನ್ನು ಅತ್ತದೂಡಿ ಗುಂಡುಹಾರಿಸಲಾರಂಭಿಸಿದ. ಮೊದಲಗುಂಡು ಅಜ್ಜನ ಹೊಟ್ಟೆಯಲ್ಲಿ ಹೊಕ್ಕಿತು. ಅವನು 'ಹಾರಾಮ, ಹಾರಾಮ' ಎಂದು ಉಸಿರಿದನು.

ಒಂದರ ಮೇಲೊಂದರಂತೆ ಗುಂಡುಗಳು ಹೊಕ್ಕವು; ಅಜ್ಜ ಅಂಗಾತ ಬಿದ್ದ; ಕನ್ನಡಕ ಚಪ್ಪಲಿಗಳು ಕಳಚಿಹೋದವು. ಹೊಟ್ಟೆಯಲ್ಲಾದ ಗಾಯದಿಂದ ನೆತ್ತರು ಚಿಮ್ಮಿತು. ಆಗ ಅವನನ್ನು ಅವನ ಕೋಣೆಗೊಯ್ದರು. ಕೋಣೆಗೆ ತಲುಪುವಷ್ಟರಲ್ಲಿ ಅಜ್ಜನಿಗೆ ಸಂಪೂರ್ಣವಾಗಿ ಎಚ್ಚರ ತಪ್ಪಿತು. ಅದಾದ ೩೦ ನಿಮಿಷಗಳ ನಂತರ ಅಜ್ಜ ಇಲ್ಲವಾದ.'

ಮರಣದ ಮುನ್ನೆಚ್ಚರಿಕೆ

ಮುಂಚಿನ ರಾತ್ರಿ ಮಲಗುವ ಮೊದಲು ತಮ್ಮ ಮೊಮ್ಮಕ್ಕಳಿದುರು ಗುಜರಾತಿಯಲ್ಲಿದ್ದ—

"ಆಶ್ಚರ್ಯಕರವಿರುವುದೀ ಪ್ರಪಂಚ!
ಬಿಕುದಿನ ನಾನಾಟವಾಡಬೇಕಿಂಥ?"

ಎಂಬ ಸೊಲ್ಲನ್ನು ಗಾಂಧಿಯವರು ಹಾಡಿದ್ದರು. ಅದೇ ಉಷಃಕಾಲದಲ್ಲಿ ಮೊದಲು ೪ ಗಂಟೆಗೆ ತಮ್ಮ ಸೇವಕನಾದ ಬಿಶನನನ್ನು ಕರೆದು 'ಈದಿನ ಎಲ್ಲ ಮುಖ್ಯವಾದ ಪತ್ರಗಳನ್ನು ನನಗೆ ಕೊಡು, ಇಂದೇ ಅವೆಲ್ಲವನ್ನು ಮುಗಿಸುತ್ತೇನೆ'' ಎಂದು ಹೇಳಿದ್ದರಂತೆ. ಈ ಸಂಗತಿಗಳಿಂದ ಗಾಂಧಿಯವರಿಗೆ ತಮ್ಮ ಮರಣದ ಮುನ್ನೆಚ್ಚರಿಕೆಯುಂಟಾಗಿರಬಹುದೆಂದು ತರ್ಕಿಸಲಾಗಿದೆ.

ಮಹಾತ್ಮರ ಅವಸಾನ ಸಮಾಪ್ತಿಯಾಯಿತು. ಪ್ರಾರ್ಥನಾಂಗಣದಲ್ಲಿ ಹತ್ತೇದಿನಗಳ ಹಿಂದೆ ಅವರು ಸಿಡಿದ ಬಾಂಬಿನಿಂದ ತಪ್ಪಿಸಿಕೊಂಡಿದ್ದರು. ಅನಂತರ ಕೆಲವು ದಿನ ಬೇಗನೆ ಕೊಲೆಗಡಿಕನು ಅವರ ಕೊರಳಿಗೆ ನುಗ್ಗಿದಾಗ ನುಗ್ಗಿದ ಕಾರಣವನ್ನು ಹೇಳಲಾರದೆ ಹೊರದೂಡಲ್ಪಟ್ಟನು. ಸಂಜೆ ಅವರು ಬಿರ್ಲಾ ಭವನದಿಂದ ಹೊರಬೀಳುವ ಕೆಲ ನಿಮಿಷಗಳ ಮುಂಚೆ ಕೊಲಂಬಿಯದ ಪತ್ರಕರ್ತೆಯೊಬ್ಬಳು "ನಿಮಗೆ ೧೨೫ ವರ್ಷ ಬದುಕುವ ಆಸೆ ಇನ್ನೂ ಇರುವದೇ?" ಎಂದು ಕೇಳಿದ್ದಕ್ಕೆ ಜಗತ್ತಿನ ಪರಿಸ್ಥಿತಿಯನ್ನವಲೋಕಿಸಿದರೆ ಅದು ಶಾಂತ್ಯಕ್ಕು ... ಗುತ್ತಿಲ್ಲವೆಂದೂ ಅದರಿಂದ ತಮಗೆ ಅಷ್ಟು ವರ್ಷ ಬದುಕುವ ಬಯಕೆಯಿಲ್ಲೆಂದೂ ಉತ್ತರ ಕೊಟ್ಟಿದ್ದರು. ಅದೇ ಕೆಲ ನಿಮಿಷಗಳಲ್ಲಿ ಸರ್ದಾರ ... ಮಹಾತ್ಮರಿಗೆ "ತಾವಿಂದು ಪ್ರಾರ್ಥನೆಗೆ ೫ ನಿಮಿಷ ತಡವಾದಿರಿ" ಎಂದುದಕ್ಕೆ ಅಹುದೆಂದರು ಗಾಂಧೀಜಿ. ಅದೇ ೫ ನಿಮಿಷಗಳ ಬಳಿಕ ಪಾಪಿಯು ಅವರ ಪಾಂಚಭೌತಿಕ ಶರೀರದ ಮೇಲೆ ಘಾತಮಾಡಿ ಅವರ ನಾಶಕ್ಕೆ ಕಾರಣನಾದನು.

ಗಾಂಧಿಯವರು ಅಮರರಾದರು

'Cowards die many times before their death—ಸಾವ ದುಕ್ಕ ಹೇಡಿಗಳು ಅನೇಕ ಸಲ ಸಾಯುತ್ತಾರೆ,' ಎಂಬ ಶೇಕ್ಸಪಿಯರನ ಮಾತಿನಂತೆ ಕೊಲೆಗಡಿಕನಂತಹ ಅನಕ್ಷಾ ... ಪಶುತುಲ್ಯ ಮಾನವನು 'ಬಾಳಿಗೆ ಒಮ್ಮೆ ಬರುವ ಮರಣ' ಎಂಬಂತೆ ... ತ್ತಾರೆ, ಸಾಯುತ್ತಾರೆ ... 'ಪುನರ್ಜನ್ಮ ... ಮನರೇಕ ...' ... ಹೊಳ ... ಉತ್ತಿರುತ್ತಾರೆ. ಅವರ ... ಕೀರ್ತಿಯನ್ನು ... ಯಲ್ಲಲ್ಲ ... ಪ್ರಾಪಾತ್ಮ ... ಜಾಜ್ವಲ್ಯಮಾನರೂ ಆದ ದೇವಮಾನವರೂ ಆದ ಕಾರಣಪುರುಷರೂ ಪುಣ್ಯಭೂಮಿಯಾದ ಭಾರತಖಂಡದಲ್ಲಿ ಅನೇಕ ಯುಗಗಳಲ್ಲಿ ಯುಗಯುಗಗಳಲ್ಲಿ ಕಾರಣಪುರುಷರೆನಿಸಿ ಹುಟ್ಟಿ ಧರ್ಮಸಂಸ್ಥಾಪನೆ ಮಾಡಿಹೋಗಿದ್ದಾರೆ. ಅಂಥವರಲ್ಲಿ ಮಹಾತ್ಮಾ ಗಾಂಧಿಯವರೂ ಇಂದು ಒಬ್ಬರೆನಿಸಿದ್ದಾರೆ. ಅವರ ಅಮಾನುಷ ಕಾರ್ಯಗಳ ಮಹಿಮೆಯಲ್ಲದೆ ಸತ್ಯ ಶಾಶ್ವತ ತೇಜಸ್ಸಿನ ದೀಪ್ತಿಯಿಂದ ಹಿಂದುಧರ್ಮ, ಭರತಖಂಡ, ಅನಂತ ಪ್ರಪಂಚವನ್ನು ಬೆಳಗಿದ ಅದು ಶಾಶ್ವತವಾಗಿ ... ಮಹಾತ್ಮರು ಅಗ್ರಗಣ್ಯರೆಂದೇ ಹೇಳಬೇಕು ... ಕಾರಣವೆಂದೆ ಅವರ ... ಮಾನ ... ಭಾರತೀಯರಿಗೂ ... ಪರಿವರ್ತಿಸಿ ... ಧನ್ಯ ... ಗೆಯನ್ನು ... ಪಾ ... ಅವರ ಜೀವನದ ಮುಖ್ಯ ಘಟನೆಗಳು—

ಆದರ್ಶ ಜೀವನ

ಮೋಹನದಾಸ ಕರಮಚಂದ ಗಾಂಧಿಯವರ ... ಕಾಠೇವಾಡದ ಪೋರಬಂದರದ ...

(೩ನೆಯ ಪುಟ ನೋಡಿರಿ)

ಮಹಾತ್ಮರ ವಿಶ್ವಾದರ್ಶ ಜೀವನ

[ಮೊದಲನೆಯ ಪುಟದಿಂದ ಮುಂಬರಿದುದು]

ಕಾಠಿಯಾವಾಡ(ಸೌರಾಷ್ಟ್ರ)ದ ಪೋರಬಂದರದಲ್ಲಿ ೧೮೬೯ರ ಅಕ್ಟೋಬರ ೨ ನೆಯ ದಿನಾಂಕದಲ್ಲಿ ಅವತರಿಸಿದರು. ಇವರು ಕರಮಚಂದರ ಕಡೆಯ ಮಕ್ಕಳೆನಿಸಿದ್ದರು. ಕರಮಚಂದ ಅಲ್ಲದೆ ಕಾಬಾ ಗಾಂಧಿಯವರು ಪೋರಬಂದರು, ರಾಜಕೋಟೆ, ವಾಂಕನೇರ ಮೊದಲಾದ ಸಂಸ್ಥಾನಗಳಲ್ಲಿ ಮಂತ್ರಿಗಳಾಗಿದ್ದರು. ಗಾಂಧಿಯವರ ತಾಯಿ ಕರಮಚಂದರ ನಾಲ್ಕನೆಯ ಹೆಂಡತಿಯಾದ ಪುತಲೀಬಾಯಿಯೆಂಬ ಸಾಧ್ವಿ ಶಿರೋಮಣಿಯು.

೧೮೭೬ ರಲ್ಲಿ ತಮ್ಮ ೭ ನೆಯ ವರ್ಷದಯಸ್ಸಿನಲ್ಲಿ ಗಾಂಧಿಯವರು ತಂದೆ ತಾಯಿಗಳೊಡನೆ ರಾಜಕೋಟೆಯಲ್ಲಿದ್ದರು. ಆಗ ಅಲ್ಲಿ ತಮಗೆ ೧೨ ವರ್ಷ ಮುಯಿಸ್ಸಾಗುವವರೆಗೆ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ನಿರತರಾಗಿದ್ದರು. ಆಗಲೇ ಗೋಕುಲದಾಸ ಮಕಾನಜಿಯೆಂಬ ವ್ಯಾಪಾರಿಗಳ ಮಗಳೆನಿಸಿದ ಕಸ್ತೂರೀಬಾಯಿಯವರೊಡನೆ ಗಾಂಧಿಯವರ ಮದುವೆಯ ವಾಙ್ನಿಶ್ಚಯವಾದುದು.

ತಾರುಣ್ಯದ ಮೊದಲ ಮೆಟ್ಟಿಲಿನಲ್ಲಿ

೧೮೭೯ ರಲ್ಲಿ ಮೋಹನದಾಸ ಗಾಂಧಿಯವರು ಹೈಸ್ಕೂಲಿನಲ್ಲಿ ಕಾಲಿಟ್ಟರು; ೧೮೮೩ ರಲ್ಲಿ ಕಸ್ತೂರೀಬಾಯಿಯವರನ್ನು ಮದುವೆಯಾದರು. ೧೮೮೪—೮೫ ರಲ್ಲಿ ಒಮ್ಮೆ ಅವರಿಗೆ ಸಂಗಡಿಗರ ಸಹವಾಸದಿಂದ ಮಾಂಸತಿನ್ನುವ ಅಭ್ಯಾಸವಾಯಿತು. ಆದರೆ ಅದೇ ಒಂದು ವರ್ಷದಲ್ಲಿ ತಂದೆತಾಯಿಗಳನ್ನು ವಂಚಿಸಿದಂತಾಗುವುದೆಂದು ಆ ರೀತಿ ಗುಪ್ತವಾಗಿ ಮಾಂಸತಿನ್ನುವುದನ್ನು ನಿಲ್ಲಿಸಲು ಸಂಕಲ್ಪಮಾಡಿ ಕೃತಕೃತ್ಯರಾದರು.

ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಗಾಂಧಿಯವರು ೧೮೮೭ ರಲ್ಲಿ ಉತ್ತೀರ್ಣರಾದರು; ಕಾಠೀವಾಡದ ಭಾವನಗರದಲ್ಲಿಯ ಶ್ಯಾಮಲದಾಸ ಕಾಲೇಜನ್ನು ಅನಂತರ ಸೇರಿದರು. ಆದರೆ ವರ್ಷದ ಪೂರ್ವಾರ್ಧ ಮುಗಿಯುವದರೊಳಗೇ ಕಾಲೇಜಿಗೆ ಶರಣು ಹೊಡೆದುಬಿಟ್ಟರು.

೧೮೮೮ ರಲ್ಲಿ ಗಾಂಧಿಯವರು ಇಂಗ್ಲೆಂಡಿಗೆ ಪಯಣಬೆಳೆಸಿದರು. ಅಲ್ಲಿಗೆ ಹೋದ ಭಾರತೀಯರಲ್ಲಿ ನೂರಕ್ಕೆ ತೊಂಬತ್ತು ಮಂದಿ ಸಸ್ಯಾಹಾರಿಗಳಿದ್ದರೂ ಸಸ್ಯಪದಾರ್ಥಗಳನ್ನು ಬಿಟ್ಟು ಆಂಗ್ಲರಾಗಿ ಮದ್ಯಮಾಂಸಾದಿ ಅಭಕ್ಷ್ಯಭಕ್ಷಣಕ್ಕಾರಂಭಿಸುವರು. ಆದರೆ ಸಾತ್ವಿಕ ತೇಜದ ಕಿಡಿಯೆನಿಸಿದ್ದ ಗಾಂಧಿಯವರು ಅಂತಹ ಅಬ್ರಹ್ಮಣ್ಯವಾತಾವರಣದ ಸುಳಿಗೆ ಸಿಕ್ಕಾಗಲೂ ಸಸ್ಯಾಹಾರವನ್ನೇ ಹಿಡಿದ ವ್ರತಸ್ಥರಾಗಿದ್ದರು. ಆಂಗ್ಲ ನಾಗರಿಕರೊಡನೆ ವ್ಯವಹರಿಸಲು ಅರ್ಹತೆ ಪಡೆಯಲೆಂದು ಆಗ ಅವರ ಸಾಮಾಜಿಕ ನೀತಿಗೊಪ್ಪುವಂತೆ ಅಲ್ಲಿಯ ನೃತ್ಯ ಮತ್ತು ಸಂಗೀತಗಳನ್ನು ಕೆಲ ಕಾಲ ಅಭ್ಯಸಿಸಿದರು. ಸರ್ವರೊಡನೆ ಹೊಂದಿಕೊಂಡು ಹೋಗುವ ಗಾಂಧಿಯವರ ಗುಣಕ್ಕಿದೊಂದು ನಿದರ್ಶನ.

೧೮೮೯—೯೦ ರಲ್ಲಿ ಮಹಾತ್ಮರ ತಪೋಭಾವ ಅವರಲ್ಲಿ ಅಂಕುರಿಸಿತೆನ್ನಬಹುದು. ಸರಳ ಜೀವನದ ಬಗ್ಗೆ ಬರೆದ ಪುಸ್ತಕಗಳನ್ನು ಓದಿ ಸರಳ ಜೀವಿಗಳಾದರು ಮತ್ತು ಖರ್ಚನ್ನು ಅರ್ಧಕ್ಕರ್ಧ ಇಳಿಸಿದರು; ಅಲ್ಲದೆ ಮೊದಲನೆಯ ಸಲ ಅವರು ಗೀತೆಯನೋದಿ ಆಗ ಅದರಲ್ಲಿಯ ದಿವ್ಯಸಂದೇಶದ ಅಮೃತಧಾರೆಯಿಂದ ತಜೀವನ ನಾವೆಗೆ ಹೋಗುವ ಹಾದಿಯ ದಿಕ್ಕನ್ನು ಕಂಡುಕೊಂಡರು.

ಬ್ಯಾರಿಸ್ಟರ ಗಾಂಧಿ

ಗಾಂಧಿಯವರು ಇಂಗ್ಲೆಂಡಿನಿಂದ ೧೮೯೧ನೆಯ ಜೂನಿನಲ್ಲಿ ಭಾರತಕ್ಕೆ ಮರಳಿ ಬ್ಯಾರಿಸ್ಟರ ಕೆಲಸವನ್ನು ಪ್ರಾರಂಭಿಸಿದರು. ಹೀಗೆ ವ್ಯವಹಾರ ಪ್ರಪಂಚದಲ್ಲಿ ತೊಡಗಿರುವಾಗ ೧೮೯೩ ರ ಎಪ್ರಿಲ್ಲಿನಲ್ಲಿ ಮುಸಲ್ಮಾನ ವ್ಯಾಪಾರ ಸಂಸ್ಥೆಯೊಂದರ ವಕಾಲತ್ತು ವಹಿಸಿ ನ್ಯಾಯಾಲಯದ ವ್ಯವಹಾರಕ್ಕಾಗಿ ದಕ್ಷಿಣ ಆಫ್ರಿಕಕ್ಕೆ ಅವರು ತೆರಳುವ ಪ್ರಸಂಗ ಬಂದಿತು. ಅದೇ ವರುಷದ ನಾತಾಲಿನ ಸುಪ್ರೀಂಕೋರ್ಟಿನಲ್ಲಿ ಅಡ್ವೋಕೇಟರಾದರು. ಹಾಗೆ ದಕ್ಷಿಣ ಆಫ್ರಿಕದಲ್ಲಿ ಅಡ್ವೋಕೇಟರಾದ ಹಿಂದೀಯರಲ್ಲಿ ಇವರೇ ಮೊದಲಿಗರಾದರು. ಆ ಕಾಲದಲ್ಲಿ ಅವರು ಧಾರ್ಮಿಕ ಸಾಹಿತ್ಯಗಳೆನಿಸಿದ ಬೈಬಲ್, ಕುರಾನ್ ಮತ್ತು ಟಾಲ್‌ಸ್ಟಾಯಿಯವರ 'ದೇವರಾಜ್ಯ ನಿಮ್ಮೊಳಗಿದೆ' ಮೊದಲಾದ ಪುಸ್ತಕಗಳನ್ನು ಓದಿದರು.

ದ. ಆಫ್ರಿಕದ ಮುಖಂಡತ್ವ

೧೮೯೪ ರ ಮೇ ತಿಂಗಳಲ್ಲಿ ಗಾಂಧಿಯವರು ನಾತಾಲಿನ ಹಿಂದೀ ಕಾಂಗ್ರೆಸ್ಸನ್ನು ಸ್ಥಾಪಿಸಿದರು. ೨ ವರ್ಷಗಳ ಬಳಿಕ ಭಾರತಕ್ಕೆ ಬಂದು ದಕ್ಷಿಣ ಆಫ್ರಿಕದ ಹಿಂದೀಯರ ಪರವಾಗಿ ಆಂದೋಲನವನ್ನು ಅವರು ಹೂಡಿದರು; ಹೆಂಡತಿ ಮಕ್ಕಳೊಡನೆ ಅದೇ ವರ್ಷ ನವಂಬರಿನಲ್ಲಿ ದ. ಆಫ್ರಿಕಕ್ಕೆ ತೆರಳಿದರು. ೧೮೯೭ನೆಯ ಜನವರಿ ೧೩ರಲ್ಲಿ ದರ್ಬಾನಿನಲ್ಲಿ ಇಳಿವಾಗ ಭಾರತದಲ್ಲಿ ಗಾಂಧಿಯವರು ದ. ಆಫ್ರಿಕದ ದಬ್ಬಾಳಿಕೆಯ ಮೇಲೆ ಭಾಷಣ ಮಾಡಿದ್ದಕ್ಕಾಗಿ ಜನರು ಅಸಂಖ್ಯರಾಗಿ ಮುತ್ತಿಗೆ ಹಾಕಿ ಅವರನ್ನು ಸ್ವಾಗತಿಸಿದರು. ೩ ವರ್ಷಗಳ ನಂತರ ಅವರು ಅಲ್ಲಿ ಶುರುವಾದ ಬೋಅರ್ ಯುದ್ಧದಲ್ಲಿ ಹಿಂದೀ ಶುಶ್ರೂಷಾಪಥಕವನ್ನು ಸ್ಥಾಪಿಸಿ ಅನುಕೂಲ ಮಾಡಿದ ಸೇವೆಗಾಗಿ ರಣಪದಕವನ್ನು ಪಡೆದರು. ೧೯೦೦ ರಲ್ಲಿ ಪುನಃ ಅವರು ಭಾರತಕ್ಕೆ ಮರಳಿದರು.

ಮತ್ತೆ ಮೂರನೆಯ ವರ್ಷವೇ ಅವರಿಗೆ ದ. ಆಫ್ರಿಕಕ್ಕೆ ತೆರಳಬೇಕಾಗಿ ಬಂದಿತು. ಟ್ರಾನ್ಸವಾಲಿನಲ್ಲಿ ಏಶಿಯನ್ನರ ವಿರುದ್ಧ ಪಾಸಾದ ಕಾಯದೆಯನ್ನು ಪ್ರತಿಭಟಿಸಲು ಅವರು ಹಿಂದೀಯರ ಮುಂದಾಳಾಗಿ ನಿಂತರು. ಮುಂದಿನ ವರ್ಷವೇ ಅವರು ಟ್ರಾನ್ಸವಾಲಿನ ಸುಪ್ರೀಂಕೋರ್ಟಿನ ಅಟಾರ್ನಿಯಾಗಿ, ಬ್ರಿಟಿಶ—ಇಂಡಿಯನ್ ಅಸೋಸಿಯೇಶನ್ನನ್ನು ಸ್ಥಾಪಿಸಿದರು. ೧೯೦೪ರಲ್ಲಿ ರಸ್ಕಿನ್ ಬರೆದ 'ಕಡೆತನಕ' ಎಂಬ ಗ್ರಂಥವನ್ನು ಗಾಂಧಿಯವರು ಅಭ್ಯಸಿಸಿದರು, 'ಹಿಂದೀ ಅಭಿಪ್ರಾಯ' ಎಂಬ ಪತ್ರಿಕೆಯನ್ನೂ ದರ್ಬಾನಿನಲ್ಲಿ ಫಿನಿಕ್ಸ್ ಸೆಟ್ಲಮೆಂಟನ್ನೂ ಸ್ಥಾಪಿಸಿದರು. ಜೋಹಾನ್ಸಬರ್ಗದಲ್ಲಿ ಪ್ಲೇಗಿನ ಹಾವಳಿಯಿದ್ದಾಗ ಆಸ್ಪತ್ರೆಯೊಂದನ್ನು ಸ್ಥಾಪಿಸಿದರು. ಅನಂತರ 'ಆರೋಗ್ಯ ಸೂತ್ರಗಳು' ಎಂಬ ಇಂಗ್ಲೀಷಿನಲ್ಲಿ ಅಜ್ಞಾದ ಭೋಜನ ವಿಷಯಿಕ ಪ್ರಬಂಧಗಳನ್ನು ಆಗ ಗುಜರಾತಿಯಲ್ಲಿ ಬರೆದರು. ಅದೇ ೨ ವರ್ಷಗಳ ಬಳಿಕ ಜೂಲೂ ದಂಗೆಯಲ್ಲಿ ರೋಗಿಶುಶ್ರೂಷೆಯ ತೊಟ್ಟಿಲನ್ನು ಹೊರಲು ಸಿದ್ಧರಾದರು. ಆಗಲೇ ಅವರು ಆಮರಣ ಬ್ರಹ್ಮಚರ್ಯವ್ರತವನ್ನು ಕೈಕೊಂಡುದು. ಅದೇ ಸೆಪ್ಟಂಬರಿನಲ್ಲಿ ಆಗಲೇ ಪಾಸಾದ ಟ್ರಾನ್ಸ್‌ವಾಲ್ ಏಶಿಯಾಟಿಕ ಕಾಯದೆಯ ತಿದ್ದುಪಡಿಯ ವಿರುದ್ಧ ನಿಷ್ಕ್ರಿಯ ಪ್ರತೀಕಾರ ಮಾಡಲು ಜೋಹಾನ್ಸಬರ್ಗಿನಲ್ಲಿ ಹಿಂದೀಯರಿಗೆ ಮುಂದಾಳಾಗಿ ನಿಂತರು. ಮುಂದೆರಡು ತಿಂಗಳುಗಳ ನಂತರ ಇಂಗ್ಲೆಂಡಿನ ವಸಾಹತು ಮಂತ್ರಿಗೆ ಹಿಂದೀಯರ ಗೋಳನ್ನರುಹಲು ಪ್ರತಿನಿಧಿ ಮಂಡಲದ ನೇತಾರರಾಗಿ ಗಾಂಧಿಯವರು ಲಂಡನ್ನಿಗೆ ಪ್ರಯಾಣ ಮಾಡಿದರು. ನಿಷ್ಕ್ರಿಯ ಪ್ರತೀಕಾರ ಕಾರ್ಯಕ್ಕೆ ಜನರನ್ನು ಸಂಘಟಿಸಿ ವಕೀಲಿಗೆ ತಿಲಾಂಜಲಿ ಕೊಟ್ಟು ಜನತಾ ಜನಾರ್ದನ ಸೇವೆಗೆ ಬಳಿಕ ಅವರು ಕಂಕಣ ಬದ್ಧರಾದರು. ಟ್ರಾನ್ಸ್‌ವಾಲಿನಿಂದ ಹೊರಡಬೇಕೆಂಬ ಸರಕಾರದ ಅಪ್ಪಣೆಯನ್ನು ಮೀರಿದ ಬಗ್ಗೆ ಅವರಿಗೆ ೧೯೦೮ ರ ಜನವರಿ ೧೦ ನೆಯ ದಿನಾಂಕದಲ್ಲಿ ೨ ತಿಂಗಳ ಸೆರೆಮನೆಯವಾಸ ವಿಧಿಸಲಾಯಿತು. ಅದೇ೩೦ರಲ್ಲಿ ಜನರಲ್ ಸ್ಮಟ್ಸರನ್ನು ಕಂಡು ಒಂದು ಒಪ್ಪಂದವನ್ನು ಅವರು ಮಾಡಿಕೊಂಡರು. ಒಪ್ಪಂದವು ಒಂದು ವಂಚನೆಯೆಂದು ತಿಳಿದುಕೊಂಡು ಪಠಾಣರು ಗಾಂಧಿಯವರನ್ನು ಕೊಲ್ಲ ಹೋದರು. ಆದರೆ ಅವರು ಅದರಿಂದ ಪಾರಾದುದಲ್ಲದೆ ಕೊಲೆ ಮಾಡಬಂದವರನ್ನು ಕ್ಷಮಿಸಿಬಿಟ್ಟರು. ಇದೇ ಅವರ ಕ್ಷಮಾಶೀಲತೆಗೆ ಮೊದಲ ಸಾಕ್ಷಿಯಾಯಿತು. ಅದೇ ವರುಷ ಆಗಸ್ಟಿನಲ್ಲಿ ಜನರಲ್ ಸ್ಮಟ್ಸರು ಒಪ್ಪಂದವನ್ನು ಮುರಿದುದರಿಂದ ಪುನಃ ಅವರು ನಿಷ್ಕ್ರಿಯ ಪ್ರತೀಕಾರವನ್ನಾರಂಭಿಸಿದರು. ಅಕ್ಟೋಬರಿನಲ್ಲಿ ಅವರನ್ನು ಹಿಡಿದು ೨ ತಿಂಗಳ ಕಠಿನ ಸಜೆ ವಿಧಿಸಲಾಯಿತು.

ಅದೇ ಮರು ವರುಷ ಪ್ರತಿನಿಧಿಗಳಾಗಿ ಗಾಂಧಿಯವರು ಇಂಗ್ಲೆಂಡಿಗೆ ತೆರಳಿದರು. ನವೆಂಬರಿನಲ್ಲಿ ದಕ್ಷಿಣ ಆಫ್ರಿಕಕ್ಕೆ ಮರಳಿ, ಪ್ರಯಾಣ ಕಾಲದಲ್ಲಿ "ಹಿಂದೀ ಸ್ವರಾಜ್ಯ" ಎಂಬ ಪುಸ್ತಕವನ್ನು ಬರೆದರು. ೧೯೧೦ ರಲ್ಲಿ ಅವರು ಜೋಹಾನ್ಸಬರ್ಗಿನಲ್ಲಿ "ಟಾಲಸ್ಟಾಯ್ ಕ್ಷೇತ್ರ" ವನ್ನು ಸ್ಥಾಪಿಸಿದರು. ನಂತರ ಪಶ್ಚಾತ್ತಾಪದ ಪ್ರಸಂಗವೊಂದರಲ್ಲಿ ಒಂದು ವಾರ ಉಪವಾಸವನ್ನು ಮಾಡಿ, ೪ ತಿಂಗಳ ವರೆಗೆ ಏಕಭುಕ್ತಿಯಲ್ಲಿದ್ದು ಕ್ಷೇತ್ರದ ಸದಸ್ಯರಿಬ್ಬರಿಗೆ ನೀತಿ ಶುದ್ಧಿಯನ್ನು ಗಳಿಸಿಕೊಟ್ಟು ಮತ್ತೆ ೧೪ ದಿನ ಉಪವಾಸ ಮಾಡಿ ಉಪವಾಸಾಸ್ತ್ರದ ಮರ್ಮವನ್ನರಿತುಕೊಂಡರು. ೧೯೧೨ ರಲ್ಲಿ ಐರೋಪ್ಯ ಉಡಿಗೆ ತೊಡಿಗೆಗಳನ್ನು ತ್ಯಜಿಸಿ ಹಾಲನ್ನೂ ಕುಡಿಯದೆ ಕೇವಲ ಹಣ್ಣು ಹಂಪಲುಗಳನ್ನು ಆಧರಿಸಿ ನಿಂತರು; ಮತ್ತು ಆ ಕಾಲದಲ್ಲಿ "ನೈತಿಕ ಧರ್ಮ" ಎಂಬ ಪ್ರಬಂಧವನ್ನು ಬರೆದರು.

೧೯೧೩ ರ ನವೆಂಬರ ೬ ರಲ್ಲಿ ೩ ಪೌಂಡಿನ ಪೋಲ್ ಟ್ಯಾಕ್ಸನ್ನು ತೆಗೆಯುವುದಿಲ್ಲವೆಂಬ ಯೂನಿಯನ ಸರಕಾರದ ವಿರುದ್ಧ ಗಾಂಧೀಯವರು ಸತ್ಯಾಗ್ರಹಾಸ್ತ್ರವನ್ನು ಪುನಃ ಪ್ರಯೋಗಿಸಿದರು; ೨೦೩೭ ಗಂಡಸರು, ೧೨೭ ಹೆಂಗಸರು ಮತ್ತು ೫೭ ಮಕ್ಕಳ ಸತ್ಯಾಗ್ರಹ ಸೈನ್ಯವನ್ನು ನಡೆಸಿಕೊಂಡು ಹೋದರು. ಹಿಡಿಯಲ್ಪಟ್ಟು ಜಾಮೀನಿನ ಮೇಲೆ ಬಿಡುಗಡೆ ಹೊಂದಿದರು. ಅದೇ ೨ ದಿನಗಳಲ್ಲಿ ಮತ್ತೆ ಹಿಡಿಯಲ್ಪಟ್ಟು ಮತ್ತೆ ಜಾಮೀನಿನಮೇಲೆ ಬಿಡುಗಡೆ ಹೊಂದಿದರು. ಆ ಮರುದಿನವೇ ಸೆರೆಹಿಡಿಯಲ್ಪಟ್ಟು ೯ ತಿಂಗಳ ಕಠಿನ ಸಜೆಗೆ ಗುರಿಯಾಗಿ ಮತ್ತೆ ಅದು ೯ ರಿಂದ ೩ ತಿಂಗಳಿಗಿಳಿದು, ಡಿಸೆಂಬರ ೧೮ ರಲ್ಲಿ ಅನಿರ್ಬಂಧವಾಗಿ ಬಿಡುಗಡೆಹೊಂದಿದರು. ೧೯೧೪ ರ ಜನವರಿ ೨೧ ರಲ್ಲಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಜನರಲ್ ಸ್ಮಟ್ಸರೊಡನೆ ಸಂಧಾನಮಾಡಿಕೊಂಡರು. ಅದೇ ಜುಲೈ ತಿಂಗಳಲ್ಲಿ ಅವರು ಇಂಗ್ಲೆಂಡಿಗೆ ತೆರಳಿ ಅಲ್ಲಿ ಆಗಸ್ಟಿನಲ್ಲಿ ಯುದ್ಧಪ್ರಾರಂಭವಾದೊಡನೆ ಹಿಂದೀ ಶುಶ್ರೂಷಾ ಪಥಕವನ್ನು ತೆಗೆದು ಕೈಸರ- ಇ—ಹಿಂದ್ ಪದಕವನ್ನು ಪಡೆದು ಭಾರತಕ್ಕೆ ೧೯೧೫ ರ ಜನವರಿಯಲ್ಲಿ ಹಿಂದಿರುಗಿದರು.

ಭಾರತದ ಮುಂದಾಳ್ತನ

೧೯೧೫ ರ ಮೇತಿಂಗಳಲ್ಲಿ ಅನಂತರ ಸಾಬರಮತಿ ಆಶ್ರಮವೆಂದು ಕರೆಯಲ್ಪಟ್ಟ ಸತ್ಯಾಗ್ರಹಾಶ್ರಮವನ್ನು ಗಾಂಧಿಯವರು ಅಹಮದಾಬಾದಿನಲ್ಲಿ ಸ್ಥಾಪಿಸಿದರು. ೧೯೧೫—೧೬ ರಲ್ಲಿ ಭಾರತಬ್ರಹ್ಮದೇಶಗಳನ್ನು ಮೂರನೆಯವರ್ಗದ ರೇಲ್ವೆ ಬಂಡಿಯಲ್ಲಿ ಕುಳಿತು ಪ್ರವಾಸ ಮಾಡಿದರು. ೧೯೧೭ ರಲ್ಲಿ ಹಿಂದೀಯರ ವಲಸೆಯ ವಿರುದ್ಧ ಪಾಸಾದ ಕಾಯದೆಯನ್ನು ಖಂಡಿಸಲು ಚಳವಳವನ್ನಾರಂಭಿಸಿದರು. ಆಗಲೇ ಅವರಿಗೆ ದೊಡ್ಡ ಪ್ರಮಾಣದಿಂದ ಕೈ ಬಟ್ಟೆಯನ್ನು ತಯಾರಿಸಲು ಕದಿರನ್ನು ಬಳಸಬೇಕೆಂಬ ವಿಚಾರ ಹೊಳೆದುದು! ಅದೇ ಎಪ್ರಿಲ್ಲಿನಲ್ಲಿ ಅವರು ಬಿಹಾರದಲ್ಲಿಯ ಚಂಪಾರಣ್ಯಕ್ಕೆ ಹೋಗಿ ನೀಲಿ ಕೆಲಸಗಾರರ ಪರಿಸ್ಥಿತಿಯನ್ನು ಪರಿಶೀಲಿಸುತ್ತಿರಲು ಸೆರೆಮನೆ ಕಂಡು ಬಿಡುಗಡೆಹೊಂದಿದರು. ಅನಂತರ ಬಿಹಾರ ಸರಕಾರವು ರೈತರ ದುಃಖವನ್ನು ಅವಲೋಕಿಸಲು ನಿಯುಕ್ತವಾದ ಸಮಿತಿಯ ಸದಸ್ಯರೊಬ್ಬರನ್ನಾಗಿ ಗಾಂಧಿಯವರನ್ನು ತೆಗೆದುಕೊಂಡಿತು.

ಕೂಲಿಕಾರರ ಕುಲದೈವತ

ಕೂಲಿಕಾರರ ಕುಲದೈವತ ವೆನಿಸಿದ ಗಾಂಧಿಯವರು ೧೯೧೮ರ ಜನವರಿ–ಮಾರ್ಚಿನಲ್ಲಿ ಅಹಮದಾಬಾದಿನ ಬಟ್ಟೆ ಗಿರಣಿ ಕೆಲಸಗಾರರ ಪಕ್ಷವಹಿಸಿ ಅವರ ಸಮಸ್ಯೆ ಸುಗಮವಾಗಿ ಬಗೆಹರಿವಂತೆ ಮಾಡಲು ಉಪವಾಸವನ್ನು ಕೈಕೊಂಡರು. ಮುಂಬಯಿಯ ಖೇಡಾಜಿಲ್ಲೆಯಲ್ಲಿ ಸತ್ಯಾಗ್ರಹವನ್ನಾರಂಭಿಸಿ ತನ್ಮೂಲಕ ಬೆಳೆ ಕೆಟ್ಟಿದ್ದಕ್ಕಾಗಿ ಕಂದಾಯ ಇಳಿಸಲು ಪ್ರಯತ್ನಿಸಿದರು. ಅದೇ ಎಪ್ರಿಲ್ ೨೭ರಲ್ಲಿ ದಿಲ್ಲಿಯಲ್ಲಿ ನೆರೆದ ವೈಸರಾಯರ ಯುದ್ಧಪರಿಷತ್ತಿಗೆ ಹೋಗಿ ಮೊದಲ ಸಲ ಹಿಂದುಸ್ತಾನಿಯಲ್ಲಿ ಮಾತನಾಡಿ ತಮ್ಮ ದೇಶಾಭಿಮಾನವನ್ನು ಧೈರ್ಯದಿಂದ ಅರಸರ ಮುಂದೆ ಪ್ರಕಟಿಸಿದರು. ಯುದ್ಧ ಸಹಾಯಾರ್ಥವಾಗಿ ಖೇಡಾಜಿಲ್ಲೆಯಲ್ಲಿ ಸೈನಿಕ ಸಂಗ್ರಹಕ್ಕಾಗಿ ತಿರುಗಾಡಿದರು.

ಸತ್ಯಾಗ್ರಹ ಸಮರ

ಆ ಮೇಲೆ ರೌಲೆಟ್ ಬಿಲ್ಲನ್ನು ಹಿಂದೆಗೆಯಿಸಲು ಸತ್ಯಾಗ್ರಹ ಪ್ರತಿಜ್ಞೆಗೆ ಮಹಾತ್ಮರು ಸಹಿ ಮಾಡಿದರು. ಅನಂತರ ಗಾಂಧಿಯವರು ಸತ್ಯಾಗ್ರಹದ ಕಹಳೆಯನ್ನು ಒಮ್ಮಿಂದೊಮ್ಮೆ ದೇಶದಾದ್ಯಂತ ಊದಿದರು: ೧೯೧೯ ರ ಎಪ್ರಿಲ್ ೬ ನೆಯ ದಿನ ಅಖಿಲ ಭಾರತ ಸತ್ಯಾಗ್ರಹದ ಚಳವಳವನ್ನು ಆರಂಭಿಸಿದರು. ಇಡಿ ನಾಡಿಗೆ ನಾಡೇ ಹರತಾಳವನ್ನಾರಂಭಿಸಿತು! ಆ ಕಾಲದಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರು ತಮ್ಮದೇ ಆದ ತಂತ್ರದಿಂದ ಸ್ವರಾಜ್ಯ ಸಾಧನೆಯಲ್ಲಿ ತೊಡಗಿದ್ದರು. ಅವರು ಆ ಹಾದಿಯಲ್ಲಿ ಕೆಲ ಮಟ್ಟಿಗೆ ಮುಂಬರಿದಿದ್ದರು. ಅವರು ತಮ್ಮ ಯುಗ ಮುಗಿದುದನ್ನರಿತು ಗಾಂಧಿಯವರ ರಾಜಕಾರಣ ಪಟುತ್ವವನ್ನು ಮುಂಗಂಡು "ಗಾಂಧಿಯವರ ಕೈಯಲ್ಲಿ ಹಿಂದುಸ್ತಾನವು ಸುರಕ್ಷಿತವಿರಬಲ್ಲದು." ಎಂದರು. ಅದೇ ಎಪ್ರಿಲ್ ೮ರಲ್ಲಿ ಅವರು ಸೆರೆಮನೆಯ ಅತಿಥಿಗಳಾದರು. ದೇಶದಲ್ಲೆಲ್ಲ ದಂಗೆ ದಾಳಿಗಳೆದ್ದವು. ಗಲಭೆ ಗಂಡಾಂತರಗಳೊದಗಿದವು. ಜನತೆಯ ಪ್ರತಿಭಟನಾ ಬುದ್ಧಿ ಲಂಗುಲಗಾಮಿಲ್ಲದೆ ಹುಚ್ಚುಹೊಳೆಯಾಗಿ ಹರಿಯಿತು. ಆ ೧೩ ರ ರಲ್ಲಿಯೇ ಜಾಲಿಯನವಾಲಾ ಬಾಗಿನ ಘೋರ, ಅಮಾನುಷ ಕೊಲೆ ಸಂಭವಿಸಿತು. ಸೈನಿಕರು ೮೦೦ ನಿರಾಯುಧರನ್ನು ಗುಂಡಿಕ್ಕಿಕೊಂದುಚೆಲ್ಲಿದರು. ಹಿಂಸೆಯ ಬಗ್ಗೆ ಪಶ್ಚಾತ್ತಾಪದಿಂದ ಗಾಂಧಿಯವರು ಮೂರು ದಿನ ಉಪವಾಸವನ್ನಾರಂಭಿಸಿದರು. ಪಂಜಾಬಿನಲ್ಲಿ ಸೈನ್ಯ ಕಾಯದೆ ಅಮಲಿನಲ್ಲಿ ಬಂದುಬಿಟ್ಟಿತು. ಅನಂತರ ೧೮ ರಲ್ಲಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಅವರು ನಿಲ್ಲಿಸಿದರು.

ಖಿಲಾಫತ್ ಚಳವಳ

ಆ ಬಳಿಕ ಗಾಂಧಿಯವರು ಪತ್ರಿಕಾ ಸಾಧನವನ್ನು ಸ್ವಾತಂತ್ರ್ಯ ಹೋರಾಟಕ್ಕೆ ಬಳಸಿಕೊಳ್ಳಲು ಸುವಾಗಿ 'ನವಜೀವನ' ವೆಂಬ ಗುಜರಾತಿ ಮಾಸಿಕವನ್ನೂ 'ಯಂಗ್ ಇಂಡಿಯಾ' ಎಂಬ ಆಂಗ್ಲ ವಾರಪತ್ರಿಕೆಯನ್ನೂ ನಡೆಸತೊಡಗಿದರು. ಅದೇ ಸಮಯದಲ್ಲಿ ೧೯೧೧ ರ ನವೆಂಬರ ೨೪ ರಲ್ಲಿ ದಿಲ್ಲಿಯಲ್ಲಿ ನಡೆದ ಅಖಿಲ ಹಿಂದುಸ್ತಾನದ ಖಿಲಾಫತ್ ಪರಿಷತ್ತಿಗೆ ಗಾಂಧಿಯವರು ಅಧ್ಯಕ್ಷರಾದರು. ತನ್ಮೂಲಕ ಹಿಂದು ಮುಸಲ್ಮಾನರಿಬ್ಬರ ಪ್ರೀತಿಯನ್ನೂ ಸಂಪಾದಿಸಿದರು. ಅನಂತರ ಅಮೃತಸರ ಕಾಂಗ್ರೆಸ್ಸಿನಲ್ಲಿ ಮಾಂಟಿಗೋಚೆಮ್ಸ್‌ಫರ್ಡ ಸುಧಾರಣೆಗಳನ್ನು ಸ್ವೀಕರಿಸಬೇಕೆಂದು ಸಲಹೆಯಿತ್ತರು. ಇಸ್ಲಾಮಿನ ಪುಣ್ಯಸ್ಥಳಗಳ ಮೇಲೆ ತುರ್ಕಿಯ ಸುಲ್ತಾನನಿಗಿದ್ದ ಪರಿಸ್ವಾಧಿಕಾರವನ್ನು ಬ್ರಿಟಿಶ ಸರಕಾರವು ಕಿತ್ತುಹಾಕ ಕೂಡದೆಂದು ವೈಸರಾಯರಲ್ಲಿಗೆ ಅವರು ಪ್ರತಿನಿಧಿಮಂಡಲವನ್ನೊಯ್ದು ಮುಸಲ್ಮಾನರ ಪ್ರೀತಿಗೌರವಗಳನ್ನು ಸಂಪಾದಿಸಿದರು.

ಸಮರತಂತ್ರಭೇದಗಳು

ದೇಶಭಕ್ತಿಯ ಮೂರ್ತಿಯೆನಿಸಿದ ಗಾಂಧಿಯವರು ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗಮಾಡ ಹೊರಟದ್ದರಿಂದಲೇ ಅವರು ಅಜಾತಶತ್ರುಗಳೂ ಸರ್ವಾದರಣೀಯರೂ ಆದರು. ೧೯೨೦ ರ ಆಗಸ್ಟಿನಲ್ಲಿ ಬ್ರಿಟಿಶರ ದಬ್ಬಾಳಿಕೆಯ ವೃತ್ತಿಗೆ ವಿರೋಧವನ್ನು ವ್ಯಕ್ತಮಾಡಲು ತಮ್ಮ ಪದಕಗಳನ್ನು ವಾಪಸುಕೊಟ್ಟರು. ಸೆಪ್ಟಂಬರಿನಲ್ಲಿ ಕಾಂಗ್ರೆಸ್ಸು ಖಿಲಾಫತ್ತಿನ ಅನ್ಯಾಯಗಳ ವಿರುದ್ಧ ಸರಕಾರದೊಡನೆ ಅಸಹಕಾರವನ್ನು ಹೂಡಬೇಕೆಂದು ಅವರು ಹೇಳಿದ್ದಕ್ಕೆ ಒಪ್ಪಿತು. ನಾಗಪುರದ ಕಾಂಗ್ರೆಸ್ಸು ನ್ಯಾಯವಾದ ಶಾಂತಸಾಧನಗಳಿಂದ ಪಡೆವ ಸ್ವರಾಜ್ಯವೇ ತನ್ನ ಗುರಿಯೆಂಬ ಅವರ ಗೊತ್ತುವಳಿಯನ್ನು ಸ್ವೀಕರಿಸಿತು. ೨೧ ರಲ್ಲಿ ಕೋಟಿ ಸದಸ್ಯರನ್ನು ಕಾಂಗ್ರೆಸ್ಸಿಗೆ ಮಾಡಿ ಕೊಡಲು, ಕೋಟಿ ರೂಪಾಯಿಗಳ ನಿಧಿಯನ್ನು ಕೂಡಿಸಿ ಕೊಡಲು ಮತ್ತು ೨೦ ಲಕ್ಷ ಚರಕಗಳನ್ನು ದೇಶದಲ್ಲೆಲ್ಲ ಬಳಕೆಗೆ ತೆಗೆದುಕೊಳ್ಳುವಂತೆ ಮಾಡಲು ಗಾಂಧಿಯವರು ಪಣತೊಟ್ಟರು. ಅದೇ ಜುಲೈಯಲ್ಲಿ ವಿದೇಶೀವಸ್ತ್ರಬಹಿಷ್ಕಾರವನ್ನುಸಾಧಿಸಿದರು. ಜನರು ಸಾವಿರಗಟ್ಟಲೆ ವಸ್ತ್ರಗಳ ಹೋಳಿಮಾಡಿದರು. ಡಿಸೆಂಬರದಲ್ಲಿ ಮಹಾತ್ಮರು ಕಾಂಗ್ರೆಸ್ಸಿನ ಸರ್ವಾಧಿಕಾರಿ ಪಟ್ಟವನ್ನೇರಿದರು. ಮರುವರುಷ ಬಾರ್ಡೋಲಿ ಸತ್ಯಾಗ್ರಹ ಪ್ರಾರಂಭಿಸುವೆನೆಂದು ವೈಸರಾಯರಿಗೆ ತಿಳಿಸಿದರು. ಅದೇ ನಾಲ್ಕುದಿನಗಳಲ್ಲಿ ಚೌರಿ ಚೌರ ದುರಂತ ನಡೆಯಿತು. ಜನರು ಸರಕಾರೀ ಅಧಿಕಾರಿಗಳನ್ನು ಕೊಂದು ಹಿಂಸಾಚಾರವೆಸಗಿದ್ದರ ವಿರುದ್ಧ ಉಪವಾಸವನ್ನು ಕೈಕೊಂಡು ಸತ್ಯಾಗ್ರಹವನ್ನು ನಿಲ್ಲಿಸಿಬಿಟ್ಟರು.

ಪೂರ್ಣಸ್ವರಾಜ್ಯದ ಘೋಷಣೆ

೧೯೨೨ ರಲ್ಲಿ ರಾಜದ್ರೋಹದ ಅಪಾದನೆಯ ಮೇಲೆ ೬ ವರ್ಷದ ಕಠಿಣ ಶಿಕ್ಷೆಗೆ ಗಾಂಧಿಯವರನ್ನು ಗುರಿಪಡಿಸಲಾಯಿತು.

೨೪ ರಲ್ಲಿ ಹಿಂದುಮುಸಲ್ಮಾನರ ಐಕ್ಯಕ್ಕಾಗಿ ೨೧ ದಿನಗಳ ಉಪವಾಸವನ್ನು ಕೈಕೊಂಡನು. ಅದೇ ಡಿಶಂಬರಿನಲ್ಲಿ ಬೆಳಗಾವಿಕಾಂಗ್ರೆಸಿಗೆ ಅವರು ಅಧ್ಯಕ್ಷರಾದರು. ೨೫ ರಲ್ಲಿ ಅಖಿಲಭಾರತ ಚರಕ ಸಂಘವನ್ನು ಸ್ಥಾಪಿಸಿದರು. ಅದೇ ಡಿಶಂಬರದಲ್ಲಿ ತಮ್ಮ ಆತ್ಮಚರಿತ್ರವಾದ "ಸತ್ಯಶೋಧನ" ವನ್ನು ಅವರು ಬರೆಯಲಾರಂಭಿಸಿದರು. ಅಲ್ಲದೆ ಆಶ್ರಮವಾಸಿಗಳ ಕೆಲವು ತಪ್ಪುನಡೆಗಳ ವಿರುದ್ಧ ೭ ದಿನಗಳ ಉಪವಾಸ ಮಾಡಿ ಮುಗಿಸಿದರು. ೨೮ ರಲ್ಲಿ ಮರುವರ್ಷದೊಳಗೆ ಅಧಿರಾಜ್ಯ ಸ್ಥಾನವನ್ನು ಭಾರತಕ್ಕೆ ಕೊಡದಿದ್ದರೆ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿಹೋರಾಡುವ ಗೊತ್ತುವಳಿಯನ್ನು ತಂದರು. ಆಗಲೇ ಲಾಹೋರು ಕಾಂಗ್ರೆಸ್ಸು ಪೂರ್ಣಸ್ವರಾಜ್ಯವೇ ತನ್ನ ಗುರಿಯೆಂದು ಗಾಂಧಿಯವರ ಸಲಹೆಯ ಮೇರೆಗೆ ಘೋಷಿಸಿತು. ೩೦ ರಲ್ಲಿ ಸತ್ಯಾಗ್ರಹ ನಡೆಸುವ ಸರ್ವಾಧಿಕಾರಿ ಸೇನಾನಿಯಾಗಿ ಗಾಂಧಿಯವರು ನಿಂತರು. ಅದೇ ಮಾರ್ಚದಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಅವರು ಆರಂಭಿಸಿದರು; ಸೆರೆಮನೆ ಕಂಡರು. ಜೊತೆಗೆ ಲಕ್ಷ ಜನರನ್ನೂ ತಮ್ಮೊಡನೆ ಒಳಗೊಯ್ದರು.

ದುಂಡು ಮೇಜಿನ ಪರಿಷತ್ತಿನಲ್ಲಿ

ಮಾರನೆಯ ವರ್ಷ ಅವರು ಅನಿರ್ಬಂಧವಾಗಿ ಬಿಡುಗಡೆಹೊಂದಿದರು. ವೈಸರಾಯರಾದ ಲಾರ್ಡ ಇರ್ವಿನ್ನರೊಡನೆ ಮಾತುಕತೆ ನಡೆಸಿ "ಗಾಂಧಿ–ಇರ್ವಿನ್ ಒಪ್ಪಂದ" ವನ್ನು ಸಾಧಿಸಿದರು. ೩೧ ರ ಆಗಸ್ಟಿನಲ್ಲಿ ೨ ನೆಯ ದುಂಡು ಮೇಜಿನ ಪರಿಷತ್ತಿಗೆ ಕಾಂಗ್ರೆಸ್ಸಿನ ಪ್ರತಿನಿಧಿತ್ವ ವಹಿಸಿ ಇಂಗ್ಲೆಂಡಿಗೆ ತೆರಳಿ ಪರಿಷತ್ತಿನಲ್ಲಿ ಭಾಗವಹಿಸಿ ಭಾರತಕ್ಕೆ ಮರ

(೪ ನೆಯ ಪುಟ ನೋಡಿರಿ)

ವಿವಿಧ ಪ್ರಪಂಚ

ಪೂರ್ವ ಮತ್ತು ಪಶ್ಚಿಮ

ಕಿಪ್ಲಿಂಗ್‌ಕವಿ ಹೇಳಿದ: "ಪೂರ್ವವು ಪೂರ್ವವೇ,ಪಶ್ಚಿಮವುಪಶ್ಚಿಮವೇ". "ಯೂಯಂ ಯೂಯಂ ವಯಂ ವಯಂ— ನೀವು ನೀವೇ, ನಾವು ನಾವೇ" ಎಂಬ ಅಸ್ಪೃಶ್ಯಕರಭಾವದಿಂದ ಅವನು ಪಾಶ್ಚಾತ್ಯ ಪೌರಸ್ತ್ಯರ ಪ್ರತ್ಯೇಕತೆಯನ್ನು ತನ್ನ ಕಾವ್ಯವಾಣಿಯಿಂದ ಅಜರಾಮರ ಮಾಡಬಯಸಿದ. ಆದರೆ ಇಂದಿನ ವಿಶ್ವವಿದ್ವಾಂಸರು ಭೇದವನ್ನೊಪ್ಪಿದರೂ "ಸೂತ್ರೇಮಣಿಗಣಾ ಇವ (Unity in Diversity)" ಭಿನ್ನ ಧರ್ಮಗಳೆಲ್ಲವನ್ನೂ ಹೊಂದಿಸಲೊಂದು ಏಕಸೂತ್ರತೆಯಿದೆಯೆಂದು ಸಾರಿದ್ದಾರೆ. ಹಾಗಿಲ್ಲವಾದರೆ ಚರಾಚರಗಳಲ್ಲಿ ಕಾಲಿಕ ಮತ್ತು ದೇಶಿಕ ಸಹಜೀವನವೇ ಅಸಾಧ್ಯವೆನಿಸುತ್ತಿತ್ತು. ಅದುದರಿಂದ ಕಿಪ್ಲಿಂಗನ ಮಾತು ಕೇವಲ ಬಾಹ್ಯಭೇದಗಳಿಗೆ ಅನ್ವಯಿಸುವುದೆಂದು ಸುಲಭವಾಗಿ ಸಿದ್ಧಾಂತಿಸಬಹುದೆಂದು ಶ್ರೀ ಓವೆನ್ ತಕ್ಕರರು ಅಭಿಪ್ರಾಯಪಡುತ್ತಾರೆ.

ಆ ಬಾಹ್ಯಭೇದಗಳಾವುವು? ಯಾವುವು ಗ್ರಾಹ್ಯ, ಯಾವುವು ಸತ್ಯ, ಯಾವುದು ದೇಶ ಕಾಲ ಸಂಬಂಧ ವ್ಯಕ್ತಿ ಎಂಬುದನ್ನು ವಿವೇಕಿಸುವುದು ಸ್ಪೃಹಣೀಯವಾಗಿದೆ.

೧ ಬುದ್ಧಿ— ರಕ್ತಕಣಗಳ ಗುಂಪು ಭಾರತೀಯರಿಗೂ ಬ್ರಿಟಿಶರಿಗೂ ಭಿನ್ನವಾಗಿದೆ. ಆದರೆ ಆ ಭೇದವುಬುದ್ಧಿಭೇದವನ್ನುಜನಿಸಲಾರದು; ಜನಿಸಿಲ್ಲ. ಬುದ್ಧಿ (Mentality) ಒಂದೇ.

೨ ಸಾಮಾಜಿಕ ಜೀವನ— ಇಲ್ಲಿಯ ಭೇದ ಭೌಗೋಲಿಕ ಇಲ್ಲವೆ ಹವಾಮಾನದಿಂದ ಹುಟ್ಟಿದ್ದು; ಸಂಸ್ಕಾರ, ಪರಂಪರೆಗಳಿಂದ ಬೆಳೆದು ಬಂದದ್ದು.

೩ ಮದುವೆ ಮತ್ತು ಲೈಂಗಿಕ ಸಂಬಂಧ— ಬ್ರಿಟಿಶ ಸ್ತ್ರೀಪುರುಷರು ತಡವಾಗಿ ಮದುವೆಯಾಗುವುದರಿಂದ ಅತೃಪ್ತರೂ, ಅಶಾಂತರೂ ಮುಂಗೋಪಿಗಳೂ, ಕಲಹಪ್ರಿಯರೂ ಆಗಿದ್ದಾರೆ. ಬೇಗ ಮದುವೆಯಾಗುವುದರಿಂದ ಮಾನಸಿಕ ಸುಖದಲ್ಲಿ ಅವರಿಗಿಂತ ಹಿಂದೀಯರೇ ಹೆಚ್ಚಿನವರಿದ್ದಾರೆ. ಆದರಿಲ್ಲಿ ಭಿನ್ನ ಕಾರಣಗಳಿಂದ ಪ್ರಜೋತ್ಪತ್ತಿ ಬಹಳ. ಅದಕ್ಕೆ ಅವರಿಂದ ಸಂತತಿ ನಿರೋಧ ಕ್ರಮಗಳನ್ನು ಕಲಿಯಬೇಕು.

೪ ದಾಕ್ಷಿಣ್ಯಕತೆ— ಈ ವಿಷ ಪೌರಸ್ತ್ಯರಲ್ಲೂ ಇದೆ ಪಾಶ್ಚಾತ್ಯರಲ್ಲೂ ಇದೆ. ಅಂತ ಸ್ವಲ್ಪ ಕಡಿಮೆ ಇರಬಹುದು ಪೌರಸ್ತ್ಯರಲ್ಲಿ—ಅಷ್ಟೆ.

೫ ಉದ್ಯೋಗಪರತ್ವ:- ಇದೂ ಒಂದೇ. ಆದರೆ ಬಡತನದಿಂದ ಹಿಂದೀಯರು ದುರ್ಬಲರಿದ್ದು, ಪರೋಪಕಾರಷ್ಟು ದುಡಿತ ಮಾಡಲಾರರು. ಆ ಬಡತನಕ್ಕೆ ಪೌಷ್ಟಿಕ ಆಹಾರದ ಕೊರತೆ, ಅದಕ್ಕೆ ಭೂಮಿ ಬಡವಾದದ್ದು ಕಾರಣ. ಅದಕ್ಕೆ ವೈಜ್ಞಾನಿಕ ಕೃಷಿ ಪದ್ಧತಿಯಿಲ್ಲದ್ದು ಬೀಜ; ಜನಸಂಖ್ಯೆ ಹೆಚ್ಚಿದ್ದು ಕಾರಣ. ಜನಸಂಖ್ಯೆಯ ನಿಯಂತ್ರಣದಲ್ಲಿ ಪಾಶ್ಚಾತ್ಯರು ಸಂತತಿನಿರೋಧ ಸಾಧನಗಳನ್ನು ಬಳಸಿದರೆ, ಪೌರಸ್ತ್ಯರು ದುಃಖ (ಎಂದರೆ ಮರಣಾಂತವಾದ ದಾರಿದ್ರ್ಯರೋಗಾದಿಗಳು)ವನ್ನು ಬಳಸುತ್ತಾರೆ. ನೈತಿಕ ಮನಃಸಂಯಮ ಎಲ್ಲೂ ಇಲ್ಲ.

೬ ಆಹಾರ, ಪಾನೀಯ ಮತ್ತು ಉಡಿಗೆ— ಇವುಗಳಲ್ಲಿಯ ಭೇದಗಳು ಕೆಲಸಕ್ಕೆ ಬರುವಂಥವಲ್ಲವೇ ಅಲ್ಲ ಕೇವಲ ಹವಾಮಾನ ಮತ್ತು ರೂಢಿ ಪರಂಪರೆಗಳೇ ಅವಕ್ಕೆ ಕಾರಣ.

೭ ಒಕ್ಕಟ್ಟು— ಕೌಟುಂಬಿಕ ಜೀವನದ ಮಾಧುರ್ಯ ಕಡಿಮೆಯಿರುವುದರಿಂದ ಪಾಶ್ಚಾತ್ಯರಲ್ಲಿ ಸಾಮಾಜಿಕ ನಿಲಯಗಳು ಬಹಳ. ಪೌರಸ್ತ್ಯರಲ್ಲಿ ತದ್ವಿರುದ್ಧ. ಅದಕ್ಕೆ ಭಾರತೀಯರಲ್ಲಿ ಅವರ ವ್ಯಕ್ತಿಪ್ರಧಾನ (ಆತ್ಮತತ್ವ) ತತ್ವಶಾಸ್ತ್ರವೂ ಕಾರಣವಾಗಿದೆ. ಸರಿಯಾದ ವಿದ್ಯಾಭ್ಯಾಸದಿಂದ ಈ ದೋಷವನ್ನು ನಾವು ತಿದ್ದಿಕೊಳ್ಳಬಹುದು. ಪ್ರಜಾಸತ್ತೆಯು ಅನುಭವವಿನ್ನೂ ನಮ್ಮ ಜನಕ್ಕೆ ಸರಿಯಾಗಿ ಲಭ್ಯವಾಗಿಲ್ಲ. ಅದರಿಂದಲೇ ಅವರು ಸ್ವಾತಂತ್ರ್ಯ ಭಾವವನ್ನು ಇನ್ನೂ ಕಲಿಯುವುದರಲ್ಲೇ ಇದ್ದಾರೆ.

೮ ಕಾಯದೆಯ ಆದಳಿತ— ಪಾಶ್ಚಾತ್ಯರಲ್ಲಿ ಕಾಯದೆಗೆ ಶರಣಾಗುವುದು ಕಡೆಯದಾಗಿ— ಇನ್ನಾವ ಬಗೆಯಿಂದಲೂ ಒಪ್ಪಂದವಾಗದಿದ್ದಲ್ಲಿ; ಹಿಂದುಸ್ತಾನದಲ್ಲಾದರೆ ಅದೇ ಮೊದಲು, ಇಷ್ಟಪಾದಸಾಧನ. ಮೊದಲಿಂದಲೂ ಕಾಯದೆಯೆಂದರೆ ದೊಡ್ಡವರ ಅಭೇದ್ಯ ಮಾತೆಂಬ ವಿಶ್ವಾಸ ಬೆಳೆದಿದ್ದು, ಅದರ ಬಗ್ಗೆ ಆಧುನಿಕವಾದ ರಾಜಕೀಯ (ಪ್ರಜಾಸತ್ತೆಯ) ಭಾವನೆ ತಳೆಯಲಾರದಿರುವುದು ಇದಕ್ಕೆ ಕಾರಣ. ತಕ್ಕ ಶಿಕ್ಷಣದಿಂದ ಇದನ್ನು ಮಾರ್ಪಡಿಸಬಹುದು.

೯ ಅಧಿಕಾರ ಪ್ರಭುತ್ವ— ಅಧಿಕಾರ ಅಪ್ರತಿಘಟನೀಯವೆಂಬುದು ಪೌರಸ್ತ್ಯರ ರಾಜಕೀಯ ಪರಂಪರೆಯಿಂದ ಬಂದುದು. ಇದಕ್ಕೆ ಉತ್ತರೋತ್ತರ ಬಲಿಷ್ಠ ವರ್ಗದಾಳಿಕೆಗೊಳಗಾಗಿ ಬಾಳಿದ್ದೇ ಕಾರಣ. ರಾಜಕೀಯ ಕ್ರಾಂತಿಯಿಂದ ಹಿಂದೆ ಪಾಶ್ಚಾತ್ಯರಲ್ಲಾದಂತೆ ಇಲ್ಲಾದರೂ ಈ ಮೂಢಭಾವನೆ ಮಾರ್ಪಡಬಹುದು. ಗುಲಾಮಗಿರಿಯ ಭಾವದಿಂದ ದೊಡ್ಡವರ ಪ್ರಶ್ನೀಕರಣ ಹೆಚ್ಚಿ, ಸಾಮಾಜಿಕ ಒಕ್ಕೂಟದಿಂದ ಕಾರ್ಯ ಸಾಧಿಸಿಕೊಳ್ಳುವ ಅಭ್ಯಾಸ ಇಲ್ಲದಾಗಿದೆ.

೧೦ ಭವಿಷ್ಯ—ಪ್ರಜಾಸತ್ತೆಯ ಭಾವನೆಗಳನ್ನು ಜನಮನದಲ್ಲಿ ಬಿಂಬಿಸಲು ನಾನಾ ಮುಖದಿಂದ ಪ್ರಯತ್ನಿಸುವುದರಿಂದ ಜನತೆಯಲ್ಲಿ ವಿಶಾಲ ಭಾವನೆ ಬೆಳೆದು, ವ್ಯಷ್ಟಿ ಸುಖಕ್ಕಿಂತ ಸಮಷ್ಟಿ ಸುಖ ಹೆಚ್ಚಿನದೆಂಬ ತಿಳುವಳಿಕೆ ಬಂದು, ಜಗತ್ಕುಟುಂಬಿಭಾವ ಸಾಧ್ಯವಾಗುವಂತೆ ಸುಧಾರಕ ವೀರರು ಹೆಣಗಬೇಕು. ಆಗ ಮಾತ್ರ ಜಗತ್ತಿನ ಭವಿಷ್ಯ ಉಜ್ವಲವಾದೀತು. ಕೃತಕ, ಸ್ಥೂಲ, ಬಾಹ್ಯ ಭೇದಗಳ ಬಗ್ಗೆ ಲಕ್ಷ್ಯ ಕಡಿಮೆಯಾಗಿ ಅಂತರಪ್ರೀತಿ ಬಂಧದಿಂದ ಮಾನವಕುಲ ಶಾಶ್ವತವಾಗಿ ಸುಖಶಾಂತಿಗಳಿಂದ ಬಾಳೀತು!

ನಮಸ್ಕಾರಗಳ ನಮೂನೆ!

ಪಾಶ್ಚಾತ್ಯರ Handshake (L. Dextrarum Junctio) ಹಸ್ತಾಂದೋಲನವು ನಮ್ಮಲ್ಲಿ ಕೇವಲ ಪಾಣಿಗ್ರಹಣದಲ್ಲಿ ಉಳಿದಿದೆಯೆನ್ನುತ್ತಾರೆ. ಇದು ನಾವೆಲ್ಲರೂ ಪ್ರಾಚೀನಕಾಲದಲ್ಲಿ ಆರ್ಯಕುಲದಲ್ಲಿ ಒಂದೆಡೆ ಕುಟುಂಬ ಭಾವದಿಂದ ವಾಸಿಸುತ್ತಿದ್ದುದನ್ನು ನೆನಪಿಗೆ ತಂದುಕೊಡುತ್ತದೆ. ಪಾಶ್ಚಾತ್ಯ, ಪಾರಸಿ ಮತ್ತು ಭಾರತೀಯ ಬಣಗಳಿಂದು ಬಹಳ ಕಾಲ ಬೇರೆ ಇದ್ದು ತಮ್ಮ ತಮ್ಮ ವಿಶಿಷ್ಟ ನಮಸ್ಕಾರ ಪದ್ಧತಿಗಳನ್ನು, ಪ್ರೀತ್ಯಾದರ ವ್ಯಕ್ತಮಾಡುವ ಕ್ರಮಗಳನ್ನು ರೂಢಿ ಮಾಡಿಕೊಂಡಿವೆ.

ಮುಸಲ್ಮಾನರಿಬ್ಬರು ಎದುರಾದರೆ "ನಿನಗೆ ಶಾಂತಿಯಿರಲಿ" ಎನ್ನುತ್ತಾರೆ. ಅರಬ್ಬಿಯಲ್ಲಿ ಚಿಕ್ಕವನು ಮೊದಲು ದೊಡ್ಡವನಿಗೆ ಹಾಗೆ ಹೇಳಿ ಸಲಾಮು ಮಾಡುತ್ತಾನೆ. ಅದಕ್ಕೆ ಉತ್ತರವಾಗಿ ಎದುರಾದವನು 'ನಿನ್ನ ಮೇಲೆ ಶಾಂತಿಯಿರಲಿ' ಎನ್ನುತ್ತಾನೆ. (೧ ನೆಯವ—ಅಸ್ಸಲಾಮು ಅಲೈಕಂ, ೨ ನೆಯವ—ಅಸ್ಸಲಾಮ್). ಮುಸಲ್ಮಾನನು ಮುಸಲ್ಮಾನೇತರರನ್ನು ಕಂಡರೆ ಉರ್ದುವಿನಲ್ಲಿ 'ಅದಬ್ ಅರಜ್' ಎನ್ನುತ್ತಾನೆ.

ನಮಸ್ತೇ, ನಮಸ್ಕಾರ, ಎಂದು ಕೈ ಮುಗಿವುದು, ಹಿಂದು ಪದ್ಧತಿ. ಅದರ ಅರ್ಥ 'ನಾನು ನಿನಗೆ ಬಾಗುತ್ತೇನೆ' ಎಂದು. ಚಿಕ್ಕವನು ಮೊದಲು ಹೇಳುತ್ತಾನೆ. ಅನಂತರ ಎದುರಿನ ದೊಡ್ಡವನು ಹಾಗೇ ಉತ್ತರಿಸುತ್ತಾನೆ. ಹೆಚ್ಚು ಗೌರವ ತೋರುವಾಗ 'ಪ್ರಣಾಮ' ಎನ್ನುತ್ತಾರೆ ಎಂದು ಸಾಧಾರಣವಾಗಿ ಶ್ರೀ ದತ್ತರು ಹೇಳಿದ್ದಾರೆ.

ಗ್ರೀಕರು ಹಿಂದೆ 'ನೀನು ಸಂತೋಷವುಳ್ಳವನಾಗಿರು' ಎಂದು ಎದುರುಗೊಳ್ಳುತ್ತಿದ್ದರು. ರೋಮನ್ನರು 'ನಿನಗೆ ಆರೋಗ್ಯವಿರಲಿ' ಎನ್ನುತ್ತಿದ್ದರು. ಇದರಂತೆ ಭಾರತದಲ್ಲೂ ನಮಸ್ಕರಿಸಿದ ನಂತರ 'ಮಿಜಾಜ ಶರೀಫ್—ನೀನು ಚೆನ್ನಾಗಿರುವೆಯೊ?' ಎಂದು ಕೇಳುತ್ತಾರೆ.

ಪಾಶ್ಚಾತ್ಯರಲ್ಲಿಯಂತೆ ಬೆಳಿಗ್ಗೆ, ಅಪರಾಹ್ನ ಮತ್ತು ಸಂಜೆಗಳಲ್ಲಿ ಸುಪ್ರಭಾತ, ಸ್ವಪರಾಹ್ನ ಮತ್ತು ಸುಸಂಧ್ಯೆ ಎಂದು ಮುಂತಾಗಿ ಕಾಲಭೇದ ಸೂಚಕ ವಾಕ್ಯಗಳಿಂದ ನಮಸ್ಕರಿಸುವದು ಭಾರತದ ರೂಢಿಯಲ್ಲ. ಹಳೆಯ ಕಾಲದ ರೋಮನ್ನರು ಸೇರಿದಾಗ 'ಸಾಲ್ವೆ' ಎಂದೂ ಹೊರಡುವಾಗ 'ವಾಲೆ' ಎಂದೂ ಹೇಳುತ್ತಿದ್ದರಂತೆ.

ಸನಾತನ ಹಿಂದು ಪದ್ಧತಿಯಂತೆ ಚಿಕ್ಕವನು ಹಿರಿಯರಿಗೆ, ಪೂಜ್ಯರಿಗೆ ನಮಸ್ಕರಿಸಿದರೆ ಅವರ ಆಶೀರ್ವಾದ 'ಚಿರಂಜೀವ' ಎಂಬುದು. ಬಂಗಾಳದ ಮುದುಕಿಯರು ಅದೇ ಮಾತನ್ನು 'ನನ್ನ ಪತಿಯಲ್ಲಿ ಎಷ್ಟು ಕೂದಲುಗಳಿವೆಯೋ ಅಷ್ಟು ವರ್ಷ ಬಾಳು—ಅಮಾರ್ ಮಾಥಾಯ್ ಜೊತೋ ಚೂಲ್ ತೊತೋದಿನ್ ಬಾಚೋ' ಎಂದು ಹೇಳುತ್ತಾರೆ. ಎದುರುಗೊಳ್ಳುವಾಗ ಪಾಶ್ಚಾತ್ಯರು ತಲೆಯುಡುಪನ್ನು ತೆಗೆವ ಪದ್ಧತಿ ಹಿಡಿದರೆ ತದ್ವಿರುದ್ಧವಾಗಿ ಹಿಂದುಗಳಲ್ಲಿ (ಶುಭ ಸಂದರ್ಭಗಳಲ್ಲಿ) ತಲೆ ಖಾಲಿಯಿದ್ದರೆ ಕೂಡಲೆ ಯಾವುದಾದರೊಂದು ಶಿರಸ್ತ್ರಾಣವನ್ನು ಧರಿಸಿಕೊಳ್ಳುತ್ತಾರೆ.

ಕೃತಜ್ಞತೆಯನ್ನು ಸಮರ್ಪಿಸುವಾಗ 'ಥ್ಯಾಂಕ್ಸ್' ವಿನಂತೆ ಉರ್ದುವಿನಲ್ಲಿ 'ಶುಕ್ರಿಯಾ' ಎಂದೂ ಬಂಗಾಳಿಯಲ್ಲಿ 'ಧನ್ಯವಾದ'ವೆಂದೂ ಕರ್ನಾಟಕದ ಕೆಲವೆಡೆಗಳಲ್ಲಿ 'ಅಭಾರಿ'ಯಾಗುವದೆಂದೂ ಹೇಳಲಾಗುತ್ತದೆ.

ಇವೆಲ್ಲ ನಾಗರಿಕ ಸಮಾಜದ ಸಾಮಾಜಿಕ ನಡತೆಗಳು. ಇವು ದೇಶ, ಕಾಲ, ಸಮಾಜ, ಲಿಂಗಗಳಲ್ಲಿ ಭಿನ್ನ ಭಿನ್ನವಿರುತ್ತವೆ. ಆದರೆ ಸಾಮಾಜಿಕ ಜೀವನದಲ್ಲಿ ಇವುಗಳ ಪ್ರಾಮುಖ್ಯ ಹೆಚ್ಚು. ಏಕೆಂದರೆ, ಇವುಗಳಿಂದಲೆ ಒಬ್ಬ ಮನುಷ್ಯನ ಸಭ್ಯಾಸಭ್ಯತೆ (ಸಂಸ್ಕೃತಿ)ಗಳನ್ನು ನಿರ್ಣಯಿಸಲಾಗುತ್ತದೆ. ಅದುದರಿಂದ ವಿದ್ಯಾರ್ಥಿಗಳು ಇವನ್ನು ಚಿಕ್ಕಂದಿನಿಂದ ಅಭ್ಯಸಿಸಿದರೆ ಮುಂದೆ ಒಳ್ಳೆಯ ನಾಗರಿಕರೆನಿಸಬಹುದು ಅವರ Conduct— ನಡೆನುಡಿ ನೆಟ್ಟಗಿದೆಯೆಂದು ತನ್ನ ಒಡನಾಡಿಗಳಿಂದ, ಇತರರಿಂದ ಮೆಚ್ಚಿಗೆ ಪಡೆಯಬಹುದು, ಅದರಿಂದ ಕೃತಾರ್ಥರಾಗಿ ಬಾಳಬಹುದು.

ಚೀನೀ ಸೈನಿಕನ ಆದರ್ಶ ಪತ್ನಿ

ಸೈನ್ಯ ಖಾತೆಯಲ್ಲಿ ಕೆಲಸ ಮಾಡುವ ಕರ್ನಲ್ ಇಲ್ಲವೆ ಜನರಲ್ಲನನ್ನು ಮದುವೆಯಾಗಬೇಕಾದರೆ ಚೀನೀ ಹುಡುಗಿಯು ಮೊದಲು ಬೂಟು ತಯಾರು ಮಾಡುವುದನ್ನು ಕಲಿಯಬೇಕಂತೆ! ಇದೇಕೆಂದರೆ—ಚೀನೀ ಪೇಟೆಗಳಲ್ಲಿ ಸಿಕ್ಕುವ ಅತಿ ಬೆಲೆಯ ಬೂಟುಗಳು ಬೇಗ ಹಾಳಾಗಿ ಹೋಗುವವು. ಶ್ರೀ ಟಿ. ಪಿ. ವ್ಯಾಂಗರು ಕೇಳಿದಾಗ ಕರ್ನಲ್ ಲಿಷ್ಯಾಂಗಕಾನ್‌ರು, "ನಾವು ಹರದಾರಿಗಟ್ಟಲೆ ನಡೆಯಬೇಕಾಗುತ್ತದೆ, ನೋಡಿರಿ; ಪೇಟೆಯ ಬೂಟು ೨ ವಾರ ಬರುವುದಿಲ್ಲ. ಇಲ್ಲಿ ನೋಡಿ, ೩ ವರ್ಷಗಳಲ್ಲಿ ಬೂಟು ಹೊಲಿಯುವದನ್ನು ಕಲಿತು ನನ್ನ ಹೆಂಡತಿ ಎಷ್ಟು ಮಾಟವಾಗಿ ಈ ಬೂಟುಗಳನ್ನು ತಯಾರಿಸುತ್ತಿದ್ದಾಳೆ" ಎಂದರಂತೆ.

೨ ನೆಯದಾಗಿ, ಸೈನ್ಯದಲ್ಲಿ ನಾನಾಮಟ್ಟದ ಜನರಿರುತ್ತಾರೆ. ಅವರೆಲ್ಲರೊಡನೆ ಸರ್ದಾರರ ಗೀಯವಾಗಿ ನಡೆದುಕೊಳ್ಳುವದನ್ನು ಸೈನಿಕ ಪತ್ನಿ ತಿಳಿದುಕೊಂಡಿರಬೇಕು. ಏಕೆಂದರೆ ಕರ್ನಲ್ ಹೇಳಿದಂತೆ ಅಧಿಕಪ್ರಸಂಗಿಯಾದ ಒಬ್ಬಾಕೆ ಊಟದ ಕಾಲದಲ್ಲಿ ಒಬ್ಬ ಸೈನ್ಯಾಧಿಕಾರಿಯ ಊಟದ ರೀತಿಯನ್ನು ಹಾಸ್ಯ ಮಾಡಿ, ಅವನಿಗೆ ಅದರಿಂದ ಸಿಟ್ಟು ಬಂದು ಅವನು ಬೈಯತೊಡಗಿ, ಅವನಿಗೂ ಅವಳ ಗಂಡನಿಗೂ ಕದನವೇ ಆಯಿತು. ಎಂಥ ಸಂಗತಿಗಳು ನಡೆದುಬಿಡುತ್ತವೆ!

೩ ನೆಯ ಲಕ್ಷಣವೆಂದರೆ, ವಿದ್ಯಾವತಿಯಾಗಿರುವದು. ಸಾಮಾನ್ಯವಾಗಿ ಕದನದ ಕಟ್ಟಾಳುಗಳಿಗೆ ವಿದ್ಯಾಭ್ಯಾಸಕ್ಕೆ ಅವಕಾಶವೂ ಕಡಿಮೆ, ಲಕ್ಷ್ಯವೂ ಅಷ್ಟಕ್ಕಷ್ಟೆ. ಆ ಕೊರತೆಯನ್ನು ಅವರು ತಮ್ಮ (ವಿದ್ಯಾವತಿಯಾದ) ಹೆಂಡತಿಯರ ಮೂಲಕ ತುಂಬಿಕೊಳ್ಳಲಾಶಿಸುತ್ತಾರೆ. ಒಂದು ವಿಚಿತ್ರದ ಸಂಗತಿಯೆಂದರೆ ಚೀನೀ ಸೈನ್ಯಾಧಿಕಾರಿಗಳು ತಮ್ಮ ಹೆಂಡತಿಯರಿಗೆ ಅಡಿಗೆ ಬರುವುದೋ ಇಲ್ಲವೋ ಎಂಬುದರ ಬಗ್ಗೆ ಅಷ್ಟೇನೂ ಲಕ್ಷ್ಯ ಕೊಡುದಿಲ್ಲ. ಏಕೆಂದರೆ, ಸಿಕ್ಕಲ್ಲಿ ತಿರುಗಿ ಸಿಕ್ಕಿದ್ದು ತಿಂದು ಅವರಿಗೆ ರೂಢಿ. ಅಡಿಗೆ ಬಂದರೆ ಚೆನ್ನು, ಬಾರದಿದ್ದರೆ ಹೇಗೆ ಬೇಯಿಸಿ ಹಾಕಿದರೂ ಸರಿ; ಅದನ್ನು ಅವರು ಸುಮ್ಮನೆ ತಿಂದು ಹೊರಬೀಳುತ್ತಾರೆ.

ಹೀಗೆ ಹುಡುಗಿಯರು ಸಾಧಾರಣ ("Pass the mark") ಇದ್ದರೆ ಸಾಕೆಂದು ಸೈನಿಕರು ಒಪ್ಪುತ್ತಾರೆ. ಹುಡುಗಿಯರು ಕಡಿಮೆಯಾದ ಕಡೆ ಅವರಪ್ಪಂದಿರು ಅಳಿಯಂದಿರಿಂದ ಕಂಜಾ ಬಟ್ಟೆ ಮುಡು ಸುಲಿಯುತ್ತಾರೆಂದು ಪ್ರಸಿದ್ಧಿಯಿದೆ. ಒಮ್ಮೆ ಒಬ್ಬ ಕನ್ಯಾರ್ಥಿಗೆ ೫ ಲಕ್ಷ ಡಾಲರು ತೆಗೆ ಎಂದನಂತೆ ಒಬ್ಬ (ನಾಟಕ ಸದೃಶ) ಕನ್ಯಾಪಿತ!

ಮೂಲ ನಿವಾಸಿಗಳು

ಪುರಾತನ ಕೋಲಕುಲಕ್ಕೆ ಸೇರಿದವರು ಮೊದಲು ಗಂಗೆಯ ಕೊಳ್ಳದಲ್ಲಿದ್ದರು; ಇಂದು ಅವರ ಕುಲವನ್ನು ಅಸಾಂ, ಮಲಯ ಮತ್ತು ಶಾಂತ ಸಾಗರದ ದ್ವೀಪ ಇವುಗಳ ಕಾಡುಗಳಲ್ಲಿ ಕಾಣಬಹುದು. ಅದರಂತೆ ಓರೆಯಾನ್ ಕುಲದವರು ಸಂತಾಲ ಪರಗಣದಲ್ಲಿ ತಾವೇ ತಾವಾಗಿ ಇದ್ದಾರೆ.

ಮುಂಡರೂ ಓರೆಯನರೂ ರಾಂಚಿ ಜಿಲ್ಲೆಯಲ್ಲಿದ್ದಾರೆ. ಹೋಗಳು ಸಿಂದ ಭೂಮಿಯಲ್ಲೂ ಸಂತಾಲರು ಮನ ಭೂಮಿಯಲ್ಲೂ ನೆಲಸಿದ್ದಾರೆ. ಸಂತಾಲರ ಮುಖ್ಯ ಕಾಣ್ಬರುವದು ಛೋಟಾ ನಾಗಪುರದ ಸಂತಾಲ ವಿಭಾಗದಲ್ಲಿ. ಈ ಮೂಲ ನಿವಾಸಿಗಳ ವಂಶಜರು ಮಧ್ಯಪ್ರದೇಶ, ಮದರಾಸು, ಗಂಗಪುರ, ಪಟ್ನಾ, ಬಾಣಪುರ ದೇಶದ ಸಂಸ್ಥಾನಗಳಲ್ಲೂ ಇದ್ದಾರೆಂದು ಕ್ರಿಶ್ಚನ್ ಮಿಶನ್ ಪತ್ರಿಕೆಯು ಸುದ್ದಿಗಾರರು ತಿಳಿಸುತ್ತಾರೆ.

ಈ ಮೂಲನಿವಾಸಿಗಳು ಪ್ರಕೃತಿಪೂಜಕರು. ಅವರು ತಮ್ಮ ಸತ್ತ ಹಿರಿಯರನ್ನು ಪೂಜಿಸುವರು. ಹಳೆಯ ಕಾಲದ ಗ್ರೀಕರಂತೆ ಪ್ರಕೃತಿಯಿಂದು ಒಂದೊಂದು ದೇವತೆಯಿದೆಯೆಂದು ಇವರು ನಂಬುತ್ತಾರೆ. ಅರಣ್ಯ ಪ್ರದೇಶಗಳಲ್ಲೂ, ಪರ್ವತಾಗ್ರಗಳಲ್ಲೂ, ಮರದ ಗುಂಪುಗಳಲ್ಲೂ ಅದೇ ಪ್ರಕಾರ ಅಧಿಷ್ಠಾನ ದೇವತೆಗಳಿವೆಯೆಂದು ಅವರ ಶ್ರದ್ಧೆ. ತಮ್ಮ ಗ್ರಾಮ ಮತ್ತು ಮನೆಗಳಲ್ಲಿ ಹಿರಿಯರ ಆತ್ಮಗಳು ನೆಲಸಿರುತ್ತವೆಂದು ಅವರ ತಿಳುವಳಿಕೆ. ತಾವು ವಾಸವಾಗಿದ್ದ ಮನೆಯ ಒಂದು ಅಂಶವನ್ನು ಮುಚ್ಚಿ ಇಡುತ್ತಾರೆ. ಏಕೆಂದರೆ ಅದರಲ್ಲಿ ಗ್ರಾಮದೇವತೆಗಳು ವಾಸವಾಗಿರುತ್ತವೆಂದು ಅವರ ನಂಬಿಕೆ. ಇವೇ ಅವರ ದೇಗುಲಗಳು!

ಮೂಲ ನಿವಾಸಿಗಳಲ್ಲನೇಕರಿಂದು ಕ್ರೈಸ್ತರಾಗಿದ್ದಾರೆ. ಅವರಲ್ಲಿ ೨ ಲಕ್ಷ ೮೫ ಸಾವಿರ ಜನರು ರಾಂಚಿ ಜಿಲ್ಲೆಯಲ್ಲಿದ್ದಾರೆ. ಅವರ ವಿದ್ಯಾಭ್ಯಾಸ ಮತ್ತು ಸಾಮಾಜಿಕ ಉನ್ನತಿಯ ಬಗ್ಗೆ ಮಿಶನರಿಗಳು ಬಹಳ ದುಡಿದಿದ್ದಾರೆ. ಮತ್ತೆ ಅನೇಕ ಮೂಲ ನಿವಾಸಿಗಳು ಹಿಂದುಗಳಾಗಿ ಉಳಿದಿದ್ದಾರೆ. ಮೂಲ ನಿವಾಸಿಗಳು ನೃತ್ಯಪ್ರಿಯರು, ಮದ್ಯಪಾಯಿಗಳು ಮತ್ತು ಬೇಟೆಗಾರರು. ಅವರ ಪ್ರತಿಯೊಂದು ಹಳ್ಳಿಯಲ್ಲೂ ನೃತ್ಯಾಂಗಣವೊಂದಿದೆ; ಬಹಳ ಸಲ ಅಂಥ ಅಂಗಣವು ದೊಡ್ಡದೊಂದು ನೆರಳೀವ ಮರದಡಿಯಿರುತ್ತದೆ. ಅಲ್ಲಿ ಕುಳಿತುಕೊಳ್ಳಲು ಸುತ್ತಲೂ ಕಲ್ಲುಕಟ್ಟೆಗಳನ್ನಿಟ್ಟಿರುತ್ತಾರೆ. ಅವರು ಕಷ್ಟಿಗರು; ಅವರೆ ಒಳ್ಳೆಯ ದುಡಿಮೆಗಾರರು. ತಲೆ ತಲಾಂತರದ ದುಡಿತದಿಂದ ಅವರು ಎಷ್ಟೋ ಗದ್ದೆಗಳನ್ನು ನಿರ್ಮಿಸಿದ್ದಾರೆ, ಅನೇಕಟ್ಟು ಕಟ್ಟಿದ್ದಾರೆ, ಕಾಡುಗಳನ್ನು ಕಡಿದು ಬಯಲು ಮಾಡಿದ್ದಾರೆ.

ಅವರ ಅರ್ಥಪದ್ಧತಿಯು ಸುಮಾರು Feudalistic ಉತ್ತರೋತ್ತರ ಪರಿಸ್ಥಿತಿಯದಾಗಿದೆಯೆನ್ನಬಹುದು. ಕುಟುಂಬಗಳಿಂದ ಕೂಡಿದ ಹಳ್ಳಿಗೊಬ್ಬ ಧರ್ಮಗುರು ಮತ್ತೊಬ್ಬ ತಂದೆ ದೊರೆಯು. ಗ್ರಾಮಗಳ (ಸುಮಾರು ೧೨) ಗುಂಪಿಗೊಬ್ಬ ಮೇಲಧಿಕಾರಿ, ಆ ಗುಂಪುಗಳ ಗುಂಪಿಗೊಡೆಯನಾದವನು ಜಮೀನುದಾರ ಮಹಾರಾಜ ಇಲ್ಲವೆ ಅವರ ಮಾತಿನಲ್ಲಿ 'ಮಾಂಕಿ'. ಜಮೀನುದಾರನ ಗೇಣಿ ವಸೂಲು ಮಾಡಬಹುದಲ್ಲದೆ ಜಮೀನು ಬಿಡುವ ಮುಂತಾದ ಯಾವುದರಲ್ಲೂ ಅವನು ಕೈ ಹಾಕಲಾರನು. ಜಮೀನಾದರೂ ಮೂಲಪುರುಷನ ಸಂತಜರಿಗಲ್ಲದೆ ಅನ್ಯರಿಗೆಂದೂ ಹೋಗದು.

ಒಕ್ಕಲುತನದಲ್ಲಿ ತೊಂದರೆ ಬರಲು ನೇಲಿನ ಪದ್ಧತಿಯು ಕಾಲಕ್ರಮೇಣ, ರಾಜಶಾಸನ, ದುಡ್ಡನ್ನು ಬಡ್ಡಿಗೆ ಕೊಡುವವರ ಕಿರುಕುಳ ಮುಂತಾದವುಗಳಿಂದ ನಷ್ಟಹೊಂದುತ್ತ ಹೋಗಿರುವುದೇ ಕಾರಣ. ಆದರಿಂದ ಎಷ್ಟೋ ಸಲ ಅವರು ಜಮೀನುದಾರ ಮತ್ತು ಸಾಲಗಾರರ ಮೇಲೆ ದಂಗೆಯೆದ್ದು ಬಹಳ ತೊಂದರೆ ಕೊಟ್ಟದುಂಟು. ಸಾಲಗಾರನ ಕೈ ಕಡಿದು ರೂಪಾಯಿಯಲ್ಲಿ ಸಾಲ್ಯಾಕೆ ಸಂದಿತೆಂದು, ಅನಂತರ ಕಾಲು, ಅನಂತರ ತಲೆ ಹೀಗೆ ಕಡಿದು ರೂಪಾಯಿಯಲ್ಲಿ ೧೬ ಆಣೆಗಳೂ ಸಂದವೆಂದು ಅವರು ಸೇಡು ತೀರಿಸಿಕೊಂಡದುಂಟು. ಅವರು ಹೀಗೆ ದಂಗೆಯೇಳಲು ಕಾಯದೆಗಳಲ್ಲಿಯ ದೋಷಗಳು ಆಡಳಿತದಲ್ಲಿಯ ಕುಂದು ಕೊರತೆಗಳಿಂದ ಅವರಿಗಾದ ಹಿಂಸೆಗಳೂ ಕಾರಣವೆನಿಸಿದವು. ಆದರೀಗ ಆಡಳಿತಗಾರರಿಗೆ ಅವರು ಶಾಂತಿಪ್ರಿಯರೂ ತಟಸ್ಥರೂ ಇರುವರೆಂಬ ಅರಿವಾಗಿರುವದು. ಕೈಲಾದಷ್ಟನ್ನು ಸಹಿಸಿಕೊಳ್ಳುತ್ತಾರೆ; ಮಿತಿಮೀರಿದರೆ ಅದನ್ನು ವಾಗಿ ಪ್ರತಿಭಟಿಸಿ ಬಿಡುತ್ತಾರೆ!

ಮಹಾತ್ಮರ ವಿಶ್ವಾದರ್ಶ ಜೀವನ

[೨ನೆಯ ಪುಟದಿಂದ ಮುಂಬರಿದುದು]

...ಆಗ ವಿಚಾರಣೆಯಿಲ್ಲದೆ ಅವರನ್ನು ಸೆರೆಯಲ್ಲಿಡಲಾಯಿತು. ೩೨ ರಲ್ಲಿ ಜಾತೀಯ ಮತಗಣನೆಯ ವಿರುದ್ಧ ಅಮರಣ ಉಪವಾಸ ಹಿಡಿದು ಹರಿಜನರ ಬಗ್ಗೆ ಅವರ ಮತವನ್ನು ಸರಕಾರ ಅಂಗೀಕರಿಸಿದ ಮೇಲೆ ಉಪವಾಸವನ್ನು ಮುಗಿತಾಯಗೊಳಿಸಿದರು.

ದಲಿತೋದ್ಧಾರ

ಮಹಾತ್ಮರು ೧೯೩೩ ರಲ್ಲಿ ಹಿಂದಿ ಮತ್ತು ಇಂಗ್ಲೀಷಿನಲ್ಲಿ 'ಹರಿಜನ'ವನ್ನು ಹೊರಡಿಸತೊಡಗಿದರು. ಅದೇ ಮೇ ೮ ರಲ್ಲಿ ಆತ್ಮಶುದ್ಧಿಗಾಗಿ ೨೧ ದಿನಗಳ ಉಪವಾಸವನ್ನು ಹಿಡಿದರು. ಆಗ ಅವರನ್ನು ಅನಿರ್ಬಂಧವಾಗಿ ಜೈಲಿನಿಂದ ಬಿಡುಗಡೆ ಮಾಡಲಾಯಿತು; ಸತ್ಯಾಗ್ರಹವನ್ನು ೬ ವಾರಗಳವರೆಗೆ ನಿಲ್ಲಿಸಿ ಸರಕಾರವನ್ನು ಅದು ಕೊಟ್ಟ ಪುರಾಜ್ಞೆಗಳನ್ನು ತಿರುಗಿ ತೆಗೆದುಕೊಳ್ಳಲು ಕೇಳಿಕೊಂಡರು. ಅನಂತರ ಹರಿಜನೋದ್ಧಾರಕ್ಕಾಗಿ ದೇಶಪರ್ಯಟನವನ್ನು ಪ್ರಾರಂಭಿಸಿ ನಿಧಿ ಮುಂತಾದವನ್ನು ಸಂಗ್ರಹಿಸಿ, ೩೪ ರ ಅಕ್ಟೋಬರಿನಲ್ಲಿ ರಾಜಕಾರಣದಿಂದ ನಿವೃತ್ತಿ ಹೊಂದುವ ತಮ್ಮ ನಿರ್ಧಾರವನ್ನು ಅವರು ಪ್ರಕಟಿಸಿದರು. ಹಳ್ಳಿಗರ ಉದ್ಧಾರಕ್ಕೆಂದು ಅನಂತರ ಅವರು ಮಧ್ಯಪ್ರಾಂತದ ಸೇವಾಗ್ರಾಮದಲ್ಲಿ ತಮ್ಮ ವಸತಿಯನ್ನು ಕಲ್ಪಿಸಿಕೊಂಡರು; ವರ್ಧಾ ಯೋಜನೆಯನ್ನು ಶಿಕ್ಷಣ ಪರಿಷತ್ತಿನ ಅಧ್ಯಕ್ಷಪೀಠದಿಂದ ಮಂಡಿಸಿದರು.

೩೯ರಲ್ಲಿ ರಾಜಕೋಟೆ ಸತ್ಯಾಗ್ರಹದಲ್ಲಿ ಉಪವಾಸ ಮಾಡಿ ಉದ್ದೇಶವನ್ನು ಮಹಾತ್ಮರು ಸಾಧಿಸಿ ಜನತೆಯ ಸ್ವಾತಂತ್ರ್ಯರಣೋತ್ಸಾಹವನ್ನು ಇಮ್ಮಡಿಗೊಳಿಸುವ ಒಂದು ನಿದರ್ಶನವನ್ನು ಮುಂದಿಟ್ಟರು.

ಅನಂತರ ೨ನೆಯ ಮಹಾಯುದ್ಧ ಆರಂಭವಾಯಿತು. ವೈಯಕ್ತಿಕ ಸತ್ಯಾಗ್ರಹವನ್ನು ಅವರು ನಿರ್ದೇಶಿಸಿ ಸರಕಾರೀ ನಿಯಂತ್ರಣವನ್ನು ಪ್ರತಿಭಟಿಸಲು 'ಹರಿಜನ'ವನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಪ್ರಷ್ಟದೆ ತಮ್ಮ ಇಷ್ಟದಂತೆ ೪೦ರಲ್ಲಿ ಕಾಂಗ್ರೆಸ್ಸಿನ ಮುಖಂಡತ್ವವನ್ನು ಬಿಟ್ಟುಕೊಟ್ಟರು.

'ಚಲೇಜಾವ್' ಚಳವಳ

೧೯೪೨ ರಲ್ಲಿ 'ಹರಿಜನ' ವನ್ನು ಪುನಃ ಪ್ರಾರಂಭಿಸಿ, ಸರ್. ಸ್ಟಾಫರ್ಡ್ ಕ್ರಿಪ್ಸರನ್ನು ಸಂಧಿಸಿ ರಾಜತಂತ್ರವಿಶಾರದರಾದ ಗಾಂಧಿಯವರು ಕ್ರಿಪ್ಸರ ಕೊಡುಗೆಯನ್ನು "ಅವಧಿ ಮೀರಿದ ಹುಂಡಿ" ಯೆಂದು ಕರೆದರು; ಮತ್ತು ಮೇ ತಿಂಗಳಲ್ಲಿ ಬ್ರಿಟಿಶರಿಗೆ ಭಾರತದಿಂದ ತೊಲಗಿರೆಂದು ಕೇಳಿಕೊಂಡರು. ಆಗಸ್ಟ ೮ ರಲ್ಲಿ ಚಲೇಜಾವ ಗೊತ್ತುವಳಿಯನ್ನು ಕಾಂಗ್ರೆಸ್ಸು ಸ್ವೀಕರಿಸಿತು. ಆಗ ಅವರನ್ನು ಸೆರೆ ಹಿಡಿದು ಪುಣೆಯಲ್ಲಿರುವ ಆಗಾಖಾನರ ಅರಮನೆಯಲ್ಲಿಡಲಾಯಿತು. ೪೩ ರ ಫೆಬ್ರುವರಿಯಲ್ಲಿ ೨೧ ದಿನಗಳ ಉಪವಾಸವನ್ನು ಮಾಡಿ, ಕಸ್ತೂರಿಬಾಯಿಯವರನ್ನು ೪೪ ರ ಫೆಬ್ರುವರಿಯಲ್ಲಿ ಕಳೆದುಕೊಂಡು ಶೋಕಸಾಗರದಲ್ಲಿ ಮುಳುಗಿದ್ದಾಗ ಅನಿರ್ಬಂಧವಾಗಿ ಅವರನ್ನು ಸೆರೆಮನೆಯಿಂದ ಬಿಡಲಾಯಿತು. ಅವರ ೭೫ ನೆಯ ವರ್ಧಂತಿಯ ದಿನ ಕಸ್ತೂರಿಬಾಯಿ ನಿಧಿಗಾಗಿ ೧೦೦ ಲಕ್ಷ ರೂಪಾಯಿಗಳ ಹಮ್ಮಿಣಿಯನ್ನು ಅವರಿಗೆ ಅರ್ಪಿಸಲಾಯಿತು.

೧೯೪೫ ರಲ್ಲಿ ಸಿಮ್ಲಾ ಪರಿಷತ್ತಿನಲ್ಲಿ ಪುನಃ ಗಾಂಧಿಯವರು ಕಾಂಗ್ರೆಸ್ಸಿನ ಸಲಹೆಗಾರರಾದರು. ಬಂಗಾಲದ ಹಳ್ಳಿಗಳಲ್ಲಿ ಆರ್ತರ ದುಃಖಶಮನಕ್ಕಾಗಿ ಅವರು ಸಂಚರಿಸಿ ಬಂದರು.

ಸ್ವತಂತ್ರ ಭಾರತದಲ್ಲಿ ಮಹಾತ್ಮಾ ಗಾಂಧಿಯವರು

೧೯೪೭ ನೆಯ ಆಗಸ್ಟ ೧೫ ರಲ್ಲಿ ಭಾರತಕ್ಕೆ ಅಧಿರಾಜ್ಯತ್ವವು ಪ್ರಾಪ್ತಿಯಾಯಿತು. ದೇಶದ ವಿಭಜನೆಗೆ ಅವರು ಕಡೆತನಕ ವಿರೋಧಿಗಳಿದ್ದರು. ಪೂರ್ವ ಬಂಗಾಲದಲ್ಲಿ ನಡೆದ ಪಾಕಿಸ್ತಾನಿಗಳ ಹಾವಳಿಯನ್ನು ಕಂಡು ಅವರು— "ನಾನು ನನ್ನ ಬಾಳಿನಲ್ಲಿ ಎಂದೆಂದೂ ಇಂಥ ಕಗ್ಗತ್ತಲನ್ನು ಕಂಡಿಲ್ಲ" ಎಂದು ಉದ್ಗರಿಸಿದರು. ಅನಂತರ ಅವರು ಇತಿಹಾಸಪ್ರಸಿದ್ಧವಾದ ತಮ್ಮ ಹಳ್ಳಿಯ ಸುತ್ತಾಟವನ್ನಾರಂಭಿಸಿದರು. ೪೭ ರ ಮಾರ್ಚ ೨೩ ರಲ್ಲಿ ದಿಲ್ಲಿಗೆ ತೆರಳಿ ಏಶಿಯ ರಾಷ್ಟ್ರಗಳ ಪರಿಷತ್ತಿನಲ್ಲಿ ಭಾಷಣ ಮಾಡಿ, ಅದರಲ್ಲಿ "ನಮ್ಮ ಕಾಲದಲ್ಲಿ ನಾವು ಏಕೀಕೃತ ಜಗತ್ತನ್ನು ಸಾಧಿಸಬೇಕು" ಎಂದು ನುಡಿದರು. ಇದೇ ಮಾತನ್ನು ಜಗತ್ಪ್ರಸಿದ್ಧರಾದ ಲೂಯಿ ಫಿಶರ್, ಹಾಲ್ಡೇನ್ ಮುಂತಾದವರು ಸಾರಿ ಹೇಳಿದ್ದಾರೆ.

ಪ್ರಾರ್ಥನಾ ಸಭೆ

ಇವರ ನಡುವೆ ಪ್ರತಿ ನಿತ್ಯ ಸಂಜೆ ಕೆಲ ಕಾಲ ಪ್ರಾರ್ಥನಾ ಸಭೆ ನಡೆಸುವುದು ಗಾಂಧಿಯವರ ಪದ್ಧತಿಯಾಗಿ ಹೋಯಿತು. ರಾಮಧ್ಯಾನ, ಜಗತ್ತಿನ ಪ್ರಮುಖ ಧರ್ಮ ಗ್ರಂಥಗಳಿಂದ ಮಂತ್ರ ಪಠನ, ನಿರಾಶ್ರಿತರಿಗಾಗಿ ಒಡವೆ ವಸ್ತುಗಳ ಸಂಗ್ರಹ, ಪಾಮರರ ಸಂಶಯ ಪರಿಹಾರ, ಜಾತೀಯ ಸೌಹಾರ್ದ ಸಂಘಟನ ಇತ್ಯಾದಿಗಳು ಆ ಪ್ರಾರ್ಥನಾಸಭೆಗಳಲ್ಲಿ ನಿತ್ಯವೂ ನಡೆದವು.

ಕಲಕತ್ತದಲ್ಲಿ, ಬಿಹಾರದಲ್ಲಿ, ದಿಲ್ಲಿಯಲ್ಲಿ ಎಲ್ಲೆಂದರಲ್ಲಿ ತಿರುಗಿ ನಯಭಯಗಳಿಂದ, ಉಪವಾಸ ಉಪದೇಶಗಳಿಂದ ಹಿಂದು ಮುಸ್ಲಿಮರಲ್ಲಿ ಶಾಂತಿ ನೆಲೆಸುವಂತೆ ಮಾಡಲು ಹೋರಾಡಿ ಅವರು ವಿಜಯಶಾಲಿಗಳಾದರು. ಜಗತ್ತಿನ ಮುತ್ಸದ್ದಿಗಳು ಗಾಂಧಿಯವರ ಈ ಸಾಮಪ್ರಯೋಗದಿಂದ ಮುಗ್ಧರಾಗಿಹೋದರು. ಗಾಂಧಿಯವರ ಹೆಸರು ದಿಗ್ದಿಗಂತವನ್ನೆಲ್ಲ ವ್ಯಾಪಿಸಿತು. ಈಗಲೂ ಅವರು ಯೇಸುಕ್ರಿಸ್ತನ ಅವತಾರವೆಂದು ನಂಬುವವರಿದ್ದಾರೆ. ಏಕೆಂದರೆ, ಏಸುವಿನಲ್ಲಿ ಎಂತಹ ಕ್ಷಮೆ, ಧೃತಿ, ಶ್ರದ್ಧೆ, ತ್ಯಾಗಬುದ್ಧಿ, ಸತ್ಯ, ಪ್ರಜ್ಞೆಗಳಿದ್ದವೋ ಅಂಥವೇ ಗಾಂಧಿಯವರಲ್ಲೂ ಇರುವುದನ್ನು ಜಗತ್ತು ಪ್ರತ್ಯಕ್ಷವಾಗಿ ಕಾರ್ಯರೂಪದಲ್ಲಿ ಕಂಡಿದೆ.

ಮಹಾಪುರುಷನಲ್ಲಿರತಕ್ಕ ಅಮೇಯವಾದ ಶೀಲ, ಶ್ರದ್ಧೆ, ಧೈರ್ಯ, ದೃಢಬುದ್ಧಿ, ಔದಾರ್ಯ, ಸಾಹಸಾದಿ ಗುಣಗಳಿರುವುದರಿಂದಲೇ ಗಾಂಧಿಯವರಿಂದು ಯುಗಪುರುಷರೆನಿಸಿಕೊಂಡಿದ್ದಾರೆ. ಪರದೇಶಕ್ಕೆ ಭಾರತೀಯರು ಹೋದರೆ ಗಾಂಧಿಯವರ ದೇಶದಿಂದ ಬಂದವರೆಂದರೆ ಅರ್ಥವಾಗುತ್ತಿತ್ತಲ್ಲದೆ ಭಾರತದಿಂದ ಎಂದರೆ ಎಷ್ಟೋ ಸಾಮಾನ್ಯ ಮನುಷ್ಯರಿಗೆ ಅರ್ಥವಾಗುತ್ತಿದ್ದಿಲ್ಲವಂತೆ. ಎಂದಮೇಲೆ ಗಾಂಧಿಯವರ ಅಕಲಂಕ ಕೀರ್ತಿಯ ಮಹಿಮೆಗೆ ಎಲ್ಲೆಯುಂಟೆಂದು ಹೇಳಲಳವೆ? ಚರ್ಚಿಲ್ಲರು ಪಂಜಾಬಿನ ಗಲಭೆಯನ್ನು ಬೊಟ್ಟು ಮಾಡಿ ತೋರಿಸಿ ಹಿಂದುಸ್ತಾನದಲ್ಲಿ ಬ್ರಿಟಿಶರಾಳಿಕೆಯಿಲ್ಲದಿದ್ದರೆ ಹೀಗೇ ಆಗುವುದು ಎಂದು ಹಂಗಿಸಿದ್ದಕ್ಕೆ ಗಾಂಧಿಯವರು ಎಷ್ಟು ಪಟುತ್ವದಿಂದ 'ನಮ್ಮದು ನಾಲ್ಕು ಕೋಟಿಯ ನಾಡಲ್ಲ' ನಲವತ್ತು ಕೋಟಿಯ ನಾಡು; ಇಂಥ ಎಷ್ಟೋ ಗಲಭೆಗಳು ಸತ್ತಾಂತರವಾದಾಗ ನಡೆವುದು ಸ್ವಾಭಾವಿಕ' ಎಂದು ಅವರ ಬಾಯಿ ಮುಚ್ಚಿಸಿದರು. ರಾಜಕಾರಣದಲ್ಲಿ ಅಪ್ರತಿಮರಿದ್ದು ಧರ್ಮದ ಸೂಕ್ಷ್ಮಗತಿಯಲ್ಲಿ ಅಪಾರ ಜ್ಞಾನವುಳ್ಳವರಾಗಿದ್ದು ಕ-ಜೋದ್ಯಗಾರರ ಬಾಯಿಗೆ ಮುದ್ರೆಯೊತ್ತುವುದರಲ್ಲಿ ಗಾಂಧಿಯವರು ನಿಸ್ಸೀಮರೆನಿಸಿದ್ದರು. ಇಂಥ ಸಕಲ ಸದ್ಗುಣೋಪೇತರಾದ ಮಹಾತ್ಮರನ್ನು ಕೊಲೆಮಾಡಲು ಮನಸ್ಸು ಮಾಡಿದ, ಕೊಲೆಗೆ ಕೈಯಿತ್ತಿದ ಪಶುಸದೃಶ ವ್ಯಕ್ತಿಯನ್ನು ನೋಡಿ ನಗಬೇಕೋ ಅಳಬೇಕೋ ತಿಳಿಯದಾಗಿದೆ! ಏನೇ ಆಗಲಿ,

"ಯಾವತ್ತಿಷ್ಠಂತಿಗಿರಯೋ
ಯಾವತ್ಪುಣ್ಯನದೀನದಾಃ
ಗಾಂಧಿನಃ ಪಾವನ ಯಶಃ
ತಾವಜ್ಜಗತಿ ವರ್ಧತಾಂ ॥

ಮರೆಯಾದ ಮಹಾತ್ಮನಿಗೆ

೧

ಬಂದುದೇ ಭಾರತಕೆ
ದೌರ್ಭಾಗ್ಯ, ಅಕಟಕಟ,
ಅಳಿದುದೇ ಮಾನವತೆ ಮನುಜಕುಲಕೆ!?
ಕನ್ನೆಲ್ಲ ತನುಮನವ
ಮುಡುಪಿಟ್ಟು ದೇಶಕ್ಕೆ
ದುಡಿದ ಮಾಪುರುಷಂಗೆ ಇದುವೆ ಗತಿಯು!

೨

ಜಾತಿಮತ ಪಂಥಗಳ-
ನೆಲ್ಲಕುಳಿತುಳಿದಟ್ಟಿ
ದೇವತ್ವಕೇರಿದಗೆ ಇಂಥ ಗತಿಯೆ!
ಭಾರತದ ಕಣ್ಮಣಿಯೆ
ಶಾಂತಿಯೊಸಗೆಮುನಿಗೆ
ನಿನ್ನಂತೆ ಬೀರುವರದಾರದಿನ್ನು?

೩

ಎಪ್ಪತ್ತೆ ಒಂಬತ್ತು
ಬರಸಗಳ ಪರಿಯಂತ
ಒಂದೆಸಮನೀದುದಿದೆ ಗಾಂಧಿ ದೇವ!
ಹಿಂಸೆಯೆಂಬುದ ನರಿಯೆ,
ಕರ್ಮಯೋಗಿಯು ನೀನು
ಸತ್ಯವೊಂದನೆಎತ್ತಿ ಸಾರುತಿರ್ದೆ!

೪

ತ್ಯಾಗ ಸೇವಾಫಲದೆ
ಬಿಡುಗಡೆಯ ನೀತಂದೆ
ಜೀವನದ ಆದರ್ಶ ಎತ್ತಿಹಿಡಿದೆ!
ಮಾನವನ ಪೈಶಾಚ
ವೃತ್ತಿಯಿಂ ಬೇಸತ್ತು
ಅಗಲಿದೆಯ ಎನ್ನಿಂದ ಪರಲೋಕಕೆ

೫

ದಶದಿಶೆಯ ಬೆಳಗಿಸುವ
ಓಗಾಂಧಿ ಗುರುವರನೆ,
ಒಂದಾದೆಯಾ ಇಂದು ಶೂನ್ಯದೊಡನೆ!
ನಿನ್ನಂತೆ ಇನ್ನಾರು
ನೀಡುವರು ಸದ್ಬೋಧೆ?
ಇನ್ನೆಲ್ಲಿ ಶಾಂತಿಯಿಹುದೀ ಜಗಕ್ಕೆ?

೬

ಗುಂಡಿಕ್ಕಿ ಕೊಂದಡೆಯು
ಕೊಂದನೇ ನಿನ್ನನ್ನು?
ಜಡದೇಹವಳಿದಡೆಯು ಅಳಿವೆ ನಿನಗೆ?
ನಿನ್ನಾತ್ಮ ನಿನ್ನಮರ
ವಾಣಿಯಿಂದೀ ಜಗವ
ಹರಸುತ್ತಿರಲು ಬೇಡುವೆನು ಪೂಜ್ಯಗಾಂಧೀ!

೭

ಮಹಿಮಾತ್ಮ ಮೋಹನನೆ
ಕರ್ಮ ಚಕ್ರವೆ, ಗಾಂಧಿ,
ಓಂ ಶಾಂತಿ, ಓಂ ಶಾಂತಿ, ನಿನ್ನಾತ್ಮಕೆ!

—ಮೂರ್ತಿ,
ಸೋದರಸಂಘ, ಶಿವಮೊಗ್ಗ.

- ಮಹಾತ್ಮರ ಕೊಲೆಯಲ್ಲಿ **ಹಿಂದೂ ಮಹಾಸಭೆಯ ಹೆಸರು** ಮುಂದೆ ಬಂದ **ಕಾರಣ ಸುರತದ ಸ್ಥಾನಿಕ** ಹಿಂದು ಮಹಾಸಭೆಯನ್ನು **ವಿಸರ್ಜಿಸಿರುವದಾಗಿಯೂ** ಅ. ಭಾ. ಹಿಂದು **ಮಹಾಸಭೆಯ** ಕಾರ್ಯಕಾರೀ ಮಂಡಲದ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರುವದಾಗಿಯೂ ಸುರತ ಹಿಂದುಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ. ಮಹೇಂದ್ರ ದಿವಾಣರು ಸಾರಿದ್ದಾರೆ.

ದುಃಖಾಷ್ಟಕ

೧

ಭಾರತದ ಶುಭ್ರಾಭ್ರ ಕೀರ್ತಿಕ-
ರಂಡವೊಡೆದಿತೆ ಸೋದರ!
ಭಾರತದ ಸತ್ಯಪ್ರದೀಪಕ
ನಂದಿತೇ ಹಾಯ್ ಸೋದರ!
ಭಾರತದ ದಿವ್ಯಾತ್ಮ ತನ್ನವ-
ತಾರ ಮುಗಿಸಿತೆ ಸೋದರ!
ಭಾರತದ ಸತ್ಯಾದ್ರಿಶೃಂಗವು-
ರುಳ್ದುದೇ ಹೇ ಸೋದರ!

೨

ಸತ್ಯವೇ ಸರ್ವಸ್ವವೆಂದ ಯ-
ತೀಶ್ವರನ ಕೊಲೆಗೆಯ್ದನೇ!
ಸತ್ಯರಂಗದದಮ್ಯ ಸತ್ಯಾ-
ಗ್ರಹಿಯ ಜೀವವನೊಯ್ದನೆ!
ಸತ್ಯಧರ್ಮದ ವೀರಯೋಧನ
ಪಂಥತನದಲಿ ಕೊಂದನೆ!
ಸತ್ಯದಮರ ಜ್ಯೋತಿಯೆತ್ತಿದ
ಕೈಗೆ ಸಾವನು ತಂದನೆ!

೩

ಭಾರತದ ಚಾರಿತ್ರ್ಯಕಿಂತಾ
ದ್ವಿಜಹತಕ ಮಸಿಬಳಿದನೆ!
ಭಾರತೀಯರ ಹೃದಯಕಮಲವ
ಚಿವುಟಿ ಥಟ್ಟನೆ ಹಿಳಿದನೆ!
ಭಾರತೋದ್ಧಾರಕನನನ್ಯಾ-
ಯಾಗ್ನಿಗಾಹುತಿಯಿತ್ತನೆ!
ಭಾರತ ಸ್ವಾತಂತ್ರ್ಯವೀರನ
ಕೊಂದು ಬದುಕಿಯು ಸತ್ತನೆ!

೪

ಹಿಡಿದಹಿಂಸೆಯ ಜೀವಕೋಟಿಯ
ಹೊರೆದ ಜನಕನು ಶತ್ರುವೆ?
ಬಿಡದಹಿಂಸೆಯ ಪಾಪಿಗಳನು-
ದ್ಧರಿಸಿದಾತನು ಶತ್ರುವೆ?
ದುಡಿದಹಿಂಸೆಗೆ ಸರ್ವವನ್ನ-
ರ್ಪಿಸಿದ ಚಾಗಿಯು ಶತ್ರುವೆ?
ನಡೆದಹಿಂಸೆಯ ಹಾದಿಯಲಿ ದೇ-
ವತ್ವಕೇರ್ದವ ಶತ್ರುವೆ?

೫

ಹಿಂದುಮುಸ್ಲಿಮರೊಂದುಗೂಡಿಸಿ
ನೇಹವೆರೆದವ ದುಷ್ಟನೆ?
ಹಿಂದಕಟ್ಟಿ ಸಹಸ್ರರಿಪುಗಳ
ನಾಡಕಾಯ್ದವ ದುಷ್ಟನೆ?
ಹಿಂದುಧರ್ಮದ ಶಾಂತಿದೂತ್ಯವ
ವಹಿಸಿದಾತನರಿಷ್ಟನೆ?
ಹಿಂದುಗಳ ಹಿರಿಮಣಿ ದಯಾಘನ
ಗಾಂಧಿ ಹಿಂದುಗನಿಷ್ಟನೆ?

೬

ಹಿಂದುಗಳ ದುರ್ಭಾಗ್ಯಕಿತಿಮಿತಿ-
ಯುಂಟೆ ಹೇಳೈ ಸೋದರ?
ಹಿಂದುಳಿದವರ ತಬ್ಬಲಿತನ-
ಕ್ಕೆಲ್ಲೆಯುಂಟೇ ಸೋದರ?
ಹಿಂದೆ ಕುರುಶಾರ್ದೂಲ ಭೀಷ್ಮನ
ಕೊಂದ ಪಂಥನ ಮೀರಿಸಿ
ಇಂದು ಭಾರತಪಿತನ ಕೊಂದನೆ
ಪಾಪಿ ಗುಂಡನು ಹಾರಿಸಿ!

೭

ಅಕಟಕಟ ದುಃಖಾಬ್ಧಿವೀಚಿ ಹೃ-
ದಂತರಾಳವ ಹೊಕ್ಕಿತೋ!
ಅಕಟ ಸಂತಾಪಾಗ್ನಿ ಕೇಸುರಿ-
ಗೊಂಡು ದೆಸೆಗಳ ನೆಕ್ಕಿತೋ!
ವಿಕಟಚರಿತನನೆಣಿಸಿ ರೋಮಗ-
ಳೆದ್ದು ತಿಸುಳಗಳಾದವೋ!
ಅಕುಟಿಲನ ಮರಣಕ್ಕೆ ಮರುಗಿದ
ಕರಣ ಹಸುಳೆಗಳಾದವೋ!

೮

ಸತ್ತುಬದುಕಿದ ದಿವ್ಯಮಾನವ-
ನಾತ್ಮ ಸ್ವ... ...ತ್ತಿದೆ!
ಸತ್ತುಸಾಯ... ...ಕಾಯದ
ಕಾಂತಿ ಕಜ್ಜಳ ಕಳೆದಿದೆ!
ಸತ್ಯಮುಕ್ತ ಮಹಿಂಸೆ ಮಂತ್ರಗ-
ಳುಲಿಯಲೈ ದಶದಿಶೆಯಲಿ!
ಸತ್ಯಧರ್ಮ್ಮಪ್ರವರ್ತಕಾರಿಯಾದ ಮ-
ಹಾತ್ಮ ತಣಿವನು ಕಾಣಲಿ!

—ಬಿ. ಎಚ್. ಶ್ರೀಧರ

ಪೋಲೀಸರು ಈ ನಾಲ್ಕು ದಿನ ನಡೆಸಿದ ಶೋಧದಿಂದ ಮಹಾತ್ಮರ ಕೊಲೆಯ ಒಳಸಂಚಿನ ಸುಳುವು ಹತ್ತಿದಂತಾಗಿದೆ. ಇದರಲ್ಲಿ ಅಂಗವಿದ್ದ ಬಗ್ಗೆ ಗೌಪ್ಯವನ್ನು ಕಾಯಲಾಗುವದು. ಈ ಸಂಚಿಗೆ ಮುಂಬಯಿಯು ಕೇಂದ್ರವಾಗಿದೆಯೆಂದೂ ತಿಳಿದಿದೆ. ಮುಂಬಯಿ ಪೋಲೀಸರು ಈ ಬಗೆಗೆ ಬೃಹತ್ ಮುಂಬಯಿಯಲ್ಲಿಯೂ ಶೋಧ ನಡೆಸಿ ೨೨ ಜನರನ್ನು ಬಂಧಿಸಿದ್ದಾರೆ

ಸಂಪಾದಕೀಯ ಟೀಕಾಟಿಪ್ಪಣಿಗಳು

ಅಮಾನುಷ ಕೃತ್ಯ

ಭಾರತದ ಭಾಗ್ಯವಿಧಾತರಾಗಿದ್ದ ಮಹಾತ್ಮಾ ಗಾಂಧಿಯವರನ್ನು ಭಾರತೀಯನೊಬ್ಬನು ಗುಂಡಿಕ್ಕಿ ಕೊಂದನೆಂಬ ಸುದ್ದಿಯನ್ನು ಕೇಳಿ ಇಡೀ ಪ್ರಪಂಚವೆ ಪರಿತಪಿಸುತ್ತಿದೆ. ದೇಶವಿದೇಶಗಳಿಂದ ಬರುತ್ತಿರುವ ದುಃಖೋದ್ಗಾರಗಳನ್ನು ನೋಡಿದರೆ ಮಹಾತ್ಮರು ಎಷ್ಟು ಶ್ರೇಷ್ಠ ವಿಭೂತಿಗಳಾಗಿದ್ದರೆಂಬುದು ಗೊತ್ತಾಗುವದು. ಕಳೆದ ಅರ್ಧ ಶತಮಾನದಲ್ಲಿ ಅವರು ಭಾರತಕ್ಕೆ, ಇಡೀ ವಿಶ್ವಕ್ಕೆ, ಮಾನವ ಕುಲಕ್ಕೇನೇ ಮಾಡಿದ ಸೇವೆ ಅಪಾರವಾಗಿದೆ. ಅನ್ಯಾದೃಶವಾಗಿದೆ. ವಕೀಲರಾಗಿದ್ದು ಬೇಕಾದಷ್ಟು ಹಣ ಸಂಪಾದಿಸಿ ಸುಖ ವಿಲಾಸಗಳಲ್ಲಿ ಮಗ್ನರಾಗುವ ಅವಕಾಶವಿದ್ದರೂ ಎಲ್ಲವನ್ನೂ ತೃಣೀಕರಿಸಿ ಮಾನವಸೇವೆಯೇ ಇತಿಕರ್ತವ್ಯವೆಂದು ಭಾವಿಸಿ ಗಾಂಧಿಯವರು ಸರ್ವಸ್ವವನ್ನು ಅದರಲ್ಲಿಯೆ ಸೂರೆ ಮಾಡಿದರು. ದಕ್ಷಿಣ ಆಫ್ರಿಕೆಗೆ ವಕೀಲಿಗಾಗಿ ಹೋದಾಗಿನಿಂದಲೆ ಅವರ ಈ ಸಾರ್ವಜನಿಕ ಸೇವೆ ಪ್ರಾರಂಭವಾಗಿ ಕೊನೆಯ ಗಳಿಗೆಯವರೆಗೆ ಒಂದೇ ಸವನೆ ನಡೆಯಿತು. ಲೋಕಮಾನ್ಯರ ನಿಧನದ ನಂತರವಂತೂ ಅವರು ಭಾರತದ ಅನಭಿಷಿಕ್ತ ಅರಸರಂತೆ ಪೂಜ್ಯರಾಗಿ, ದಾಸ್ಯದಲ್ಲಿ ಬಳಲುತ್ತಿದ್ದ ಭಾರತವನ್ನು ಉದ್ಧರಿಸಿ ಸ್ವಾತಂತ್ರ್ಯ ಶಿಖರಕ್ಕೆ ಮುಟ್ಟಿಸಿದರು. ಬ್ರಿಟನ್‌ದಂಥ ಬಲಾಢ್ಯ ರಾಷ್ಟ್ರವು ಗಾಂಧೀಜಿಯ ಸತ್ಯಾಗ್ರಹಾಸ್ತ್ರಕ್ಕೆ ಮಣಿದು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕಾಯಿತು. ಸತ್ಯ, ಅಹಿಂಸೆ, ತ್ಯಾಗ ಮೊದಲಾದ ಅನುಪಮ ಗುಣಗಳ ಪಾಠವನ್ನು ಭಾರತೀಯರಿಗೆಲ್ಲ ಸ್ವತಃ ಆಚರಿಸಿ ಬೋಧಿಸಿ ಭಾರತದ ಕೀರ್ತಿಧ್ವಜವನ್ನು ದಿಗ್ದಿಗಂತದಲ್ಲಿ ಮೊಳಗಿಸಿದರು. ಇಂಥ ಅಸಾಮಾನ್ಯ ವ್ಯಕ್ತಿಯನ್ನು ಕೊಲೆಗಡಕನು ಗುಂಡಿಕ್ಕಿ ಕೊಂದುದು ಅತ್ಯಂತ ಅಮಾನುಷವು. ಗಾಂಧಿಯವರ ನಿಧನದಿಂದ ಭಾರತಕ್ಕೆ ತುಂಬಿಬರಲಾರದಷ್ಟು ಹಾನಿಯಾಗಿದೆ. ಭಾರತ-ಪಾಕಿಸ್ತಾನಗಳಲ್ಲಿ ಶಾಂತಿ ಸೌಹಾರ್ದ ಸ್ಥಾಪನೆಗೆ ಭಯಂಕರ ಆಘಾತವಾಗಿದೆ. ಆದರೆ ಈಶ ಸಂಕಲ್ಪವನ್ನು ತಪ್ಪಿಸುವವರಾರು ?

ಶಾಂತಿಯ ಆವಶ್ಯಕತೆ

ಮಹಾತ್ಮರ ಕೊಲೆಗಡಕನು ಹಿಂದುಮಹಾಸಭೆಯವನು, ರಾಷ್ಟ್ರೀಯ ಸ್ವಯಂ ಸೇವಕ ಸಂಘದವನು, ಚಿತ್‌ಪಾವನ ಬ್ರಾಹ್ಮಣನು, ಮಹಾರಾಷ್ಟ್ರೀಯನು ಎಂದು ಮುಂತಾಗಿ ತಿಳಿದುಕೊಂಡು ಈ ಎಲ್ಲ ಸಂಸ್ಥೆಗಳ ಜಾತೀಯ ಕಾರ್ಯಕರ್ತರ ಮೇಲೆ ಸೇಡು ತೀರಿಸಿಕೊಳ್ಳುವ ಪ್ರವೃತ್ತಿ ಅಲ್ಲಲ್ಲಿ ಕಂಡು ಬಂದುದು ಅತ್ಯಂತ ದುರ್ದೈವದ ಸಂಗತಿ. ಕೊಲೆಗಡಕನ ಸಮಾಚಾರ ತೆಗೆದುಕೊಳ್ಳಲು ನ್ಯಾಯಸಮ್ಮತ ಮಾರ್ಗ ತೆರೆದಿದೆ. ಸರಕಾರವು ಆ ಕೆಲಸವನ್ನು ಮಾಡುತಿದೆ. ಪ್ರತಿಯೊಬ್ಬ ನಾಗರಿಕ ಕಾಯದೆಯ ಕಕ್ಷೆಯನ್ನು ಮೀರಿ ಮನಬಂದಂತೆ ವರ್ತಿಸಹತ್ತಿದರ ಎಲ್ಲೆಲ್ಲಿಯೂ ಅರಾಜಕತೆ ಬೆಳೆದು ಗುಂಡರ ಪುಂಡಾಟಿಕೆಗೆ ಅವಕಾಶವುಂಟಾಗುವದು. ದೇಶದಲ್ಲಿಯ ಶಾಂತಿ ಸೌಹಾರ್ದತೆಗೆ ಭಂಗವುಂಟಾಗುವದು. ಆದುದರಿಂದ ಪ್ರತಿಯೊಬ್ಬರು ಈ ದುರ್ಧರ ಪ್ರಸಂಗದಲ್ಲಿ ತಾಳ್ಮೆಯಿಂದ ಇದ್ದುಕೊಂಡು ಯಾವದೇ ಬಗೆಯ ಹಿಂಸಾಚಾರಕ್ಕೆಳಸದೆ ಸರಕಾರ ಕೈಕೊಂಡ ಶಾಂತಿ ಪ್ರಸ್ಥಾಪನೆಗೆ ಸಹಾಯ ಸಲ್ಲಿಸಬೇಕು. ಮಹಾತ್ಮರಂಥ ಶ್ರೇಷ್ಠ ವಿಭೂತಿಗಳ ಕೊಲೆಮಾಡಿದುದು ಅತ್ಯಂತ ಹೇಯಕೃತ್ಯವಾದ್ದರಿಂದ ಪ್ರತಿಯೊಬ್ಬ ಭಾರತೀಯ ಉರಿದೆದ್ದು ಈ ಕೊಲೆಯ ಒಳಸಂಚಿನಲ್ಲಿ ಪಾಲುಗಾರರಾದವರ ಮೇಲೆ ಸೇಡು ತೀರಿಸಿಕೊಳ್ಳಲು ಪ್ರವೃತ್ತನಾಗುವದು ಸ್ವಾಭಾವಿಕ. ಆದರೆ ಹೀಗೆ ಮಾಡುವದರಿಂದ ಲಾಭಕ್ಕಿಂತ ಹಾನಿಯೇ ಹೆಚ್ಚಾಗುವದು. ಈ ಒಳಸಂಚನ್ನು ಹೊರಗೆಡಹಿ ತಪ್ಪಿತಸ್ಥರನ್ನೆಲ್ಲ ಶಿಕ್ಷಿಸಲು ಸರಕಾರ ಬದ್ಧಪ್ರತಿಜ್ಞವಾಗಿದೆ. ಭಾರತೀಯರಿಗೆಲ್ಲ ಹಾಗೆ ಆಶ್ವಾಸನವನ್ನೂ ಕೊಡಲಾಗಿದೆ. ಆದುದರಿಂದ ಭಾರತೀಯರು ಯಾವ ಬಗೆಯ ಹಿಂಸಾಚಾರಕ್ಕೆ ಎಳ್ಳಷ್ಟೂ ಅವಕಾಶ ಕೊಡದೆ ಶಾಂತರೀತಿಯಿಂದ ಇದ್ದು ಸರಕಾರಕ್ಕೆ ಸಹಾಯ ಮಾಡಬೇಕು. ಇದುವೆ ಮಹಾತ್ಮರಿಗಾಗಿ ಭಾರತೀಯರು ಕೊಡತಕ್ಕ ಶ್ರದ್ಧಾಂಜಲಿ.

ಸಂಪೂರ್ಣ ಸಹಕಾರ

ಹಿಂದುಸ್ಥಾನದಲ್ಲಿ ಹಬ್ಬಿದ ಈ ಅಶಾಂತಿಯನ್ನು ಹತ್ತಿಕ್ಕಿ ರಾಷ್ಟ್ರಘಾತಕರನ್ನು ಸದೆಬಡೆಯಲು ಸರಕಾರವೀಗ ಕಾರ್ಯಪ್ರವೃತ್ತವಾಗಿದೆ. ಜಾತೀಯ ಐಕ್ಯಕ್ಕೆ ಭಂಗ ತರುತಿರುವ ರಾಷ್ಟ್ರೀಯ ಸ್ವಯಂ ಸೇವಕ ದಳವನ್ನು ಆಕ್ರಮಗೊಳಿಸಿ ಅದರ ರಾಷ್ಟ್ರ ಘಾತಕ ಚಟುವಟಿಕೆಗಳನ್ನೆಲ್ಲ ಹತ್ತಿಕ್ಕಲು ಸರಕಾರವು ಅಣಿಯಾಗಿದೆ. ಆದರೀ ಕಾರ್ಯವು ಯಶಸ್ವಿಯಾಗುವಂತೆ ಭಾರತೀಯರು ಎಲ್ಲ ಬಗೆಯ ಸಹಕಾರವನ್ನು ನೀಡುವದು ಅತ್ಯವಶ್ಯವಾಗಿದೆ. ಸಾಮ್ಯವಾದೀ ಪಕ್ಷದ ಧುರೀಣರಾದ ಜಯಪ್ರಕಾಶ ನಾರಾಯಣರು ಈಗಾಗಲೆ ನೆಹರು ಸರಕಾರಕ್ಕೆ ಸಹಕಾರ ಸಲ್ಲಿಸುವ ಆಶ್ವಾಸನ ಕೊಟ್ಟಿದ್ದಾರೆ. ಇದು ಅಭಿನಂದನೀಯ ಮತ್ತು ಅನುಕರಣೀಯವಾದುದು. ಹಿಂದುಸ್ತಾನದಲ್ಲಿಯ ಉಳಿದ ಬೇರೆ ಬೇರೆ ಪಕ್ಷ ಸಂಘ ಸಂಸ್ಥೆಗಳವರೂ ಇದೇ ಬಗೆಯ ಸಹಕಾರದ ಆಶ್ವಾಸನವನ್ನು ಕೊಟ್ಟು ದೇಶದಲ್ಲಿ ಹಬ್ಬಿದ ಅಶಾಂತಿಯನ್ನು ಅಡಗಿಸಿ ಶಾಂತಿ ಸೌಹಾರ್ದ ಸ್ಥಾಪನೆಗೆ ಅವಕಾಶವನ್ನುಂಟು ಮಾಡುವದು ಅತ್ಯವಶ್ಯವಾಗಿದೆ. ರಾಷ್ಟ್ರ ಘಾತಕ ಕಾರ್ಯಗಳಲ್ಲಿ ತೊಡಗಿದವರನ್ನು ಹತ್ತಿಕ್ಕಲು ಸರಕಾರ ಈಗಾಗಲೆ ಕ್ರಮ ಕೈಕೊಂಡಿದೆ. ಆ ಕಾರ್ಯವನ್ನು ಸರಕಾರಕ್ಕೇ ಬಿಟ್ಟುಗೊಟ್ಟು ಶಾಂತಿ ಸ್ಥಾಪನೆಯ ಮತ್ತು ಪುಂಡಾಟಿಕೆಯನ್ನು ಹತ್ತಿಕ್ಕುವ ಕೆಲಸದಲ್ಲಿ ಭಾರತೀಯರೆಲ್ಲ ತೊಡಗಬೇಕು. ಈಗಿದ್ದ ಕೇಂದ್ರ ಸರಕಾರವನ್ನು ಪುನರ್ಘಟಿಸಬೇಕೆಂದು ಮುಂತಾಗಿ ಸಾಮ್ಯವಾದಿ ಪಕ್ಷದ ಧುರೀಣರಾದ ಜಯಪ್ರಕಾಶರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಸದ್ಯದಲ್ಲಿ ಹಬ್ಬಿದ ಅಶಾಂತಿ ಪರ್ವದಲ್ಲಿ ಮಂತ್ರಿ ಮಂಡಳವನ್ನು ಪುನರ್ಘಟಿಸುವದು ಮುತ್ಸದ್ದಿತನದ್ದಾಗಲಾರದು. ಶಾಂತಿ ಸ್ಥಾಪಿತವಾದ ನಂತರ ಹಾಗೆ ಮಾಡಲು ಅವಕಾಶವುಂಟು. ಸಾಮ್ಯವಾದಿ ಮೊದಲಾದ ಪಕ್ಷದವರು ಸರಕಾರದಲ್ಲಿ ಸೇರಬಯಸಿದರೆ ಅವರನ್ನು ಸ್ವಾಗತಿಸಲು ಸದ್ಯದ ಕೇಂದ್ರ ಸರಕಾರವೇನು ಹಿಂದು ಮುಂದು ನೋಡದು. ಸಾಮ್ಯವಾದಿಗಳಿಗೆ ಸರಕಾರದಲ್ಲಿ ಸೇರಲು ಬಿನ್ನವಿಸಿಕೊಂಡಾಗ ಅವರು ಅದಕ್ಕೆ ಒಪ್ಪಲಿಲ್ಲೆಂದು ಸರದಾರ ವಲ್ಲಭಭಾಯರು ಸ್ಪಷ್ಟವಾಗಿ ಸಾರಿರುವರು. ಹೀಗೆ ಪರಿಸ್ಥಿತಿಯಿರುವಾಗ ಮಂತ್ರಿ ಮಂಡಲವನ್ನು ಪುನರ್ಘಟಿಸಬೇಕೆಂದು ಬರಿ ಬಾಯಿಂದ ನುಡಿದರೆ ಪ್ರಯೋಜನವೇನು ? ಯಾವದೇ ಪಕ್ಷದವರು ಈ ಮೊದಲಿನಂತೆ ಕಾಂಗ್ರೆಸ ವಿರೋಧಕ ಧೋರಣವನ್ನು ವಹಿಸತಕ್ಕದ್ದಲ್ಲ. ಸದ್ಯಕ್ಕಂತೂ ಸಂಪೂರ್ಣ ಶಾಂತಿ, ಸುವ್ಯವಸ್ಥೆ. ಭದ್ರತೆಗಾಗಿ ಭಾರತೀಯರೆಲ್ಲ ಸರಕಾರದಗೂಡ ಸಂಪೂರ್ಣ ಸಹಕರಿಸಿ ಉದ್ದೇಶವನ್ನು ಸಾಧಿಸಿಕೊಳ್ಳುವದು ಅತ್ಯವಶ್ಯವಾಗಿದೆ.

ಬರಗಾಲ ನಿವಾರಣೋಪಾಯ

ಹಿಂದುಸ್ತಾನ ಒಕ್ಕಲತನಕ್ಕಾಗಿ ಹೆಚ್ಚಾಗಿ ಮಳೆರಾಯನನ್ನೇ ಅವಲಂಬಿಸುವ ಪ್ರಸಂಗವಿರುವದರಿಂದ ಮಳೆ ಬೀಳದಿದ್ದಾಗ ಬರಗಾಲಕ್ಕೆ ಆಹುತಿಯಾಗುವುದುಂಟು. ಇಷ್ಟು ದಿನಗಳವರೆಗೆ ಪರಕೀಯ ಸರಕಾರವಿದ್ದುದರಿಂದ ಇತ್ತ ಹೆಚ್ಚು ಗಮನ ಕೊಡಲಾಗುತಿದ್ದಿಲ್ಲ. ಹೆಚ್ಚು ಆಹಾರ ಪದಾರ್ಥ ಬೆಳೆಸುವ ಮಾತುಗಳೇನೊ ಬೇಕಾದಷ್ಟು ಕೇಳಬರುತಿದ್ದವು. ಆದರೆ ಪ್ರತ್ಯಕ್ಷ ಕೃತಿ ಸ್ವಲ್ಪವೆ. ಇದೀಗ ರಾಷ್ಟ್ರೀಯ ಸರಕಾರ ಸ್ಥಾಪಿತವಾಗಿದ್ದರಿಂದ ಬರಗಾಲ ಪ್ರತಿಬಂಧಿಸಲು ಬಗೆ ಬಗೆಯ ಉಪಾಯಗಳನ್ನು ಕೈಕೊಳ್ಳಲು ಅದು ಅಣಿಯಾಗಿದೆ. ಹಿರಿಯೋಲಗದಲ್ಲಿ ಶ್ರೀ ಅನಂತಶಯನಂ ಅಯ್ಯಂಗಾರರು ಈ ಸಂಬಂಧದಲ್ಲಿ ಗೊತ್ತುವಳಿಯನ್ನು ಮಂಡಿಸಿ ಸರಕಾರದವರು ಈ ಬಗ್ಗೆ ಸಮಿತಿಯೊಂದನ್ನು ನೇಮಿಸಬೇಕೆಂದು ಕೇಳಿಕೊಂಡರು. ಆಗ ಆಹಾರ ಮಂತ್ರಿಗಳಾದ ಶ್ರೀ ಜಯರಾಮದಾಸ ದೌಲತರಾಮರು ಸರಕಾರದ ಧೋರಣವನ್ನು ವಿವರಿಸುತ್ತ ಕೇಂದ್ರ ಸರಕಾರವು ಪ್ರಾಂತೀಯ ಹಾಗು ಸಂಸ್ಥಾನ ಸರಕಾರಗಳ ಸಹಾಯದಿಂದ ಇಂಥ ಸಮಿತಿಯನ್ನು ಸ್ಥಾಪಿಸಿ ಕಾರ್ಯಪ್ರವೃತ್ತವಾಗುವುದೆಂದು ಹೇಳಿದರು. ಕೇಂದ್ರ ಸರಕಾರವೇ ಎಲ್ಲ ಹೊಣೆಯನ್ನು ಹೊತ್ತುಕೊಳ್ಳುವುದು ಶಕ್ಯವಿಲ್ಲ. ಪ್ರಾಂತೀಯ ಹಾಗು ಸಂಸ್ಥಾನ ಸರಕಾರಗಳು ಇದರಲ್ಲಿ ಸಹಕರಿಸಬೇಕು ಎಂದು ಮಾನ್ಯ ಮಂತ್ರಿಗಳು ಹೇಳಿದ್ದು ಯಥೋಚಿತವಾಗಿದೆ. ಆದರೆ ಒಕ್ಕಲತನ ಸುಧಾರಣೆಗಾಗಿ ಕೈಕೊಳ್ಳುವ ಯೋಜನೆಗಳ ಹೊಣೆಯನ್ನು ಕೇವಲ ಪ್ರಾಂತೀಯ ಸರಕಾರಗಳು ಹೊರಲಾರವು. ಕೇಂದ್ರ ಸರಕಾರದ ಧನ ಸಹಾಯ ಅತ್ಯವಶ್ಯವಾಗಿದೆ. ಬೇಗ ಈ ಸಮಿತಿ ಸ್ಥಾಪಿಸಲ್ಪಟ್ಟು ಕಾರ್ಯ ಪ್ರಾರಂಭವಾಗಬೇಕು. ನೀರಾವರಿ ಯೋಜನೆಗಳು ಬೇಗ ಕೈಕೊಳ್ಳಲ್ಪಟ್ಟು ಹೊಲಗಳಿಗೆಲ್ಲ ನೀರು ಸಿಕ್ಕುವಂತೆ ಆಗಬೇಕು. ಅಲ್ಲದೆ ಒಕ್ಕಲಿಗರಿಗೆ ಬೇಕಾಗುವ ಎಲ್ಲ ಸಲಕರಣೆಗಳನ್ನು ಒದಗಿಸಿ ಕೊಡಬೇಕು. ಅವರಿಗೆ ಅವಶ್ಯಕವಾಗುವ ಧನ ಸಹಾಯವನ್ನೂ ಮಾಡಬೇಕು. ಗೊಬ್ಬರ ಮುಂತಾದ್ದನ್ನೂ ಒದಗಿಸಬೇಕು. ಹೀಗೆ ಒಕ್ಕಲಿಗರಿಗೆ ಎಲ್ಲ ಬಗೆಯಿಂದ ಸಹಾಯ ಸಲ್ಲಿಸಿ ಬರಗಾಲನ ಬಾಧೆ ತಪ್ಪುವಂತೆ ನೋಡಿಕೊಳ್ಳಬೇಕು. ಅಂದರೇನೇ ಆಹಾರದ ಕೊರತೆ ಹಿಂಗಬಲ್ಲದು.

ಆರ್ಥಿಕ ಅಭಿವೃದ್ಧಿ

ನೂರಾರು ವರುಷಗಳವರೆಗೆ ಪರದಾಸ್ಯದಲ್ಲಿ ಬಿದ್ದು ಬಗೆಬಗೆಯ ಹಾನಿಗೊಳಗಾದ ಹಿಂದುಸ್ತಾನದಲ್ಲಿ ಆರ್ಥಿಕ ಅಭಿವೃದ್ಧಿಯೆಂತಾಗಬಲ್ಲದೆಂದು ಭಾರತೀಯರೆಲ್ಲ ತಲೆತುರಿಸಿಕೊಳ್ಳಹತ್ತಿರುವರು. ದೇಶದ ಸ್ವಾತಂತ್ರ್ಯಕ್ಕಾಗಿ ಕಳೆದ ೫೦-೬೦ ವರುಷಗಳಿಂದ ಹೋರಾಡಿದ ಕಾಂಗ್ರೆಸ್ಸು ಇದೀಗ ಸ್ವಾತಂತ್ರ್ಯವನ್ನು ಸಂಪಾದಿಸಿದ್ದು ದೇಶದ ಆರ್ಥಿಕ ಅಭಿವೃದ್ಧಿಗಾಗಿ ಯೋಜಿಸುತ್ತಿರುವದು. ಅಖಿಲ ಭಾರತ ಕಾಂಗ್ರೆಸ ಸಮಿತಿಯವರು ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿದ್ದು ಆ ಸಮಿತಿಯವರು ವರದಿಯನ್ನು ಸಿದ್ಧಪಡಿಸಿ ಕಾಂಗ್ರೆಸ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರಿಗೆ ಒಪ್ಪಿಸಿರುವರು. ಆ ವರದಿಯು ದೇಶದ ಆರ್ಥಿಕ ಪುನರ್ರಚನೆಯ ಬಗ್ಗೆ ವಿವಿಧ ಸಲಹೆ ಸೂಚನೆಗಳಿಂದೊಡಗೂಡಿದ್ದು ಅತ್ಯಂತ ಉಪಯುಕ್ತವಾಗಿದೆ. ಇದೀಗ ಕಾಂಗ್ರೆಸ ಪ್ರತಿನಿಧಿಗಳೇ ಆಡಳಿತವನ್ನು ವಹಿಸಿಕೊಂಡಿದ್ದರಿಂದ ಕಾಂಗ್ರೆಸ ಧುರೀಣರು ಮಾಡಿದ ಈ ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಹೆಚ್ಚು ಕಠಿಣವೆನಿಸಲಾರದು. ಈ ವರದಿಯಲ್ಲಿ ಒಕ್ಕಲತನಕ್ಕೇ ಪ್ರಥಮ ಪ್ರಾಶಸ್ತ್ಯ ಕೊಟ್ಟದ್ದು ಯುಕ್ತವೇ ಆಗಿದೆ. ಹುಟ್ಟುವಳಿಯನ್ನು ಹೆಚ್ಚಿಸುವದಕ್ಕಾಗಿ ಒಕ್ಕಲತನದಲ್ಲಿ ಸುಧಾರಣೆಯಾಗುವಂತೆ ನೋಡಿಕೊಳ್ಳಬೇಕೆಂದು ಸಮಿತಿಯವರು ಸೂಚಿಸಿದ್ದಾರೆ. ಉದ್ಯೋಗಗಳಲ್ಲಿ ಸಮಿತಿಯವರು ಎರಡು ವಿಭಾಗಗಳನ್ನು ಮಾಡಿದ್ದು ಉಚಿತವಾಗಿದೆ. ಮಹಾತ್ಮರು ಎಂದಿನಿಂದ ಹೇಳುತ್ತ ಬಂದಂತೆ ಅನ್ನ ವಸ್ತ್ರಗಳಂಥ ಜೀವನಾವಶ್ಯಕ ಉದ್ಯೋಗಗಳು ವಿಕೇಂದ್ರೀಕೃತವಾಗಬೇಕೆಂದು ಸಮಿತಿಯವರು ಸೂಚಿಸಿದ್ದಾರೆ. ಸಣ್ಣ ಸಣ್ಣ ಗ್ರಾಮೋದ್ಯೋಗ ಮಧ್ಯಮ ತರಗತಿಯ ಉದ್ಯೋಗ ಭಾರೀ ಉದ್ಯೋಗ ಇವುಗಳಲ್ಲಿ ಅನವಶ್ಯಕ ಸ್ಪರ್ಧೆ ನಡೆಯಬಾರದೆಂದು ಸಮಿತಿಯವರು ಆಯಾ ಉದ್ಯೋಗಗಳ ಕ್ಷೇತ್ರ ಮರ್ಯಾದೆಯನ್ನು ಗೊತ್ತುಪಡಿಸಬೇಕೆಂದು ಸೂಚಿಸಿದ್ದಾರೆ. ಅದಷ್ಟು ಮಟ್ಟಿಗೆ ಅಲ್ಲಲ್ಲಿನ ಜನರಿಗೆ ಉತ್ತೇಜನ ದೊರೆವಂತೆ ಯೋಜಿಸಬೇಕೆಂದೂ ಅವರ ಸಲಹೆ. ಸೂಚನೆಗಳ ಸೂಕ್ತವಾಗಿದ್ದು ಬೇಗ ಕಾರ್ಯರೂಪದಲ್ಲಿ ಬಂದಷ್ಟು ಹಿತಕರ. ಹಿಂದುಸ್ತಾನದ ಆರ್ಥಿಕ ಅಭಿವೃದ್ಧಿಗಾಗಿ ಸರಕಾರವಷ್ಟೇ ಅಲ್ಲ ಧನಿಕರೂ ಕೆಲಸಗಾರರೂ ಸರ್ವವಿಧ ಪ್ರಯತ್ನ ನಡೆಸುವುದು ಅತ್ಯವಶ್ಯವಾಗಿದೆ.

ದಕ್ಷಿಣ ಸಂಸ್ಥಾನಗಳು

ದಕ್ಷಿಣ ಸಂಸ್ಥಾನಗಳ ಆಡಳಿತವು ಸುಗಮವಾಗಿ ಸಾಗಬೇಕೆಂದು ಆ ಸಂಸ್ಥಾನಿಕರು ತಮ್ಮದೊಂದು ಒಕ್ಕೂಟ ಮಾಡಿಕೊಳ್ಳಬೇಕೆಂದು ಹವಣಿಸಿದ್ದರಷ್ಟೆ. ಆದರೆ ಅಷ್ಟರಲ್ಲಿಯೇ ವಿಲೀನೀಕರಣ ಚಳವಳ ಪ್ರಾರಂಭವಾಗಿ ಬಿಟ್ಟದ್ದರಿಂದ ಅವರು ಆ ಯೋಜನೆಯನ್ನೇ ಬಿಟ್ಟುಗೊಡದೆ ನಿರ್ವಾಹವಿಲ್ಲದಂತಾಯಿತು. ಒಕ್ಕೂಟ ಪ್ರಾಂತಗಳಲ್ಲಿ ಸೇರಿ ಬಿಡುವುದು ಬೇರೆ ಯಾವದೇ ಯೋಜನೆಗಿಂತ ಶ್ರೇಷ್ಠವಾದುದಾಗುತ್ತ ಆಂಕರಣೀಯವಾದುದೆಂಬಲ್ಲಿ ಸಂದೇಹವಿಲ್ಲ. ಇದನ್ನು ನೆನೆದು ಮತ್ತು ಪ್ರಜೆಗಳ ಬೇಡಿಕೆ ಆಶೆ ಆಕಾಂಕ್ಷೆಗಳನ್ನು ತಿಳಿದುಕೊಂಡು ಆಯಾ ಸಂಸ್ಥಾನಿಕರು ತಮ್ಮ ಧೋರಣವನ್ನು ಮಾರ್ಪಡಿಸಿಕೊಳ್ಳುವದು ಯುಕ್ತವಾಗಿದೆ. ಈ ದಿಸೆಯಲ್ಲಿ ಜಮಖಂಡಿಯ ರಾಜೇಸಾಹೇಬರು ಎಲ್ಲರಿಗೂ ದಾರಿ ತೋರಿಸಿ ಕೊಟ್ಟಿರುವರು. ಈಗ ದಕ್ಷಿಣ ಸಂಸ್ಥಾನಗಳಲ್ಲಿಯ ರಾಜರೆಲ್ಲ ವಿಲೀನೀಕರಣಕ್ಕೆ ಸಿದ್ಧವಾಗಿದ್ದುದು ಅಭಿನಂದನೀಯವಾಗಿದೆ. ಈ ಬಗೆಯ ಧೋರಣವನ್ನು ಸ್ವೀಕರಿಸಿದ್ದರಿಂದ ಸಂಸ್ಥಾನಗಳಲ್ಲಿ ರಾಜಮಂಡಳದ ಆವಶ್ಯಕತೆ ಉಳಿಯಲಿಲ್ಲ. ಅಂತೆಯೇ ಸಂಸ್ಥಾನಿಕರು ರಾಜಮಂಡಳವನ್ನು ವಿಸರ್ಜಿಸಿ ಬಿಟ್ಟಿರುವದಲ್ಲದೆ ಒಪ್ಪಂದದ ಪತ್ರಿಕೆಯನ್ನೂ ರದ್ದುಗೊಳಿಸಿದ್ದಾರೆ. ಅದೇ ರೀತಿ ಸಂಯುಕ್ತ ದಕ್ಷಿಣ ಸಂಸ್ಥಾನ ಘಟನಾ ಸಮಿತಿಯನ್ನೂ ವಿಸರ್ಜಿಸಲಾಗಿದೆ. ಇದೆಲ್ಲ ವಿಷಯವನ್ನು ಸಂಸ್ಥಾನ ಖಾತೆಯ ಮಂತ್ರಿಗಳಾದ ಸರದಾರ ವಲ್ಲಭಭಾಯಿಯವರಿಗೆ ತಿಳಿಸಲಾಗಿದೆ. ಸಂಸ್ಥಾನಿಕರು ಈ ಬಗೆಯ ಕ್ರಮವನ್ನು ಕೈಕೊಂಡತೆ ವಿಲೀನೀಕರಣಕ್ಕೆ ದಾರಿಯನ್ನು ಸರಳಮಾಡಿ ಕೊಟ್ಟಿರುವರು. ಔಂಧದ ಮಹಾರಾಜರು ವಿಲೀನೀಕರಣದ ಪ್ರಶ್ನೆಯನ್ನು ಪ್ರೌಢ ಮತಾಧಿಕಾರದಿಂದ ನಿರ್ಣಯಿಸಬೇಕೆಂದು ಗೊತ್ತುಮಾಡಿದ್ದಾರೆ. ಹೀಗೆ ಮಾಡಬೇಕಾದರೆ ದಕ್ಷಿಣ ಸಂಸ್ಥಾನದಲ್ಲಿ ಉಳಿಯುವದು ಸರಿಯಾಗಲಾರದೆಂದು ಬಗೆದು ಅದನ್ನೂ ವಿಸರ್ಜಿಸಲಾಗಿದೆ. ಸಂಸ್ಥಾನಿಕರು ಸ್ವಾರ್ಥವನ್ನು ಬಿಟ್ಟುಗೊಟ್ಟು ಈ ರೀತಿ ವಿಲೀನೀಕರಣಕ್ಕೆ ಸಿದ್ಧವಾದುದು ಸ್ತುತ್ಯವಾಗಿದೆ. ಬೇಗ ಇದು ಕಾರ್ಯರೂಪದಲ್ಲಿ ಬಂದು ಸಂಸ್ಥಾನ ಜನತೆ ಬಹುದಿನಗಳಿಂದ ನಿರೀಕ್ಷಿಸುತ್ತಲಿರುವ ಸ್ವಾತಂತ್ರ್ಯವನ್ನು ಪಡೆಯುವಂತಾಗಲಿ.

ಬಿಡುವು

ಮಹಾತ್ಮಾ ಗಾಂಧಿಯವರ ನಿಧನ ನಿಮಿತ್ತ ದುಃಖ ಪ್ರದರ್ಶಿಸಲು ಒಂದು ವಾರದ ಸಂಚಿಕೆಯನ್ನು ನಿಲ್ಲಿಸಬೇಕೆಂದು ಗೊತ್ತಾದ್ದರಿಂದ ಮುಂದಿನ ವಾರದ ಅಂದರೆ ೧೬-೨-೧೯೪೮ ನೇ ತಾರೀಕಿನ ಸಂಚಿಕೆ ಹೊರಡುವದಿಲ್ಲ.

—ವ್ಯವಸ್ಥಾಪಕ

ವಿನಿಯಂತ್ರಣ

ಹಿಂದುಸ್ತಾನ ಸರಕಾರದವರು ಬಟ್ಟೆಗಳ ಮೇಲಿನ ನಿಯಂತ್ರಣವನ್ನು ರದ್ದುಪಡಿಸಿ ಸೀಮೆ ಎಣ್ಣೆಯ ಮೇಲಿನ ನಿಯಂತ್ರಣವನ್ನೂ ತೆಗೆದುಹಾಕಬೇಕೆಂದು ಗೊತ್ತುಪಡಿಸಿದ್ದರಷ್ಟೆ. ಅದಕ್ಕನುಸಾರವಾಗಿ ಮುಂಬಯಿ ಸರಕಾರದವರು ಬಟ್ಟೆಗಳ ಮಾರಾಟ ಮತ್ತು ಹಂಚುವಿಕೆಯ ಮೇಲಿದ್ದ ಅನೇಕ ನಿರ್ಬಂಧಗಳನ್ನು ರದ್ದುಗೊಳಿಸಲು ನಿಶ್ಚಯಿಸಿರುವರು. ಈ ಬಗ್ಗೆ ಅಧಿಕೃತ ಪ್ರಕಟಣೆಯೂ ಹೊರಟಿವೆ. ಬಟ್ಟೆಗಳ ಸೀದಾ ಪದ್ಧತಿಯು ಇನ್ನು ಮೇಲೆ ಇಲ್ಲದಂತಾಗುವದು. ಅರಿವೆಗಳ ಕೊಳ್ಳುವಿಕೆ ಹಂಚುವಿಕೆ ಮತ್ತು ಸಾಗಾಟಗಳ ಮೇಲೆ ಇನ್ನು ಮುಂದೆ ನಿರ್ಬಂಧವಿರಲಾರದು. ಮತ್ತು ಬಟ್ಟೆಗಳ ಮೇಲೆ ಮಾರಾಟ ಹಾಗು ಸಂಗ್ರಹಕ್ಕಾಗಿ ಲಾಯಸೆನ್ಸ ಪಡೆವ ಅವಶ್ಯಕತೆಯೂ ಇಲ್ಲ. ಆದರೆ ನೂಲಿನ ಮೇಲೆ ಸದ್ಯಕ್ಕಿದ್ದ ನಿಯಂತ್ರಣ ಮಾತ್ರ ಇನ್ನು ಮುಂದೆಯೂ ಉಳಿಯುವದು. ಸರಕಾರದವರು ಹೊರಡಿಸಿದ ಈ ಹುಕುಮು ಸಮಯೋಚಿತವಾಗಿದೆ. ಅನ್ನವಸ್ತ್ರಗಳ ಮೇಲಿನ ನಿಯಂತ್ರಣವನ್ನು ತೆಗೆದುಹಾಕಬೇಕೆಂದು ಮಹಾತ್ಮಾ ಗಾಂಧಿಯವರು ಎಂದಿನಿಂದಲೂ ಪ್ರತಿಪಾದಿಸುತ್ತ ಬಂದಿದ್ದರು. ತತ್ಪರಿಣಾಮವಾಗಿಯೇ ಸರಕಾರದವರು ಆಹಾರ ಪದಾರ್ಥಗಳ ಮೇಲಿನ ನಿಯಂತ್ರಣವನ್ನು ಬಹ್ವಂಶದಿಂದ ರದ್ದುಗೊಳಿಸಿ ಬಟ್ಟೆಗಳ ಮೇಲಿನ ನಿಯಂತ್ರಣವನ್ನೂ ರದ್ದುಗೊಳಿಸಲು ನಿರ್ಧರಿಸಿದ್ದರು. ಆಹಾರ ಪದಾರ್ಥಗಳ ವಿನಿಯಂತ್ರಣದಿಂದ ಸದ್ಯಕ್ಕಂತೂ ಎಲ್ಲಿಯೂ ಯಾವದೇ ಬಗೆಯ ತೊಂದರೆಗಳ ಕೂಗು ಕೇಳಬರುವದಿಲ್ಲ. ಎಲ್ಲರೂ ಸರಕಾರದ ಧೋರಣವನ್ನು ಹಾಡಿ ಹರಸುತ್ತಿರುವರು. ಬಟ್ಟೆಗಳ ಮೇಲಿನ ನಿಯಂತ್ರಣವನ್ನು ರದ್ದುಪಡಿಸಿದ ನಂತರವೂ ಜನತೆ ಬಟ್ಟೆಗಾಗಿ ಇಂದಿನಷ್ಟು ಅಂಡಲೆಯಬೇಕಾಗಲಿಕ್ಕಿಲ್ಲೆಂಬ ಭರವಸೆಯಿದೆ. ಆದರೆ ಗಿರಣಿಗಾರರು ಮತ್ತು ದೊಡ್ಡ ವ್ಯಾಪಾರಸ್ಥರು ಲಾಭಬಡಕರಾಗಿ ಸರಕನ್ನೆಲ್ಲ ಸಂಗ್ರಹಿಸಿಡುವ ಪ್ರವೃತ್ತಿಯನ್ನು ತಾಳಬಾರದು. ತಯಾರಾಗುವ ಸರಕೆಲ್ಲ ಸರಿಯಾಗಿ ಹಂಚಲ್ಪಟ್ಟರೆ ಎಲ್ಲಿಯೂ ಕೊರತೆಯಾಗಲಾರದು. ಇದನ್ನು ನೆನೆದು ಎಲ್ಲರೂ ವರ್ತಿಸಬೇಕು. ಬಟ್ಟೆಗಳ ಉತ್ಪಾದನೆಯನ್ನು ಹೆಚ್ಚಿಸಲು ಚರಕದಿಂದ ನೂಲುವವರೂ ಕೈಮಗ್ಗದವರೂ ಹೆಚ್ಚು ಹೆಚ್ಚು ಪ್ರಯತ್ನಿಸಬೇಕು. ಸರಕಾರದವರು ಚರಕ ಸಂಘಕ್ಕೆ ಮತ್ತು ಕೈಮಗ್ಗಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುವ ಧೋರಣವನ್ನು

[೧೨ನೆಯ ಪುಟ ನೋಡಿರಿ]

ಅಂತರರಾಷ್ಟ್ರೀಯ

ರಶಿಯದ ಪ್ರಗತಿ ಮಾರ್ಗ

ಕಳೆದ ೩೦ ರಲ್ಲಿ ಸುಪ್ರೀಂ ಸೋವಿಯಟ್ಟಿನ ೪ ನೆಯ ಸಭೆ ಸೇರಿತು. ಅದರ ಮನೆಗಳಾದ ಸೋವಿಯಟ್ ಯೂನಿಯನ್ ಮತ್ತು ಸೋವಿಯಟ್ ಅಫ್ ನ್ಯಾಶನ್ಯಾಲಿಟೀಸ್ ಎರಡೂ ಸೇರಿದವು.

ಮುಂಗಡ ಪತ್ರದ ಭಾಷಣದಲ್ಲಿ ಎಂ. ಜ್ವೆರೋವನು— ಪಂಚವಾರ್ಷಿಕ ಯೋಜನೆ ಜಾರಿ ಮಾಡಿದ ೩ ನೆಯದಾದ ಈ ವರ್ಷದಲ್ಲಿ ಸಶಸ್ತ್ರ ಸೈನಿಕರಿಗಾಗಿ ಮಾಡುವ ವೆಚ್ಚದಲ್ಲಿ ೨೫೦ ಕೋಟಿ ರೂಬಲ್ಸುಗಳನ್ನು ಕಡಿಮೆ ಮಾಡಲಾಗಿದೆ. ಹಿಂದೆ ೬೦೦ ಕೋಟಿ ರೂಬಲ್ಸುಗಳನ್ನು ಖರ್ಚು ಮಾಡಲಾಗಿತ್ತು. ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ ಶಾಖೆಗಳಿಗೆ ಹೆಚ್ಚು ಹಣವನ್ನು ಕೊಡಲಾಗಿದೆ— ಎಂದನು.

ರಶಿಯದ ಚಿಕ್ಕ ಶಾಲೆಗಳಲ್ಲಿಂದು ೩ ಕೋಟಿ ೩೦ ಲಕ್ಷ ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದಾರೆ; ಹೈಸ್ಕೂಲುಗಳಲ್ಲಿ ೭ ಲಕ್ಷ ೨೨ ಸಾವಿರ ತರುಣ ತರುಣಿಯರಿದ್ದಾರೆ. ಆರೋಗ್ಯ ಶಾಖೆಯ ಸಂಶೋಧನ ಕಾರ್ಯವೇಗ ನೂರಕ್ಕೆ ೭ ರಷ್ಟು ಹೆಚ್ಚಾಗಿದೆ.

ಪಂಚವಾರ್ಷಿಕ ಯೋಜನೆಯ ಗುರಿಯಂತೆ ೧೯೪೭ ರಲ್ಲಿ ಉತ್ಪಾದಿಸಬೇಕೆಂದಿದ್ದುದಕ್ಕಿಂತ ನೂರಕ್ಕೆ ೧೦೩.೫ ರಷ್ಟು ಹೆಚ್ಚಾಗಿದೆ. ರಶಿಯವು ಹೀಗೆ ಪ್ರಗತಿ ಮಾರ್ಗದಲ್ಲಿ ನಡೆಯುತ್ತಿರುವುದು ಯುದ್ಧದಿಂದ ಹಣ್ಣಾದ ಉಳಿದ ರಾಷ್ಟ್ರಗಳಿಗೊಂದು ಮಾದರಿಯಾಗಿದೆ.

ಅಮೇರಿಕದ ಮೇಲೆ ಅಪಾದನೆ

ಅಮೇರಿಕದ ಸೈನ್ಯ ಸಮಿತಿಯು ಪರ್ಶಿಯದಲ್ಲಿ ಹೋಗಿ ಸೋವಿಯಟ್ ಪರ್ಶಿಯನ್ ಗಡಿ ಒಪ್ಪಂದಕ್ಕೆ ಭಂಗ ತಂದಿತೆಂದು ರಶಿಯವು ಅಪಾದನೆ ಮಾಡಿದೆ.

“ಇದು ಶುದ್ಧ ಸುಳ್ಳು” ಎಂದು ಅಮೇರಿಕದ ಪರರಾಷ್ಟ್ರ ಶಾಖೆ ಸಾರಿದೆ. ಅಮೇರಿಕದ ಪದ್ಧತಿಯಂತೆ ಪರ್ಶಿಯದಲ್ಲಿ ಸೈನ್ಯ ಸಲಕರಣೆಗಳನ್ನು ತಯಾರಿಸಲು ಅಮೇರಿಕ ನೆರವಾಗುತ್ತಿದೆಯೆಂಬ ದೂರನ್ನೂ ಅದು ಅಲ್ಲಗಳೆದಿದೆ. ಎಷ್ಟೆ ಮುಂತಾದವನ್ನು ನೆಲ ಮಾಳಿಗೆಯಲ್ಲಿ ಹೂಳಿಡಲಾಗುತ್ತಿದೆಯೆಂಬೂ ವಿಮಾನಾಂಗಣಗಳನ್ನು ಅಮೇರಿಕನ್ನರ ಸಲಹೆಯಂತೆ ರಚಿಸಲಾಗುತ್ತಿದೆಯೆಂದೂ ಮಾಡಲಾದ ಅಪಾದನೆಗೆ ಬುಡವಿಲ್ಲವೆಂದು ವಾಷಿಂಗ್‌ಟನ್ನಿನ ವಕ್ತಾರನು ಹೇಳಿದ್ದಾನೆ. ಪರ್ಶಿಯದ ಕಾರಖಾನೆಗಳು ಅಮೇರಿಕದ ರೀತಿಯ ಆಯುಧಗಳನ್ನು ತಯಾರಿಸುತ್ತಿರುವುದು ನಿಜವಲ್ಲ. ಅವರು ಹಳೆಯ ಕಾಲದ ಜರ್ಮನ್ ಮಾದರಿಯ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದ್ದಾರೆಂದು ಅವನ ಹೇಳಿಕೆ. ಸಮಿತಿಯು ಕೂಟ ಯೋಧರ ಸುಧಾರಣೆಗಾಗಿ ೫೦ ಜನರೊಡನೆ ಹೋಗಿದೆಯೆಂದು ಅವನು ತಿಳಿಸುತ್ತಾನೆ.

ರಶಿಯದ ಅಪಾದನೆ ತೀರ ಸುಳ್ಳೆಂಬುದು ತೀರ ಸುಳ್ಳೆಂದು ರಾಜಕಾರಣದಲ್ಲಿ ಪ್ರಥಮ ಪರೀಕ್ಷೆ ಕೊಟ್ಟವರಿಗೆ ಕೂಡ ಅರಿವಾಗದಿರದು. ಅಮೇರಿಕದ ಸರ್ವಭಕ್ಷಕ ಪ್ರವೃತ್ತಿಯಿಂದು ಜಗಜ್ಜನಿತವಾಗಿದೆ. ಎಲ್ಲೆಡೆಯಲ್ಲೂ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳಲು ಬಯಸುತ್ತ ವೇಷವನ್ನು ಪರ್ಶಿಯದಲ್ಲಿ ಅದು ಹೂಡಿದ್ದರೆ ಆಶ್ಚರ್ಯದ ಸಂಗತಿಯಲ್ಲ!

ಮಲಯದಲ್ಲಿ ಮುಷ್ಕರ

ಇತ್ತೀಚೆಗೆ ಮಲಯ ಮಂಡಲ (Malayan Federation) ವನ್ನು ಆರಂಭಿಸಲಾಯಿತಷ್ಟೇ. ಇದಕ್ಕೆ ವಿರುದ್ಧವಿರುವ ಸಿಂಗಪುರದ ೩೦ ಸಾವಿರ ಕೂಲಿಕಾರರು ತಮ್ಮ ರಾಜಕೀಯ ಮತ್ತು ಆರ್ಥಿಕ ಉದ್ದೇಶಗಳನ್ನೀಡೇರಿಸಿಕೊಳ್ಳಲು ಮುಷ್ಕರ ಹೂಡಿಬಿಟ್ಟಿದ್ದಾರೆ. ಜಪಾನಿನಿಂದ ಬಿಡುಗಡೆಹೊಂದಿದ ಬಳಿಕ ಮಲಯದಲ್ಲಿ ಮುಷ್ಕರದ ಮೇಲೆ ಮುಷ್ಕರ ನಡೆದು ಅಲ್ಲಿಯ ಹಡಗಿನ ಕಟ್ಟೆ ಮತ್ತು ರಬ್ಬರು ತೋಟಗಳ ಮೇಲೆ ಬಹಳ ದುಷ್ಪರಿಣಾಮವುಂಟಾಯಿತು. ಈ ಮುಷ್ಕರಕ್ಕೆ ಕಮ್ಯೂನಿಸ್ಟ ಪಕ್ಷವೇ ಜವಾಬುದಾರವಿರುವುದು. ಅದೀಗ ತನ್ನಷ್ಟಕ್ಕೆ ಪ್ರಬಲವಾಗಿದೆ. ಯುದ್ಧಕಾಲದಲ್ಲಿ ಆ ಪಕ್ಷದವರು ತೋರಿಸಿದ ಸಾಹಸದಿಂದ ಜನರ ಲಕ್ಷ್ಯ ಅವರತ್ತ ಎಳೆಯಲ್ಪಟ್ಟಿದೆ. ಕಡೆತನಕ ಅವರಿಗೆ ಇಷ್ಟು ಬೃಹತ್ಪ್ರಮಾಣದಲ್ಲಿ ಅನುಯಾಯಿಗಳಿರುವರೆಂಬುದನ್ನು ಹೇಳಲಿಕ್ಕೆ ಬರುವಂತಿಲ್ಲವಿದ್ದರೂ ಸದ್ಯದಲ್ಲಿ ಮಹಾ ಹಕೊಂಡನ್ನು ಬಿಟ್ಟು ಸಿಂಗಪುರದಲ್ಲಿ ಜನಜೀವನ ಸಟ್ಟಿಗೆ ನಡೆಯುವಂತೆ ಗಲಭೆ ಎಬ್ಬಿಸುವಷ್ಟು ಶಕ್ತಿ ಅವರಿಗಿದೆ.

ಅದರೆ ಸರಕಾರ ಮತ್ತು ತೋಟಿಗರು ನಿಜವಾದ ಟ್ರೇಡ್ ಯೂನಿಯನ್ನುಗಳ ಸಹಕಾರ ಅಗತ್ಯವೆನ್ನುವುದನ್ನು ಕಂಡುಕೊಂಡಿದ್ದಾರೆ. ಸುಳ್ಳುಸುಳ್ಳೆ ಗುಂಪು ಕಟ್ಟಿಕೊಂಡು ಯೂನಿಯನ್ ಸ್ಥಾಪಿಸಿದವರೆಂದು ಹೇಳಿಕೊಂಡು ಚೀನೀಯರ ಮತ್ತು ಕಮ್ಯೂನಿಸ್ಟರ ಹಿತಗಳನ್ನು ವೃದ್ಧಿಗೊಳಿಸ ಬರುವವರೊಡನೆ ಅವರು ವ್ಯವಹರಿಸಲೊಪ್ಪುವುದಿಲ್ಲ.

ಕಮ್ಯೂನಿಸ್ಟರ ಪ್ರಾಬಲ್ಯಕ್ಕೆ ಸುತ್ತುಮುತ್ತಲಿನ ಪರಿಸ್ಥಿತಿಯು ಬ್ರಹ್ಮದೇಶ ಮತ್ತು ಚೀನ ಮುಂತಾದ ನಾಡುಗಳಲ್ಲಿ ಆ ಪಕ್ಷದವರ ಮುನ್ನಡೆ ಇವು ಕಾರಣಗಳೆನಿಸಿವೆ. ಅವರ ಅನುಯಾಯಿಗಳ ಸಂಖ್ಯಾಬಲ ಕುಗ್ಗದಿದ್ದರೆ ಅವರ ಹಾವಳಿಯನ್ನು ತಡೆಯುವುದು ಸರಕಾರಕ್ಕೆ ಸ್ವಲ್ಪ ಕಷ್ಟಕರವೇ ಆದೀತು.

ಚಿಯಾಂಗರು ಮಂಚೂರಿಯ ಕಳೆದುಕೊಳ್ಳುವರೆ?

ಸರಕಾರೀ ಸುದ್ದಿ ಸಂಸ್ಥೆಯ ಪ್ರಕಾರ ಚೀನೀ ಕಮ್ಯೂನಿಸ್ಟ್ ದಲಗಳು ಮಂಚೂರಿಯದ ಹಿಂದಿನ ರಾಜಧಾನಿಯಾದ ಮುಕಡನ್ನಿನ ಹೆಬ್ಬಾಗಿಲೆನಿಸಿದ ಸಿನ್ ಲಿತನ್ ಎಂಬ ರೇಲ್ವೆ ನಗರವನ್ನು ಹಿಡಿದವೆಂದು ತಿಳಿಯುತ್ತದೆ. ಈ ಪ್ರಕರಣದಲ್ಲಿ ಆ ದಿನ ಯುದ್ಧ ನಡೆಯಿತೆಂದೂ ಇದರ ಪರಿಣಾಮವು ಮಂಚೂರಿಯದ ಆಳಿಕೆಯ ಕಡೆಯ ನಿರ್ಣಯವನ್ನು ರೂಪಿಸಬಹುದೆಂದೂ ಹೇಳಲಾಗುತ್ತಿದೆ

ನ್ಯಾನ್‌ಕಿಂಗಿನಸಕ್ಷಿಯ ಪ್ರೇಕ್ಷಕರು—ಮುಕಡನ್ನನ್ನು ಕಳೆದುಕೊಂಡರೆ ‘ದೊಡ್ಡ ಗೋಡೆ’ಯ ಹಿಂದಕ್ಕೆ ಸರಕಾರ ಹಿಮ್ಮೆಟ್ಟಿ ನಿಲ್ಲಬೇಕಾದೀತು, ಎನ್ನುತ್ತಾರೆ.

ಸುಸಜ್ಜಿತ ಯಂತ್ರೋಪಕರಣಗಳಿಂದ ಕೂಡಿದ ಸರಕಾರೀ ಸೈನ್ಯವನ್ನು ೫೦ ಸಾವಿರ ಮಂದಿ ಕಮ್ಯುನಿಸ್ಟರು ಯಶಸ್ವಿಯಾಗಿ ಪ್ರತಿಭಟಿಸಿದರೆಂದೂ ಹಾಗೆ ಮಾಡಲು ಅವರ ತೀವ್ರಗತಿ ಮತ್ತು ಮುಂದೋಟವೇ ಕಾರಣವೆಂದೂ ಗೊತ್ತಾಗುತ್ತದೆ.

ನ್ಯಾನ್‌ಕಿಂಗಿನ ಸರಕಾರೀ ವಕ್ತಾರನ ಹೇಳಿಕೆಯಂತೆ ಮಂಚೂರಿಯದ ಯುದ್ಧದಲ್ಲಿ ನಿರ್ಣಾಯಕ ವಿಜಯವನ್ನು ಸಂಪಾದಿಸಲೆಂದು ೩೦ ಲಕ್ಷ ಕಮ್ಯುನಿಸ್ಟ್ ಸೈನಿಕರು ಪ್ರಾಂತದ ಸುತ್ತ ಸುಸಜ್ಜಿತರಾಗಿ ಸುತ್ತುವರಿದಿದ್ದಾರೆ.

ಮೇಲಿನ ವಿವರಗಳನ್ನು ಪರಿಶೀಲಿಸಿದರೆ ಸರಕಾರದ ಸಿದ್ಧತೆಗೆ ಹೆಚ್ಚಿನ್ನಲಾಗದಿದ್ದರೂ ಸರಿಸಮ ಯುದ್ಧಸಿದ್ಧತೆಯನ್ನು ಕಮ್ಯೂನಿಸ್ಟರು ಮಾಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಮಂಚೂರಿಯವನ್ನು ಕೋಮಿಂಟಾಂಗ ಸರಕಾರ ಕಳೆದುಕೊಂಡರೆ ಅದು ಅದಕ್ಕೊಂದು ಅಪಶಕುನದ ಲಕ್ಷ್ಯಯಾಗಿ ಪರಿಣಮಿಸುವುದು ಖಂಡಿತ. ಸದ್ಯದ ಮುಕಡನ್ ಕ್ಷೇತ್ರದ ಪರಿಸ್ಥಿತಿ ಅತ್ಯಂತ ಘೋರವೂ ಸಂದಿಗ್ಧವೂ ಆಗಿದೆ. ಕಮ್ಯೂನಿಸ್ಟರ ವೀರಾವೇಶಕ್ಕೆ ಎಣೆಯಿಲ್ಲದಾಗಿದೆ; ಅವರ ಸೈನ್ಯ ಸಂಖ್ಯೆಯೂ ಅಗಣಿತವಿದೆ. ಈ ಬಾರಿ ಚಿಯಾಂಗರ ದಲಗಳು ಗೆದ್ದುಬಂದರೆ ಮುಂದೆ ಆತ್ಮವಿಶ್ವಾಸ ಪಡೆದು ಕಮ್ಯುನಿಷ್ಟರ ಹುಟ್ಟಡಗಿಸಲು ಇಮ್ಮಡಿ ಹುರುಪಿನಿಂದ ಹೋರಾಡಬಹುದು. ಹಾಗಾಗದಿದ್ದರೆ ಆಗಲೇ ಪೂರ್ಣ-ಅರ್ಧ ನಿರುತ್ಸಾಹವನ್ನು ಹೊಂದಿರುವ ಸರಕಾರೀ ಸೈನ್ಯ ಮುತ್ಸದ್ದಿಗಳು ಕೈಕಾಲುಗೆಡುವುದು ಖಂಡಿತ ಸಂಭಾವ್ಯ.

ಯಹೂದಿ ಸೈನ್ಯ

ಸಂಯುಕ್ತ ರಾಷ್ಟ್ರಗಳ ಪಾಲೆಸ್ತಾನ ಸಮಿತಿಯು ಈಗ ಮತ್ತು ಬ್ರಿಟಿಶರು ಹೊರಟು ಹೋದಾಕ್ಷಣ ಪಾಲಿಸ್ತಾನದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಉಳಿಸುವ ಸಮಸ್ಯೆಯನ್ನು ಬಗೆಹರಿಸಲು ಬಹಳವಾಗಿ ವಿಚಾರ ಮಾಡಿ ಸದ್ಯ: ಒಂದು ನಿರ್ಣಯಕ್ಕೆ ಬಂದುಬಿಟ್ಟಿದೆ. ಆ ನಿರ್ಣಯದಲ್ಲಿ ಯೆಹೂದಿಗಳಿಗೆ ಸೇರುವ ಪಾಲಿಸ್ತಾನ ವಿಭಾಗದಲ್ಲಿ ಅವರದೇ ಆದ ಒಂದು ರಕ್ಷಣಾದಲವನ್ನೂ ಅತ್ತ ಅರಬ ವಿಭಾಗದಲ್ಲಿ ಅರಬರದೊಂದು ರಕ್ಷಣಾದಲವನ್ನೂ ಸ್ಥಾಪಿಸಬೇಕು ಎಂದಿದೆ.

ಬ್ರಿಟಿಶ ಅಧಿಕಾರಿಗಳಾದರೂ ತಾತ್ಕಾಲಿಕ ವ್ಯವಸ್ಥೆಯನ್ನು ಹೀಗೇ ಮಾಡಬೇಕೆಂದು ಆಲೋಚಿಸಿದ್ದರು. ಅಧಿಕಾರ ಮತ್ತು ಹೊಣೆಯನ್ನು ಆಯಾ ವಿಭಾಗದ ಬಹುಸಂಖ್ಯಾಕರಿಗೆ ಬಿಟ್ಟು ಕೊಡಲಾಗುವದು. ಯೆಹೂದಿ ಮತ್ತು ಅರಬ ಜನರ ಮಿಶ್ರವಿಭಾಗಗಳಲ್ಲಿ ಬ್ರಿಟಿಶ ಸೈನ್ಯಗಳು ಕೆಲಕಾಲ ಇರುವವು. ಆದರೆ ಅಳುವ ವಿಶ್ವಸಂಸ್ಥೆಯು ರಾಷ್ಟ್ರವಲ್ಲದೆ ಉಳಿದವರು ಸೈನ್ಯವನ್ನು ರಚಿಸುವದಕ್ಕೆ ಬ್ರಿಟನ್ನು ಬಲವಾಗಿ ವಿರೋಧಿಸಿದೆ.

ಯೆಹೂದಿಗಳ ವಿಭಾಗದಲ್ಲಿ ೪೧೬೦೦೦ ಕ್ಕಿಂತ ಹೆಚ್ಚು ಅರಬರು ಮತ್ತು ಇತರರು ಉಳಿಯುವುದರಿಂದ ಅರಬ ಮತ್ತು ಯೆಹೂದಿ ಸೈನ್ಯಗಳ ಸ್ಥಾಪನೆಯಿಂದ ಸಮಸ್ಯೆ ಬಗೆಹರಿಯದು. ಅರಬ ಮತ್ತು ಯೆಹೂದಿಗಳ ಈಗಿನ ಚಟುವಟಿಕೆಗಳನ್ನವಲೋಕಿಸಿದರೆ ನಾಳೆ ಆ ಸೈನ್ಯಗಳು ಕೇವಲ ರಕ್ಷಣಾಪಥಕಗಳಾಗಿ ನಿಲ್ಲುವದು ಕಷ್ಟವೆಂದೇ ಹೇಳಬೇಕಾಗುತ್ತದೆ.

ಲಂಡನ್ನಿನಲ್ಲಿ ಹಿಂದೀ ಕಲಾಪ್ರದರ್ಶನ

ಲಂಡನ್ನಿನ ಬುರ್ಲಿಂಗ್‌ಟನ್ ಭವನದಲ್ಲಿ ನಡೆದ ಹಿಂದುಸ್ತಾನ ಪಾಕಿಸ್ತಾನಗಳ ಕಲಾ ಪ್ರದರ್ಶನದ ಬಗ್ಗೆ ಅನಿರೀಕ್ಷಿತ ಸುದ್ದಿಬಂದಿದೆ. ವಾನ್‌ಗಾಗ್ ಪ್ರದರ್ಶನಕ್ಕೆ ಪ್ರತಿದಿನ ೧,೫೭,೪೫೩ ಜನ ಪ್ರೇಕ್ಷಕರು ಹೋದರೆ ಹಿಂದೀ ಪ್ರದರ್ಶನಕ್ಕೆ ಕೇವಲ ದಿನವೊಂದರ ೭ಆ ಸಾವಿರ ಇಲ್ಲವೆ ೧೫೦೦ ಜನ ಪ್ರೇಕ್ಷಕರು ಮಾತ್ರ ಹೋಗುತ್ತಿದ್ದುದು ವಿಚಿತ್ರವಾಗಿದೆಯೆಂದು ಹೇಳಲಾಗುತ್ತಿದೆ.

ಆದರೆ ಸರ್ ವಾಲ್ಟರ್ ಲ್ಯಾಂಬರ ಪ್ರಕಾರ ಬ್ರಿಟಿಶರಿಗೆ ಈ ಕಲಾಕೃತಿಗಳು ತೀರ ಹೊಸವಿರುವುದೇ ಈ ಪ್ರೇಕ್ಷಕ ಸಂಖ್ಯಾನ್ಯೂನತೆಗೆ ಕಾರಣವೆನ್ನಲಾಗಿದೆ. ಆದರೆ ಇದು ಅಷ್ಟು ಸಮಂಜಸವೆಂದು ಹೇಳಬರದು. ಏಕೆಂದರೆ, ಬ್ರಿಟಿಶರಿಗೆ ಹಿಂದೀ ಕಲಾಕೃತಿಗಳು ಅಷ್ಟು ಅಪರಿಚಿತವಲ್ಲ. ವಿಕ್ಟೋರಿಯ ಮತ್ತು ಅಲ್ಬರ್ಟ್ ವಸ್ತುಪ್ರದರ್ಶನಾಲಯಗಳಲ್ಲಿ ಅವರಲ್ಲಿ ಎಷ್ಟೋ ಜನರು ಹಿಂದೀ ಕಲೆಯನ್ನು ಅಭ್ಯಸಿಸುತ್ತಿದ್ದಾರೆಂದು “ಟೈಮ್ಸ್ ಅಫ್ ಇಂಡಿಯ”ದ ವಿಶೇಷ ಸುದಿಗಾರನು ಬರೆಯುತ್ತಾನೆ. ಕಡಿಮೆ ಪ್ರೇಕ್ಷಕರಿರಲು ಬ್ರಿಟಿಶರ ಹೊಸತನ್ನು ಕಾಣುವ ಹಂಬಲು ಮತ್ತು ಕಷ್ಟಪಟ್ಟು ನೋಡುವಂತಿದ್ದಲ್ಲಿ ಆತುರದಿಂದ ನುಗ್ಗುವ ಪ್ರವೃತ್ತಿ ಇವೇ ಕಾರಣಗಳೆಂದು ಅವನು ಅಭಿಪ್ರಾಯ ಪಡುತ್ತಾನೆ. ವ್ಯಾನ್‌ಗಾಗನ ಪ್ರದರ್ಶನಕ್ಕೆ ಕ್ಯೂವಿನಲ್ಲಿ ನಿಲ್ಲಬೇಕಾಗಿತ್ತು; ಹಿಂದೀ ಪ್ರದರ್ಶವನ್ನು ಬೇಕಾದಾಗ ನೋಡಿಕೊಂಡು ಹೋಗಬಹುದಾಗಿತ್ತು. ಅಲ್ಲದೆ ಹಿಂದೀ ಕಲೆ ಹೊಸಕಾಲದ ಹೊಸಗಾಳಿಯನ್ನು ಹೀರಿಕೊಂಡು ಇನ್ನೂ ಸಾಕಷ್ಟು ಮುಂದಡಿಯಿಟ್ಟಿಲ್ಲ. ಭಾರತವಿನ್ನೂ ಬ್ರಹ್ಮಾವರ್ತ ಆರ್ಯಾವರ್ತಗಳ ಪ್ರಸಿದ್ಧಿಯ ಕಿರಣಗಳಲ್ಲೇ ಚಳಿ ಕಾಯಿಸುತ್ತ ಕುಳಿತಿದೆ. ಈ ಮಂದಗತಿಯು ಕಲಾಪ್ರಪಂಚದಲ್ಲಷ್ಟೇ ಅಲ್ಲ, ಸಮಾಜ ಜೀವನದಲ್ಲೂ ಕಂಡುಬರುತ್ತಿದೆ. ಜೀವನದಲ್ಲೇ ಹೊಸ ಕನಸು ಕಾಣುವ ಹಂಬಲಿಲ್ಲದಾಗ ಕಲೆಯಲ್ಲಿ ಹೇಗೆ ಆ ಹಂಬಲುಂಟಾದೀತು?

ಸಿಂಹಳದಲ್ಲಿ ಸ್ವಾತಂತ್ರ್ಯೋತ್ಸವ

ಸಿಂಹಳವು ಸ್ವತಂತ್ರವಾಯಿತು! ದೇಶಗಳಲ್ಲೆಲ್ಲ ೧೦ ದಿನಗಳ ವರೆಗೆ ರಾಷ್ಟ್ರೀಯ ಉತ್ಸವವನ್ನಾಚರಿಸಲಾಗುತ್ತದ.

ಸ್ವತಂತ್ರ ಲಂಕೆಯ ಸುಂದರ ಸ್ತ್ರೀಯನ್ನು ಆರಿಸುವ ಉತ್ಸವದಲ್ಲಿ ಸ್ತ್ರೀಯರ ಲಕ್ಷ್ಯವು ತೊಡಗಿದೆ. ಅನೇಕ ಸ್ತ್ರೀಯರು ಇದಕ್ಕಾಗಿ ಬಹು ಅಮೂಲ್ಯ ಸೀರೆಗಳನ್ನು ಕೊಂಡಿದ್ದಾರೆ. ಇದೊಂದು ಅಪೂರ್ವ ಚಟುವಟಿಕೆ! ತ್ರೇತಾಯುಗದಲ್ಲಿ ಲಂಕೆಯಲ್ಲಿ ಅಷ್ಟು ಸುಂದರಿಯರಿಲ್ಲವೆಂದು ರಾವಣೇಶ್ವರನು ಆರ್ಯ ಸ್ತ್ರೀಯಾದ ಸೀತೆಯನು ಕದ್ದೊಯ್ದನು. ಇಂದು ಲಂಕೆಯ ನಾಗರಿಕೆಯರ್ರೆ ಆ ನ್ಯೂನತೆಯನ್ನು ತೊಡೆದುಹಾಕಲು ಸ್ಪರ್ಧಿಸುವಂತಿದೆ!

ಕೊಲಂಬೋ ಬಂದರಿನಲ್ಲಿ ಉತ್ಸವದ ಏರ್ಪಾಡು ಜೋರಾಗಿ ನಡೆದಿದೆ. ಪ್ರತಿದಿನವೂ ಅನೇಕ ರಾಷ್ಟ್ರಗಳ ಶುಭ ಸಂದೇಶಗಳು ಮತ್ತು ಪ್ರತಿನಿಧಿಗಳು ಬರುತ್ತಿದ್ದಾರೆ!

ಹಿಂದುಸ್ತಾನದ ಪ್ರತಿನಿಧಿಗಳು ಮತ್ತು ರಾಯಭಾರಿ ಕಚೇರಿಯವರು ಮಹಾತ್ಮರ ನಿಧನದ ಬಗ್ಗೆ ಸೂತಕವನ್ನು ಆಚರಿಸುತ್ತಿರುವುದರಿಂದ ಉತ್ಸವದಲ್ಲಿ ಭಾಗವಹಿಸಿಲ್ಲ.

ಸ್ವಾತಂತ್ರ್ಯದ ಕುರುಹೆಂದು ಲಂಕೆಯ ಸರಕಾರವು ಅನೇಕ ಕೈದಿಗಳನ್ನು ಬಿಡುಗಡೆ ಮಾಡುತ್ತಿದೆ. ಅಲ್ಲಿಯ ಗವರ್ನರರಾದ ಶ್ರೀ ಮೂರರು ಮತ್ತು ಮುಖ್ಯಮಂತ್ರಿಗಳಾದ ಶ್ರೀ ಸೇನಾನಾಯಕೆಯವರು ಬಾನುಲಿಯಿಂದ ಮಾತಾಡುತ್ತಾರೆ. ಲಂಕೆಯಲ್ಲೂ ‘ರಾಮರಾಜ್ಯ’ ಸ್ಥಾಪಿಸಲ್ಪಡಲಿ!

ಭಾರತದ ಬಗ್ಗೆ “ಸಂಡೇ ಟೈಮ್ಸಿ”ನ ಭವಿಷ್ಯ

“ಹಿಂದುಸ್ತಾನದಲ್ಲಿ ಇನ್ನು ಏನು ಸಂಭವಿಸಬಹುದು?” ಎಂದು ಬ್ರಿಟಿಶರು ಒಬ್ಬರನ್ನೊಬ್ಬರು ಕೇಳುತ್ತಿದ್ದಾರೆ.

ಭಿನ್ನಮತದವರನ್ನು ಒಂದುಗೂಡಿಸುವ ಆ ಮಹಾಶಕ್ತಿ, ಮಹಾತ್ಮಾ ಗಾಂಧಿ ಕಣ್ಮರೆಯಾದದರಿಂದ ಕಾಂಗ್ರೆಸ ಪಕ್ಷವು ಇನ್ನು ಇಬ್ಭಾಗವಾಗಿ ಒಡೆದು ಹೋಗುವದೆಂದು ಕೆಲವರ ಅಭಿಪ್ರಾಯವಿರುವದು. ಪಂ. ಜವಾಹರಲಾಲ ಮತ್ತು ಸರದಾರ ಪಟೇಲರಲ್ಲಿಯ ಘರ್ಷಣ ಹೆಚ್ಚಾಗುವದೆಂದು ಇನ್ನು ಕೆಲವರು ವಿಶ್ವಾಸದಿಂದ ಆಡುತ್ತಾರೆ. ತತ್ಪರಿಣಾಮವಾಗಿ ಸರ್ವಾಧಿಕಾರಿತ್ವ ಸ್ಥಾಪಿತವಾಗುವದೆಂದೂ ಹೇಳಲಾಗುತ್ತದೆ.

ಬ್ರಿಟಿಶರ ಈ ಅಭಿಪ್ರಾಯವು ‘ಸಂಡೇಟೈಮ್ಸ್’ ಪತ್ರಿಕೆಯಲ್ಲಿ ಸಂಶಯಕ್ಕೆ ಆಸ್ಪದವಿಲ್ಲದಂತೆ ಪ್ರಕಟವಾಗಿರುವದು. ಅವರ ದಿಲ್ಲಿಯ ಸುದ್ದಿಗಾರರಾದ ಜೊಸೆಲಿನ್ ಹೆನಸೆಯವರು ಬರೆದಿರುವದೇನೆಂದರೆ—

“ಗಾಂಧಿ—ನೆಹರು ಧೋರಣೆಯು ಮುಸಲ್ಮಾನರಿಗೆ ಸಹಾನುಭೂತಿ ಮತ್ತು ಪಾಕಿಸ್ತಾನದೊಡನೆ ಶಾಂತಿ– ಸರದಾರ ಪಟೇಲ ಮತ್ತು ಕಾಂಗ್ರೆಸ ಅನುಯಾಯಿಗಳಿಂದ ಮೊದಲಿನಿಂದಲೂ ವಿರೋಧಿಸಲ್ಪಡುತ್ತಿತ್ತು. ಇನ್ನು ಈ ವಿರೋಧವು ಹೆಚ್ಚಾಗದಿರದು. ಕಾಂಗ್ರೆಸ ಪಕ್ಷದ ಮೇಲೆ ಪ್ರಭುತ್ವವಿದ್ದ ಸರದಾರ ಪಟೇಲರು ರಾಜೀನಾಮೆ ಕೊಟ್ಟರೆ ಪಂ. ಜವಾಹರಲಾಲರೂ ಕೊಡಬೇಕಾಗುವದು. ಆಗ ಸರದಾರರು ಮುಖ್ಯಪ್ರಧಾನರಾಗಿ ಪುನಃ ಅಧಿಕಾರಾರೂಢರಾಗುವದರಲ್ಲಿ ಸಂಶಯವಿಲ್ಲ. ಮಹಾತ್ಮಾ ಗಾಂಧಿಯವರ ಉಪವಾಸದ ಬೆದರಿಕೆ ಈ ಘರ್ಷಣವನ್ನು ಮೊನ್ನೆ ಮೊನ್ನೆಯವರೆಗೆ ತಡೆದಿತ್ತು. ಹಿಂದುಸ್ತಾನದ ರಾಜಕೀಯವು ಸದ್ಯಕ್ಕೆ ದ್ರಾವಕ ಸ್ಥಿತಿಯಲ್ಲಿದ್ದರೂ ಇಂದಿನ ಮಂತ್ರಿಮಂಡಲವು ಮುಂಗಡ ಪತ್ರಿಕೆಯ ಅಧಿವೇಶನ ಮುಗಿವ ವರೆಗೆ ಅಧಿಕಾರದಲ್ಲುಳಿಯಬಹುದೆಂದು ತರ್ಕಿಸಲಾಗಿದೆ. ಪಟೇಲರು ಮಂತ್ರಿಮಂಡಲದಲ್ಲಿಯೇ ಗಟ್ಟಿಗರು. ಉಗ್ರೋಪಾಯ ಕೈಕೊಳ್ಳಬೇಕೆಂಬದು ಅವರ ಅಭಿಪ್ರಾಯ. ಕಾಯಿದೆ ಮತ್ತು ಸುವ್ಯವಸ್ಥೆ ಅವಶ್ಯವಿದ್ದ ಭಾರತವು ಅವರ ಕಡೆಗೆ ಒಲಿಯುತ್ತಿದ್ದರೂ ಪ್ರಜಾಸತ್ತೆ ಸರ್ವಾಧಿಕಾರಿತ್ವಕ್ಕೆ ಸ್ಥಾನ ಮಾಡಿಕೊಡುವ ಗಂಡಾಂತರ ಅದರಲ್ಲಿರುವದು”

ಭದ್ರತಾ ಮಂಡಳದಲ್ಲಿ ಕಾಶ್ಮೀರ ಸಮಸ್ಯೆ

ಮಹಾತ್ಮರ ಕೊಲೆಯ ಮೂಲಕವಾಗಿ ಭದ್ರತಾ ಮಂಡಲವು ಮೂರು ದಿನ ಸ್ಥಗಿತವಾಗಿತ್ತು. ತಾ. ೩ ರ ಸಂಜೆಗೆ ಮತ್ತೆ ಪ್ರಾರಂಭವಾಗಿ ಕಾಶ್ಮೀರ ಸಮಸ್ಯೆಯನ್ನು ಚರ್ಚೆಗೆ ತೆಗೆದುಕೊಂಡಿತು. ಆ ಮುನ್ನ ಅಧ್ಯಕ್ಷರು ಮಹಾತ್ಮರಿಗೆ ಗೌರವ ಸಮರ್ಪಣೆ ಮಾಡಿದರು.

ಹಿಂದುಸ್ತಾನ ಸರಕಾರದ ಪರವಾಗಿ ಶ್ರೀ. ಗೋಪಾಲಸ್ವಾಮಿ ಅಯ್ಯಂಗಾರರು ಅರ್ಥಕ್ಕೆ ನಿಲ್ಲಿಸಿದ ತಮ್ಮ ಹೇಳಿಕೆಯನ್ನು ಮುಂಬರಿಸಿದರು. ಅದರ ಆಶಯ ಹೀಗಿದೆ:

ಸಂಯುಕ್ತ ರಾಷ್ಟ್ರಸಂಘದ ಮೇಲ್ವಿಚಾರಣೆಯಲ್ಲಿ ಕಾಶ್ಮೀರದ ಸಾರ್ವತ್ರಿಕ ಮತಗಣನೆ ನಡೆಯಬೇಕೆಂಬ ಮೊದಲನೆಯ ಗೊತ್ತುವಳಿಯನ್ನು ಮತ್ತು ಯುಕ್ತ ರಾಷ್ಟ್ರ ಸಂಘದ ಸೌಹಾರ್ದ ಮಂಡಲವು ಹಿಂದುಸ್ತಾನ ಪಾಕಿಸ್ತಾನ ಘರ್ಷಣೆ ನಿವಾರಿಸುವ ಎಲ್ಲ ವಿಷಯಗಳನ್ನು ಪರಿಶೀಲಿಸಬಹುದೆಂದು ಎರಡನೆಯ ಗೊತ್ತುವಳಿಯನ್ನು ಅಧ್ಯಕ್ಷರು ಮಂಡಿಸಿದ್ದರು.

ಆದರೆ ಭದ್ರತಾ ಮಂಡಲವು ಕಾಶ್ಮೀರದ ರಕ್ತಪಾತವನ್ನು ಮೊದಲು ನಿಲ್ಲಿಸಬೇಕು. ಗುಡ್ಡಗಾಡಿನ ಪಠಾಣರು ಪಾಕಿಸ್ತಾನದ ಮುಖಾಂತರ ಕಾಶ್ಮೀರದ ಮೇಲೆ ಏರಿಬರುತ್ತಿರುವರು. ಇವರನ್ನು ತಡೆಗಟ್ಟಲು ಪಾಕಿಸ್ತಾನವು ಯುದ್ಧವನ್ನೇ ಹೂಡಬೇಕಾಗುವದೆಂದು ಹೇಳುತ್ತದೆ. ಅಂತರಾಷ್ಟ್ರೀಯ ಕರ್ತವ್ಯಪಾಲನೆಗೆ ಪಾಕಿಸ್ತಾನವು ಅವಶ್ಯ ಉಪಾಯ ಕೈಕೊಳ್ಳುವದು ಕ್ರಮ ಪ್ರಾಪ್ತವಿದೆ. ಆದ್ದರಿಂದ ಅಧ್ಯಕ್ಷ ಲ್ಯಾಂಗೆನ ಹೊವರ ಎರಡೂ ಗೊತ್ತುವಳಿಗಳು ಹುರುಳಿಲ್ಲದವುಗಳಾಗಿವೆ. ಎಂದು ಹೇಳಿ ಅವರು ಎಂದು ತಿದ್ದುಪಡಿ ಸೂಚಿಸಿದರು.

(೧) ಕಾಶ್ಮೀರಕ್ಕೆ ಮೇಲೆ ದಾಳಿ ಮಾಡಿದ ಪುಂಡರನ್ನು [illegible]ದಿಂದ ಹೊರದೂಡಬೇಕೆಂದೂ ಹೊಸದಾ[illegible]ವರಿಗೆ ದ್ವಾರಕೊಡಕೂಡದೆಂದೂ ಈ ಸಭೆ ಪಾಕಿಸ್ತಾನಕ್ಕೆ ಶಿಫಾರಸು ಮಾಡುತ್ತದೆ.

(೨) ಭದ್ರತಾ ಮಂಡಲವು ನೇಮಿಸುವ ಸಮಿತಿಯ ಸಲಹೆಯಂತೆ ಅದರ ನಿರೀಕ್ಷೆಯಲ್ಲಿ ಕಾಶ್ಮೀರದಲ್ಲಿ ಸಾರ್ವತ್ರಿಕ ಮತಗಣನೆ ಮಾಡಬೇಕೆಂದು ಈ ಸಭೆ ಶಿಫಾರಸು ಮಾಡುತ್ತದೆ.

ಪಾಕಿಸ್ತಾನದ ಪ್ರತಿನಿಧಿಗಳಾದ ಸರ ಮಹಮ್ಮದ ಜಾಫರುಲ್ಲಾರು ಶ್ರೀ. ಅಯ್ಯಂಗಾರರ ಸೂಚನೆಗೆ ಪ್ರತಿಕೂಲವಾಗಿ ಮಾತನಾಡಿದರು. ಅವರ ಮಾತಿನ್ನೂ ಮುಗಿಯದಿರುವಾಗ ವೇಳೆಯಾದ್ದರಿಂದ ಸಭೆ ಮುಂದುವರಿದಿತು.

ಅಂತೂ ಕಾಶ್ಮೀರದ ಸಮಸ್ಯೆ ಇನ್ನೂ ಸುಗಮವಾಗಿಲ್ಲ. ಈ ಮುಂದೆ ಏನಾಗುವದೋ ನೋಡುವಾ.

ಕರ್ಮವೀರ ಹರಿಜನ ಪುರವಣಿ

ಕಾಂಗ್ರೆಸಿನ ಸ್ಥಿತಿ

ಭಾರತದ ಅತಿ ಹಳೆಯ ರಾಷ್ಟ್ರೀಯ ರಾಜಕೀಯ ಪಕ್ಷವಾಗಿದ್ದು ಅನೇಕ ಅಹಿಂಸಾತ್ಮಕ ಕಾಳಗಗಳಿಂದ ಸ್ವಾತಂತ್ರ್ಯವನ್ನು ಗಳಿಸಿದ ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸಾಯಗೊಡುವದು ಸಾಧ್ಯವಿಲ್ಲ. ಸಾವು ಬರುವದಾದರೆ ಅದಕ್ಕೂ ರಾಷ್ಟ್ರಕ್ಕೂ ಸೇರಿಯೆ ಸಾವು ಬಂದೀತು. ಅದರ ಜೀವಂತ ವಸ್ತು ಯಾವಾಗಲೂ ಬೆಳೆಯುತ್ತಲೇ ಹೋಗಬೇಕು. ಇಲ್ಲವೆ ಸಾಯಬೇಕೆಂಬುದು ನಿಯಮ- ಕಾಂಗ್ರೆಸ್ಸು ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಿದೆ; ಆದರೆ ಆರ್ಥಿಕ ಸ್ವಾತಂತ್ರ್ಯವನ್ನು, ಸಾಮಾಜಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಸಾಧಿಸುವದು ಹಾಗೆಯೆ ಉಳಿದಿದೆ. ಈ ಸ್ವಾತಂತ್ರ್ಯಗಳು ರಾಜಕೀಯ ಸ್ವಾತಂತ್ರ್ಯಕ್ಕಿಂತಲೂ ಕಠಿನವಾದವು. ಏಕೆಂದರೆ ಅವು ರಚನಾತ್ಮಕವಾಗಿವೆ; ಅವು ಅಷ್ಟು ಉತ್ತೇಜಕವಾಗಿಯೂ ಇರುವದಿಲ್ಲ. ಅದ್ಭುತವೂ ಇರುವದಿಲ್ಲ. ಸರ್ವವ್ಯಾಪಿ ರಚನಾತ್ಮಕ ಕಾರ್ಯಕ್ಕೆ ಪ್ರಜಾಕೋಟಿಯ ಪ್ರತಿಯೊಂದು ಘಟಕದ ಚೈತನ್ಯದ ಸಂಧಾನ ಬೇಕಾಗುತ್ತದೆ.

ಕಾಂಗ್ರೆಸ್ಸಿಗೆ ಸ್ವಾತಂತ್ರ್ಯದ ಪ್ರಾಥಮಿಕ ಹಾಗು ಪ್ರಧಾನ ಭಾಗ ಕೈಸೇರಿದೆ. ಆದರೆ ಕಷ್ಟತರವಾದ ಭಾಗ ಮಾತ್ರ ಇನ್ನೂ ಬರಬೇಕಾಗಿದೆ. ಪ್ರಜಾತಂತ್ರದ ದುರ್ಗಮ ದುರ್ಗವನ್ನೇರುವಲ್ಲಿ ಅದು ಅಪರಿಹಾರ್ಯವಾಗಿ ಎಷ್ಟೋ ಹೊಲೆಗೇರಿಗಳನ್ನುಂಟು ಮಾಡಿಬಿಟ್ಟಿದೆ. ಅಲ್ಲಿ ದುಷ್ಟಾಚಾರಗಳೂ ಹೆಸರಿಗೆ ಮಾತ್ರ ಜನಪ್ರಿಯ ಪ್ರಜಾತಂತ್ರಾತ್ಮಕವೆನಿಸುವ ಸಂಸ್ಥೆಗಳೂ ಬೆಳೆದಿವೆ. ಈ ಕಳೆ ಬೆಳೆದ ಅನಾಥವ್ಯ ವೃದ್ಧಿಯನ್ನು ತಪ್ಪಿಸುವ ಬಗೆ ಹೇಗೆ?

ಕಾಂಗ್ರೆಸ್ಸು ತನ್ನ ಸದಸ್ಯರ ವಿಶೇಷ ಯಾದಿಯನ್ನು ಬಿಟ್ಟು ಬಿಡಲೇಬೇಕು. ಈ ಯಾದಿಯಲ್ಲಿ ಎಂದೂ ಒಂದು ಕೋಟಿಗಿಂತ ಹೆಚ್ಚು ಸದಸ್ಯರು ಇದ್ದಿದ್ದಿಲ್ಲ. ಆದಾಗ್ಯೂ ಅವರನ್ನು ಗುರುತು ಹಚ್ಚುವದು ಸುಲಭವಾಗಿದ್ದಿಲ್ಲ. ಆದರೆ ಅದಕ್ಕೊಂದು ಅಜ್ಞಾತ ಸದಸ್ಯ ಯಾದಿಯಿತ್ತು. ಅದರಲ್ಲಿ ಕೋಟ್ಯಂತರ ಅಲಿಖಿತ ಸದಸ್ಯರಿದ್ದರು. ಅವರ ಅವಶ್ಯಕತೆ ಬೀಳುವ ಸಂಭವವೇ ಇದ್ದಿಲ್ಲ. ಇನ್ನು ಮೇಲೆ ಕಾಂಗ್ರೆಸ್ಸಿನ ಸದಸ್ಯರ ಯಾದಿಯಲ್ಲಿ ಕಾಣಬರುವ ಎಲ್ಲ ಸ್ತ್ರೀ ಪುರುಷರನ್ನೊಳಗೊಂಡಿರಬೇಕು. ಅದರಲ್ಲಿ ಯಾವ ತಕ್ಕ ಹೆಸರೂ ಸೇರದಂತೆ ಯಾವ ನ್ಯಾಯವಾದ ಹೆಸರೂ ತಪ್ಪಿಹೋಗದಂತೆ ನೋಡಿಕೊಳ್ಳುವದು ಕಾಂಗ್ರೆಸ್ಸಿನ ಕರ್ತವ್ಯ. ಅವರ ಸ್ವಂತ ಯಾದಿಯೊಂದು ರಾಷ್ಟ್ರಸೇವಕರ ವರ್ಗವನ್ನು ಒಳಗೊಂಡಿರಬೇಕು. ಅವರು ತಮಗೆ ಆಗಿಂದಾಗ್ಗೆ ಒಪ್ಪಿಸಲ್ಪಟ್ಟ ಕೆಲಸವನ್ನು ಮಾಡುವ ಕಾರ್ಯಕರ್ತರಿರಬೇಕು.

ದೇಶದ ದುರ್ಭಾಗ್ಯದಿಂದ ಈ ಕಾರ್ಯಕರ್ತರಲ್ಲಿ ಅಧಿಕಾಂಶ ಜನರನ್ನು ಸದ್ಯಕ್ಕಂತೂ ನಗರವಾಸಿಗಳೊಳಗಿಂದ ಆರಿಸಬೇಕಾಗುವದು ಮತ್ತು ಅವರು ಭಾರತದ ಹಳ್ಳಿಗಳಿಗಾಗಿ ಹಳ್ಳಿಗಳಲ್ಲಿಯೆ ಕೆಲಸ ಮಾಡಬೇಕಾಗುವದು. ಬರುತ್ತ ಬರುತ್ತ ಅವರಲ್ಲಿ ಹೆಚ್ಚು ಹೆಚ್ಚು ಹಳ್ಳಿಗರು ಸೇರುವಂತಾಗಬೇಕು.

ಈ ಜನಸೇವಕರು ತಂತಮ್ಮ ಕ್ಷೇತ್ರಗಳಲ್ಲಿ ಶಾಸನಬದ್ಧವಾಗಿ ಮತದಾರ ಯಾದಿಯಲ್ಲಿ ಕಾಣಿಸಲ್ಪಟ್ಟು ಮತದಾರರ ಮಧ್ಯದಲ್ಲಿ ಕೆಲಸ ಮಾಡುತ್ತ ಅವರ ಸೇವೆ ಮಾಡಬೇಕೆಂದು ನಿರೀಕ್ಷಿಸಲಾಗಿದೆ. ಅನೇಕ ಪಕ್ಷಗಳೂ ಅವರ ಪ್ರೀತಿ ಸಂಪಾದನೆಗೆ ಹಾತೊರೆಯುವವು. ಅವರಲ್ಲಿ ಅತ್ಯುತ್ತಮರಾದವರಿಗೇ ಅದು ಲಭ್ಯವಾಗುವದು. ಈ ರೀತಿಯಿಂದ ಮತ್ತು ಇದೊಂದು ರೀತಿಯಿಂದ ಕಾಂಗ್ರೆಸ್ಸು ದೇಶದಲ್ಲಿ ಪ್ರಜ್ವಲಿತವಾಗಿದ್ದರೂ ಈಗ ಜಾರುತ್ತಲಿರುವ ತನ್ನ ಸ್ಥಾನಮಾನವನ್ನು ಗಟ್ಟಿ ಮಾಡಿಕೊಳ್ಳಬಲ್ಲದು. ನಿನ್ನೆಯತನಕವೂ ಕಾಂಗ್ರೆಸ್ಸು ತನಗರಿಯದೆಯೆ ರಾಷ್ಟ್ರದ ಸೇವಕವಾಗಿತ್ತು, ನಿಜವಾಗಿ ಅದಾಗಿದ್ದುದು ಖುದಾಯಿ ಖಿದಮತಗಾರ- ಈಶ ಸೇವಕ. ಈಗ ಅದು ತನ್ನ ಅಂತರಂಗಕ್ಕೂ ಇಡೀ ಜಗತ್ತಿಗೂ ಸಾರಿ ಹೇಳಲಿ- "ನಾನು ಈಶ ಸೇವಕ ಮಾತ್ರ, ಮತ್ತೇನು ಅಲ್ಲ" ಎಂದು. ನಶ್ವರ ಅಧಿಕಾರ ಪ್ರಾಪ್ತಿಯ ಕಚ್ಚಾಟಗಳಲ್ಲಿ ಅದು ಅನೇಕವಾದರೆ, ನಿರ್ನಾಮದ ದಿವಸವನ್ನು ಅದು ಬೇಗನೆ ಕಾಣದಿರದು.

ದೂರದ ದೃಶ್ಯವೊಂದನ್ನಷ್ಟೇ ಈಗ ತೆರೆದು ತೋರಿಸಿದ್ದೇನೆ. ಅವಕಾಶ ದೊರೆತರೆ ಆರೋಗ್ಯವಿದ್ದರೆ ರಾಷ್ಟ್ರ ಸೇವಕರು ತಮ್ಮೊಡೆಯರಾದ ದೇಶದ ನರನಾರಿಯರ ಗೌರವಾದರಗಳನ್ನು ಹೇಗೆ ಸಂಪಾದಿಸಿ ಹೆಚ್ಚಿಸಿಕೊಳ್ಳಬಹುದೆಂಬುದನ್ನು ಈ ಪತ್ರಿಕೆಯಲ್ಲಿ ಚರ್ಚಿಸುವ ಆಶೆ ನನಗಿದೆ.

ಹೊಸದಿಲ್ಲಿ ೨೭—೧—೪೮ ಮೋ. ಕ. ಗಾಂಧಿ

ಹರಿಜನರೂ ದೇವಾಲಯ ಪ್ರವೇಶವೂ

ಪಠಾಣದ ಗೆಳೆಯನೊಬ್ಬನು ಬರೆಯುತ್ತಾನೆ.

“ಹರಿಜನರ ದೇವಾಲಯ ಪ್ರವೇಶದ ಸುದ್ದಿಗಳು ನಿಮಗೆ ಬರುತ್ತಿರಬೇಕು. ಈಗಿನ ದೇವಾಲಯ ವಿಶ್ವಸ್ತರ ಸಮ್ಮತಿಯಿರಲಿ ವಿರೋಧವಿರಲಿ, ಲೆಕ್ಕಿಸದೆ ಹರಿಜನರನ್ನು ಪ್ರವೇಶಗೊಳಿಸಲಾಗುತ್ತಿದೆ. ವೈಷ್ಣವ ಹವೇಲಿಗಳಲ್ಲಾಗಲಿ ರಾಮಜಿ ಮಂದಿರಗಳಲ್ಲಾಗಲಿ ಅವರಿಗೆ ಪ್ರವೇಶ ಕೊಡಲೇಬೇಕೆಂದು ಹಟತೊಡುವದಕ್ಕಾದರೂ ಅರ್ಥವುಂಟು. ಆದರೆ ಅವರು ನಂಬದಿರುವ ಸ್ವಾಮಿ ನಾರಾಯಣ ಅಥವಾ ಜೈನ ಗುಡಿಗಳಿಗೆ ಒಯ್ಯುವದರಿಂದ ಏನು ಹಿತ ಸಾಧಿಸುವದೊ ತಿಳಿಯದಾಗಿದೆ. ಅಥವಾ ಅಲ್ಲಿ ಪ್ರವೇಶ ಕೊಟ್ಟಾಕ್ಷಣ ಅವರಿಗೆ ಒಡನೆ ಆ ದೇವರುಗಳಲ್ಲಿ ಭಕ್ತಿ ಉಂಟಾಗುವದೆಂದು ತಿಳಿದುಕೊಳ್ಳಲಾಗಿದೆಯೇ?”

ಇನ್ನೊಂದು ಪತ್ರ ಅಹಮದಾಬಾದಿನಿಂದ ಬಂದಿದೆ. ಅದರಲ್ಲಿ ಸಹಿಯೂ ಇಲ್ಲ. ಬರೆದವರ ಹೆಸರೂ ಇಲ್ಲ. ಬರಿ, “ನಿಮ್ಮ ದಲಿತರು!” ಎಂದಿಷ್ಟೇ ಗುಪ್ತಾಂಕಿತವಿದೆ. ಕೈಬರಹವನ್ನೂ ಭಾಷಾಲಕ್ಷಣವನ್ನೂ ನೋಡಿದರೆ ಅದನ್ನು ಬರೆದವರು ಹರಿಜನರಾರೂ ಅಲ್ಲವೆಂದು ಸ್ಪಷ್ಟವಾಗುತ್ತದೆ. ಏಕೆಂದರೆ ಹರಿಜನರು ನನಗೆ ಚೆನ್ನಾಗಿ ಗೊತ್ತು. ಅದರ ಮುಖ್ಯಾಂಶ ಇಂತಿದೆ.

“ತಾ. ೧೪ಕ್ಕೆ ಮಕರ ಸಂಕ್ರಾಂತಿಯ ಹಬ್ಬದ ದಿನ ಹರಿಜನರು ದೇವಸ್ಥಾನಗಳಿಗೆ ಹೋಗಿ ಬರಲು ಪ್ರಯತ್ನಿಸಿದರು. ಮುಂಜಾನೆ ೮ ಗಂಟೆಗೆ ಸ್ವಾಮಿ ನಾರಾಯಣ ಮಂದಿರದ ಬಳಿಗೆ ಭಜನೆ ಮಾಡುತ್ತ ಹೋದಾಗ ಅದರ ಬಾಗಿಲು ಮುಚ್ಚಿ ಖಂಭಾಟಿ ಬೀಗ ಜಡಿಯಲ್ಪಟ್ಟಿದ್ದು ಕೇಳಿಸಿತು. ಅವರು ಸತ್ಯಾಗ್ರಹ ಮಾಡುತ್ತ ಇನ್ನೂ ಅದರ ಬಾಗಿಲಲ್ಲೆ ಕುಳಿತಿದ್ದಾರೆ. ಅವರು ಕೆಲಸಕ್ಕೆ ಹೋಗಲು ಒಪ್ಪುವದಿಲ್ಲ. ಸ್ಥಳೀಯ ಕಾಂಗ್ರೆಸ್ ಸಮಿತಿ ಅವರ ಕೃತಿಯನ್ನು ಖಂಡಿಸದಿರುವುದು ಎಷ್ಟು ವಿಚಿತ್ರ! ಸ್ವಾತಂತ್ರ್ಯ ದೊರೆತ ಮೇಲೂ ಅವರಿಗೆ ಅವರ ಹಕ್ಕುಗಳು ಸಿಗದೆ ಹೋದರೆ ಇನ್ನಾವಾಗ ಸಿಗಬೇಕು? ಸ್ಥಳೀಯ ಕಾಂಗ್ರೆಸ್ಸಿಗರೇ ಅಲ್ಲಿಗೆ ಹೋಗುತ್ತಾರೆ, ಒಂದೆರಡು ಗಳಿಗೆಯಲ್ಲೆ ತಿರುಗಿ ಬಂದು ಬಿಡುತ್ತಾರೆ. ಮನಃಪೂರ್ವಕ ಪ್ರಯತ್ನ ಮಾಡುವವರಾಗಲಿ ಪರಿಣಾಮಕರ ಸಹಾಯವನ್ನು ನೀಡುವವರಾಗಲಿ ಇಲ್ಲ. ಬಡ ಹರಿಜನರು ನಡುಗುವ ಚಳಿಯಲ್ಲಿ ಕುಳಿತು ಭಕ್ತಿಗೀತೆಗಳನ್ನು ಒದರುತ್ತ ಬಿದ್ದಿರಬೇಕು. ಈ ಬಿಕ್ಕಟ್ಟನ್ನು ಕೊನೆಗಾಣಿಸುವವರು ಯಾರು? ಇಲ್ಲಿಯ ಕಾಂಗ್ರೆಸ್ಸಿಗರಲ್ಲಿ ವ್ಯಕ್ತಿತ್ವವುಳ್ಳವನಾಗಲಿ ಶೀಲಸಂಪನ್ನನಾಗಲಿ ಒಬ್ಬನೂ ಇಲ್ಲ. ಡಾಕೋರದಲ್ಲಿ ರವಿಶಂಕರ ಮಹಾರಾಜರು ತಮ್ಮ ಪ್ರಭಾವಬಲದಿಂದ ಹರಿಜನರಿಗೆ ದೇವಾಲಯ ಪ್ರವೇಶ ಮಾಡಲು ಸಹಾಯ ಮಾಡಿದರು. ಆದರೆ ಅಲ್ಲಿ ಅವರಿಗೆ ಪ್ರವೇಶ ಕೊಡಿಸುವವರಾರೂ ಇಲ್ಲ. ಹರಿಜನರು ತಮ್ಮ ಸ್ವಯಂಸಿದ್ಧ ಹಕ್ಕಿನಿಂದ ಹೀಗೆ ಸದಾ ಕಾಲವು ವಂಚಿಸಲ್ಪಡಬೇಕೆ? ನೀವು ಕೈ ಹಾಕುವದೇ ಇದಕ್ಕೆ ಶರಣೋಪಾಯ. ಇಂದಿಗೆ ಮೂರು ದಿನವಾಯಿತು. ಹರಿಜನರು ಆ ದೇವಾಲಯದ ಮುಂದೆ ಚಳಿಗಾಳಿಯ ನಿರ್ದಯತೆಯನ್ನು ಭೋಗಿಸುತ್ತ ಕುಳಿತಿದ್ದಾರೆ. ಅವರು ಕಾಯದೆಯ ಸಹಾಯ ಪಡೆಯಲು ಬಯಸುವದಿಲ್ಲ. ಸವರ್ಣರೆನಿಸುವವರ ಹೃದಯ ಕರಗುವ ಲಕ್ಷಣವೂ ಕಾಣಿಸುವದಿಲ್ಲ. ಇದರ ಫಲವೇನಾಗಬಹುದು? ನೀವು ದಯವಿಟ್ಟು ಹಾದಿ ತೋರುವಿರಾ?”

ಮೊದಲ ಪತ್ರ ಬರೆದವನು ಮಾಡಿದ ತಾರತಮ್ಯಕ್ಕೆ, ನನ್ನ ಅಭಿಪ್ರಾಯದಲ್ಲಿ, ಏನೂ ಅರ್ಥವಿಲ್ಲ. ಸ್ವಾಮಿ ನಾರಾಯಣ ದೇವಸ್ಥಾನಗಳಿಗೂ ಜೈನರ ದೇವಾಲಯಗಳಲ್ಲಿಯೂ ಪ್ರವೇಶಿಸುವ ಹಕ್ಕು ಹರಿಜನರಿಗೆ ಇದೆ. ಅವರು ಹಾಗೆ ಮಾಡುತ್ತಲೂ ಇದ್ದಾರೆ. ಜನರಿಗೆ ಪ್ರವೇಶ ಕೊಡಲೇಬೇಕು. ಈಗ ಅನೇಕ ವರ್ಷಗಳಿಂದ ಹರಿಜನರಿಗೂ ಬ್ರಾಹ್ಮಣರಷ್ಟೇ ದೇವಸ್ಥಾನ ಪ್ರವೇಶಾಧಿಕಾರಬೇಕೆಂಬ ಚಳವಳಿ ನಡೆದಿದೆ. ಅದಕ್ಕೆ ಅಷ್ಟಿಷ್ಟು ಯಶಸ್ಸೂ ದೊರೆತಿದೆ. ಈಗ ಮುಂಬಯಿ ಸರಕಾರ ಆ ವಿಷಯದಲ್ಲಿ ಕಾಯದೆ ಮಾಡಿರುವದರಿಂದ ಇನ್ನು ಸತ್ಯಾಗ್ರಹಕ್ಕೆ ಅವಕಾಶ ಉಳಿದಿಲ್ಲವೆಂದು ತೋರುತ್ತದೆ. ಕಾಯದೆ ಜನಾಭಿಪ್ರಾಯದ ಪ್ರತೀಕವಾಗಿದ್ದರೆ ಅದಕ್ಕೆ ಸ್ವಯಂಪ್ರೇರಿತ ಸ್ವೀಕಾರ ಮತ್ತು ಗೌರವ ದೊರೆಯುವದು. ಬದಲಾಗಿ ಜನಾಭಿಪ್ರಾಯಕ್ಕೆ ವಿರುದ್ಧವಾಗಿದ್ದರೆ ಅದನ್ನು ಆಚರಣೆಗೆ ತರಲು ಆತಂಕವಾಗುವದು. ಪ್ರಜಾತಂತ್ರದಲ್ಲಿ ಕಾಯದೆಯನ್ನು ಬಲಾತ್ಕಾರದಿಂದ ಆಚರಣೆಗೆ ಬರುವಂತೆ ಮಾಡುವದು ತರವಲ್ಲ. ಅದಕ್ಕೆ ಇಂಗಿತಜ್ಞತೆಯೂ ಸಮಾಧಾನವೂ ಬೇಕು. ಸುಧಾರಕನು ಜಾಣಾಕ್ಷತೆಯಿಂದಲೂ ವಿವೇಕದಿಂದಲೂ ಅದನ್ನು ಉಪಯೋಗಿಸಿದರೆ ಅದು ಫಲಕಾರಿಯಾಗುವದು. ಅವಸರ ಮಾಡಿದರೆ ಇಲ್ಲವೆ ಸೈರಣೆ ಕೆಟ್ಟರೆ ಉದ್ದೇಶಕ್ಕೆ ಅಪಜಯ ಬರುವದು.

ವಿಶ್ವಸ್ತರೇನೂ ದೇವಾಲಯಗಳ ಒಡೆಯರಲ್ಲ. ಒಡೆಯರಾದವರಿಗೆ ಕೂಡ, ಅವರಲ್ಲಿ ಜನಸಾಮಾನ್ಯಕ್ಕೆ ಪ್ರವೇಶವಿದ್ದರೆ ತಮ್ಮ ಗುಡಿಯ ಮೇಲಿನ ಸ್ವಾಮಿತ್ವವನ್ನು ಕಳೆದುಕೊಳ್ಳುತ್ತಾರೆ. ದೇವಾಲಯಗಳ ನಿಜವಾದ ಒಡೆಯರೆಂದರೆ ಅಲ್ಲಿ ಹೋಗಿ ಆರಾಧಿಸುವ ಭಕ್ತರು. ಈ ದೃಷ್ಟಿಯಿಂದ ನೋಡಿದರೆ ಜೈನ ಮತ್ತು ಸ್ವಾಮಿ ನಾರಾಯಣ ದೇವಾಲಯಗಳು ಕೂಡ ಹಿಂದು ಗುಡಿಗಳೆ. ನಾನು ಸ್ವತಃ ಇಂಥ ಗುಡಿಗಳಿಗೆ ಹೋಗಿದ್ದುಂಟು. ಆಗ ನನ್ನ ಜಾತಿಯಾವುದೆಂದು ಯಾರೂ ಕೇಳಬರಲಿಲ್ಲ. ನಾನು ಹಿಂದುವಿನಂತೆ ಕಾಣುತಿದ್ದೆನಲ್ಲ, ಅಷ್ಟೇ ಸಾಕು. ನನ್ನಂತೆ ಬಂದು ಹೋಗುವ ನೂರಾರು ಜನರಿಗೂ ಇದೇ ಮಾತು ಅನ್ವಯಿಸುತ್ತದೆ. ಆದುದರಿಂದ ಹಿಂದುಗಳಿಗೆ ಪ್ರವೇಶವಿರುವ ಎಲ್ಲ ದೇವಾಲಯಗಳಿಗೂ ಹರಿಜನರಿಗೆ ಪ್ರವೇಶವಿರತಕ್ಕದ್ದು. ಇಂದು ಅರಿವುಳ್ಳ ಜನಾಭಿಪ್ರಾಯವೂ ಅದರ ಪ್ರತೀಕವಾಗಿರುವ ಕಾಯಿದೆಯೂ ಹರಿಜನರನ್ನು ಬೇರೆಯೊಂದು ಜಾತಿಯೆಂದು ಭಾವಿಸದೆ ಹಿಂದು ಸಮಾಜದೊಳಗಿನ ನಾಲ್ಕು ಅಥವಾ ಹದಿನೆಂಟು ವರ್ಣಗಳಲ್ಲಿ ಸಮಾವೇಶವಾದವರೆಂದು ಬಗೆಯುತ್ತದೆ. ಆದರಿಂದ ಇದರ ವಿರುದ್ಧಾಭಿಪ್ರಾಯಕ್ಕೆ ಬೆಲೆ ಬಾರದು. ದೇವಾಲಯವನ್ನು ಜಾಗ್ರತ ಸ್ಥಾನವನ್ನಾಗಿ ಮಾಡುವದು ಭಕ್ತನ ಭಕ್ತಿ. ಗುಡಿಯಲ್ಲಿರುವ ಮೂರ್ತಿ ಕೇವಲ ಭಕ್ತಹೃದಯದ ಪ್ರತಿಬಿಂಬ.

ಮೇಲೆ ಹೇಳಿದ್ದೆಲ್ಲ ನನ್ನ ಅಂತರಂಗವಾಗಿದ್ದರೂ ಎರಡನೆಯ ಪತ್ರದಲ್ಲಿ ಹೇಳಿದ ಹರಿಜನರ ದೃಢತೆಯನ್ನು ನಾನು ಅಭಿನಂದಿಸಲಾರೆ. ದೇವಾಲಯದೆದುರು ಧರಣೆ ಕೂತವರು ನಿಜವಾದ ಭಕ್ತರಲ್ಲ. ಅವರಿಗೆ ದೇವದರ್ಶನ ಆತುರವಿಲ್ಲ. ಅವರಿಗೆ ಬೇಕಾದ್ದು ಕೇವಲ ತಮ್ಮ ಹಕ್ಕಿನ ಸ್ಥಾಪನೆ. ಅಸ್ಪೃಶ್ಯತೆ ಮುಟ್ಟಿಗೆ ಅವರು ನಿಜವಾದ ಧರ್ಮದ ಸಂಪರ್ಕದಿಂದ ಚ್ಯುತರಾಗಿದ್ದಾರೆ. ಪತ್ರಗಳನ್ನು ಹೆಸರು ಕೊಡದೆ ಬರೆಯುವದೂ ಭಕ್ತನ ಲಕ್ಷಣವಲ್ಲ. ನಿಜವಾದ ಭಕ್ತನು ನಂದನಾದನಂತೆ ಪರಮಾತ್ಮನಲ್ಲದೆ ಬೇರೆ ಯಾವನ ಸಹಾಯವನ್ನೂ ಒಲ್ಲೆನೆನ್ನುವನು. ಇಂದು ಉಚ್ಚಕುಲದವರೆಂದು ಹೇಳಿಕೊಳ್ಳುವ ಬ್ರಾಹ್ಮಣರು ಕೂಡ ಅವರನ್ನು ಗೌರವಿಸುತ್ತಾರೆ. ಅಂಥ ನಂದನಾರನೊಬ್ಬನು ಸ್ವೇಚ್ಛೆಯಿಂದ ಹರಿಜನರಾದವರಲ್ಲಿ ಉದಯಿಸಲೆಂದು ನನ್ನ ಆಕಾಂಕ್ಷೆ. ಜನ್ಮತಃ ಹರಿಜನರಾದವರೂ ಅದೇ ಆಶೆಯನ್ನು ಇಟ್ಟುಕೊಂಡಿದ್ದರೆಂದು ನನಗೆ ಗೊತ್ತಿದೆ. ಹರಿಜನೇತರ ಹಿಂದು ಸಮಾಜಕ್ಕೆ ಬೇಕಾಗಿದ್ದಾರೆ. ಹರಿಜನರನ್ನು ಅದು ಗೌರವಾರ್ಥಗಳಿಂದ ದೇವಸ್ಥಾನಗಳಿಗೆ ಕರೆದೊಯ್ಯಲಿ. ಇಲ್ಲವಿದ್ದರೆ, ಆ ಮನಃಪೂರ್ವಕ ಬದಲಿ ಬರುವ ವರೆಗೆ ಹರಿಜನರು ತಮ್ಮ ಗುಡಿಸಲುಗಳಲ್ಲೆ ಕುಳಿತು ತಮ್ಮ ಭಕ್ತಿಗಂಗೆಯಿಂದಲೆ ತಮ್ಮನ್ನು ಪಾವನಗೊಳಿಸಿಕೊಳ್ಳಲಿ. ಯಾವ ದೇವಾಲಯದ ಮುಂದೆಯೂ ಅವರು ಧರಣೆ ಹೂಡಬೇಕಾಗಿಲ್ಲ. ನನ್ನ ಅಭಿಪ್ರಾಯದಲ್ಲಿ ಅಂಥ ಧರಣೆ ಕುಳಿತಲ್ಲಿ ಯಾವ ಪುರುಷಾರ್ಥವಿಲ್ಲ. ಅದು ಧರ್ಮವಿರುದ್ಧವಾದುದರಿಂದ ಹಾನಿಕರವಾದುದರಿಂದಲೂ ಖಂಡನೀಯವಾಗಿದೆ.

(ಗುಜರಾತಿಯಿಂದ ಅನುವಾದಿತ)

ಹೊಸದಿಲ್ಲಿ
೨೯—೧—೪೮ ಮೋ. ಕ. ಗಾಂಧಿ

“ನಿಮ್ಮ ಹೃದಯ ಕಳವಳಿಸದಿರಲಿ”

ಮನುಷ್ಯನಾಗಿ ಮಹಾತ್ಮರಾದವರ ಜೀವಿತಕ್ಕೆ ಒಂದು ದುರಂತ ಸಂಭವಿಸಿತು. ಅದು ಜನವರಿ ೩೦ ರಲ್ಲಿ. ಅಂದು ಗಾಂಧಿಯವರನ್ನು ಜಗತ್ತಿನ ಹೊಟ್ಟೆಗೆ ರೂಪಾಂತರಿಸಿ ಕಳುಹಲಾಯಿತು. ರಕ್ತಮಾಂಸಮಯ ಶರೀರದಲ್ಲಿ ಉಳಿದು ಓಡಿದಿರುವವರಿಗೆ ಸಮಾಧಾನ ಹೇಳುವದು ತುಂಬ ಕಷ್ಟ. ಏಕೆಂದರೆ ದೃಷ್ಟ ವಸ್ತುಗಳಿಗಿಂತ ಅದೃಷ್ಟ ವಸ್ತುಗಳು ಹೆಚ್ಚು ಸತ್ಯವಾಗಿರುತ್ತವೆಂಬುದನ್ನು ತಿಳಿಯುವದು ಕಷ್ಟ. ಇಂಥದೇ ಸಂದರ್ಭದಲ್ಲಿ ೨೦೦೦ ವರ್ಷಗಳ ಹಿಂದೆ ಯೇಸುಕ್ರಿಸ್ತನು ಹೇಳಿದ ಮಾತುಗಳು ನಮ್ಮ ಕಿವಿಯಲ್ಲೀಗ ಪ್ರತಿಧ್ವನಿಸುತ್ತಿವೆ. ತಮ್ಮ ರೀತಿ ನಡತೆಗಳನ್ನು ಕಟುವಾಗಿ ಟೀಕಿಸುತ್ತಿದ್ದುದರಿಂದ ಅವನ ಜನಗಳಲ್ಲೇ ಕೆಲವರು ಯೇಸುಕ್ರಿಸ್ತನನ್ನು ತಂತ್ರದಿಂದ ಶಿಲುಬೆಗೇರಿಸಿದರು. ಚಿತ್ರಹಿಂಸೆಗೆ ಗುರಿಪಡಿಸಲಿದ್ದ ಕಾಲದಲ್ಲಿ ಅವನು ಹೇಳಿದ ಮಾತು ಈಗ ನಮಗೆ ವಿಶೇಷವಾಗಿ ಅರ್ಥಸೂಚಕಗಳೆನಿಸುತ್ತವೆ:-

“ನಿಮ್ಮೊಂದಿಗೆ ಶಾಂತಿಯನ್ನು ಬಿಟ್ಟು ಹೋಗುತ್ತೇನೆ. ನಿಮ್ಮ ಹೃದಯ ಕಳವಳಪಡದಿರಲಿ. ನೀವು ನನ್ನನ್ನು ಪ್ರೀತಿಸಿದ್ದರೆ ನೀವು ಸಂತೋಷಪಡುವಿರಿ, ಏಕೆಂದರೆ ನಾನು ಜಗತ್ಪಿತನ ಕಡೆಗೆ ಹೋಗುತ್ತೇನೆ.” “ಇನ್ನು ಸ್ವಲ್ಪ ಹೊತ್ತು; ಆಮೇಲೆ ಜಗತ್ತು ನನ್ನನ್ನು ನೋಡುವದಿಲ್ಲ; ಆದರೆ ನೀವು ನೋಡುವಿರಿ. ನನ್ನ ಉಪದೇಶಗಳನ್ನು ಅರಿತು ಆಚರಿಸುವವನು ನನ್ನನ್ನು ಪ್ರೀತಿಸುತ್ತಿರುವನು ಮತ್ತು ನಾನು ಅವನನ್ನು ಪ್ರೀತಿಸುವೆನು, ಅಲ್ಲದೆ, ನಾನು ಅವನಿಗೆ ಸಾಕ್ಷಾತ್ಕಾರವಾಗುತ್ತೇನೆ; ಜಗತ್ಪಿತನು ಅವನನ್ನು ಪ್ರೀತಿಸುವನು.”

“ಇದರಲ್ಲೇ ನನ್ನ ತಂದೆ (ದೇವರು) ಯ ಯಶಸ್ಸು ವೃದ್ಧಿಹೊಂದುವುದು; ಇದರಿಂದ ನೀವು ಸಫಲರಾಗುತ್ತೀರಿ; ಹಾಗೆ ನೀವು ನನ್ನ ಶಿಷ್ಯರಾಗುವಿರಿ”.

“ನೀವು ನನ್ನ ಉಪದೇಶದಂತೆ ನಡೆದರೆ ನನ್ನ ಪ್ರೀತಿಗೆ ಪಾತ್ರರಾಗುವಿರಿ; ನಾನು ನನ್ನ ತಂದೆಯ (ದೇವರ) ಉಪದೇಶದಂತೆ ನಡೆದುಕೊಳ್ಳುತ್ತಿದ್ದೇನೆ; ಆದರಿಂದಲೆ ಅವನ ಪ್ರೀತಿಗೆ ಹೊಂದಿಕೊಂಡಿದ್ದೇನೆ. ಇದೇ ನನ್ನ ಉಪದೇಶ- ನಾನು ನಿಮ್ಮನ್ನು ಪ್ರೀತಿಸಿದಂತೆ ನೀವು ಪರಸ್ಪರರನ್ನು ಪ್ರೀತಿಸಿರಿ. ತನ್ನ ಗೆಳೆಯರಿಗಾಗಿ ಒಬ್ಬನು ಪ್ರಾಣತ್ಯಾಗ ಮಾಡುವುದಕ್ಕಿಂತ ಹೆಚ್ಚು ಪ್ರೀತಿಯೇ ಇಲ್ಲ”

“ನನ್ನ ಹರ್ಷ ನಿಮ್ಮಲ್ಲಿರಲೆಂದೂ ಆ ಹರ್ಷ ಪೂರ್ಣವಿರಲೆಂದೂ ಈ ಮಾತುಗಳನ್ನು ನಿಮಗೆ ಹೇಳಿದ್ದೇನೆ.

“ಹೌದು, ಸಮಯ ಬರುತ್ತದೆ; ಕೊಲ್ಲುವಾತ ದೇವಸೇವೆ ಮಾಡುವನೆಂದು ಬಗೆಯುವ ಕಾಲ ಬರುತ್ತದೆ. ಹೀಗೇ ನಿಮಗೂ ಅವರು ಮಾಡುವರು; ಏಕೆಂದರೆ, ಅವರಿಗೆ ತಂದೆಯ (ದೇವರ) ಗುರುತಿಲ್ಲ; ನನ್ನದೂ ಇಲ್ಲ”.

“ನಾನು ಈ ಮಾತುಗಳನ್ನು ನಿಮಗೆ ಹೇಳಿದ್ದೇನೆ; ಆದರಿಂದ ದುಃಖ ನಿಮ್ಮ ಎದೆಯನ್ನು ತುಂಬಿದೆ”. ನಿಜವಾಗಿಯೂ ನಾನು ನಿಮಗೆ ಹೇಳುತ್ತೇನೆ- ನೀವು ಅಳುತ್ತೀರಿ, ಗೋಳಿಡುತ್ತೀರಿ, ಆದರೆ ಜಗತ್ತು ಸಂತೋಷಪಡುವದು; ನಿಮಗೆ ಮಾತ್ರ ಖೇದವುಂಟಾಗುವದು- ಆದರೆ

-೯ನೇ ಪುಟಕ್ಕೆ

ಅವರು ಅಮರರು

"ಗಾಂಧೀಜಿ ಸಮ್ಮತಿಗೆ ಬರುವರೇನು?" ಎಂಬುದಾಗಿ ಮುಂಬಯಿಯ ಡೆಪ್ಯುಟಿ ಕಮೀಶನರರವರ ಹೆಂಡತಿ ಕಳೆದ ೩೦ ನೇ ತಾರೀಕು ಸಾಯಂಕಾಲ ೪ ಗಂಟೆಗೆ ನಾನು ಅವರನ್ನು ಕಂಡಾಗ ಕೇಳಿದಳು. ಅವಳು ಮತ್ತು ಇನ್ನು ಕೆಲ ಅನೇಕರು ಗಾಂಧೀಜಿಯ ಆರೋಗ್ಯದ ಬಗೆಗೆ ಒಳ್ಳೆ ಆತುರತೆಯಿಂದ ಕೇಳಿದರು. ಕಲಕತ್ತೆ ಮತ್ತು ದಿಲ್ಲಿಯಲ್ಲಿ ಅವರ ಇತ್ತೀಚಿನ ಉಪವಾಸಗಳು ಹಾಗು ಪವಾಡಗಳು ಪಾಕಿಸ್ತಾನದಲ್ಲಿಯು ಮತ್ತು ಉಳಿದ ಕಡೆಗಳಲ್ಲಿಯು ಮುಸಲ್ಮಾನರ ಹೃದಯಗಳನ್ನು ಮುಟ್ಟಿದ್ದವು. ಕೆಲದಿನಗಳ ಹಿಂದೆ ಇಷ್ಟಾದಡ 'ಒ ನೇ ನಂಬರ ಶತ್ರು' ಆಗಿದ್ದವರು ಹಿಂದುಸ್ತಾನದಲ್ಲಿ ಮತ್ತು ಪಾಕಿಸ್ತಾನದಲ್ಲಿ ಮುಸಲ್ಮಾನರ ಮಿತ್ರನೆಂದು ತಿಳಿಯಲ್ಪಡುವದನ್ನು ನೋಡುವದು ಒಳ್ಳೆ ಸಂತೋಷದ ಸಂಗತಿಯಾಗಿತ್ತು—ನನ್ನ ವರದಿಯನ್ನು ಕೇಳಿ ಬಾಪು ಎಷ್ಟೊಂದು ಸಂತೋಷ ಹೊಂದಬಹುದೆಂದು ನಾನು ಎಣಿಸಿದ್ದೆ. ಆದರೆ ಒಮ್ಮೆಲೆ ಸುಮಾರು ೬—೧೫ಕ್ಕೆ ಕಮೀಶನರರ ಹೆಂಡತಿಯು ಒಳ್ಳೆ ಆತುರಳಾಗಿ ಒಳನುಗ್ಗಿದಳು.

"ಜಗತ್ತು ಎಂಥ ದುರ್ದೈವಿಯಾಯಿತು!" ಎಂದು ಅವಳು ಕೂಗಿದಳು. "ಗಾಂಧೀಜಿಯನ್ನು ಗುಂಡಿಕ್ಕಿ ಕೊಲ್ಲಲಾಗಿದೆ" ನಾನು ಅತ್ಯಂತ ಬೆಚ್ಚಿಬಿದ್ದೆ ಮತ್ತು ನಡುಗಹತ್ತಿದೆ. 'ಇಲ್ಲ, ಇಲ್ಲ; ಇದೊಂದು ಜಾರಿಕೆಯ ಸುದ್ದಿ' ಎಂದು ಯಾರೋ ಒಬ್ಬರು ನುಡಿದರು. "ದಿಲ್ಲಿಗೆ ಫೋನ ಮಾಡಿ ಸತ್ಯವನ್ನು ತಿಳಿದುಕೊಳ್ಳುವಾ" ಆದರೆ ದಾರಿ ಕಾಯಲು ನನ್ನ ಮನಸ್ಸು ಒಪ್ಪಲಿಲ್ಲ. ಸತ್ಯವಾಗಿರಲಿ ಇಲ್ಲದಿರಲಿ ಲಾಹೋರಿಗೆ ಮರಳಿ ಹೋಗಿ ಅಲ್ಲಿಂದ ದಿಲ್ಲಿಗೆ ಶಕ್ಯವಿದ್ದಷ್ಟು ಬೇಗ ಹೋಗಬಯಸಿದೆ. ಡೆಪ್ಯುಟಿ ಕಮೀಶನರರು ತಮ್ಮ ಮೋಟರನ್ನು ಕೊಟ್ಟರು. ನಾವು ರಾತ್ರಿಯಲ್ಲಿಯೇ ಲಾಹೋರಿಗೆ ಹೋದೆವು. ಶುಭ್ರವಾದ ಬೆಳುದಿಂಗಳು ಬಿದ್ದಿತ್ತು. ಮತ್ತು ಎಲ್ಲೆಡೆ ಶಾಂತತೆ ಪಸರಿಸಿತ್ತು. ಗಾಡಿಯು ಒಳ್ಳೇ ವೇಗದಿಂದ ಓಡಹತ್ತಿತು. ಮನಸ್ಸಿನಲ್ಲಿಯೇ ನಾನು ವಿಚಾರ ಮಾಡಹತ್ತಿದೆ.

"ಇಲ್ಲ; ಸುದ್ದಿಯು ಸುಳ್ಳಿರಬಹುದು. ಬಾಪು ಸತ್ತಿರುವದಿಲ್ಲ. ಜೀವಂತ ಬದುಕಿರುವರು." ಅಂತರಂಗದಿಂದಲೂ ಬಾಪು ಬದುಕಿರುವರು ಎಂಬ ಧ್ವನಿ ಬರಹತ್ತಿತು. ಅದರಿಂದ ನನಗೆ ಮತ್ತಷ್ಟು ಮುಂದಟ್ಟಾಯಿತು.

ಮುಂಜಾನೆ ೬ ಗಂಟೆಗೆ ನಾವು ಲಾಹೋರ ಮುಟ್ಟಿದೆವು. ಕೂಡಲೆ ರಾತ್ರಿಯೆಲ್ಲ ಮನಸ್ಸಿನಲ್ಲಿ ಕಾಡಿದ ವಿಚಾರ ಕುಸಿದು ಬಿದ್ದಿತು. ಮಿತ್ರರೊಬ್ಬರು ಸಮಾಧಾನ ಮಾಡಲು ಬಂದರು ಆದರೆ ಅವರ ಶಬ್ದಗಳಿಂದ ಸ್ವಲ್ಪ ಸಮಾಧಾನವಾಗಲಾರದೆಂಬುದು ಅವರಿಗೆಂತು ಗೊತ್ತಾಗಬೇಕು? ಸ್ವಲ್ಪ ಹೊತ್ತಿನಲ್ಲಿಯೇ ಪಂಡಿತಜೀಯವರ ಶಬ್ದ ಧ್ವನಿಯು ಆಕಾಶವಾಣಿಯಲ್ಲಿ ಕೇಳಹತ್ತಿತು. ಅತ್ಯಂತ ದುಃಖಿತರಾಗಿ ಅವರು ಮಾಡಿದ ಭಾಷಣವನ್ನು ಕೇಳಿ ಆಸೆಯೆಲ್ಲ ನಿರರ್ಥಕವಾಯಿತು. ನಾವೆಲ್ಲ ಪರದೇಶಿಯಾದೆವು. ಕೂಡಲೆ ನಾನು ಗಡಿಬಿಡಿಯಿಂದ ಸಾಮಾನುಗಳನ್ನೆಲ್ಲ ಕಟ್ಟಿಕೊಂಡು ದಿಲ್ಲಿಗೆ ಹೊರಡುವ ವಿಮಾನದಿಂದ ಹೋಗುವ ಸಿದ್ಧತೆ ಮಾಡಿದೆನು. ಮುಂಜಾನೆ ೯ ಗಂಟೆಗೆ ಅದು ಬರುವದಿದ್ದಿತು. ಎಲ್ಲ ಮುಸಲ್ಮಾನರು ಹಿಂದುಗಳು ವಿಮಾನದ ಅಧಿಕಾರಿಗಳು ಸಹಿತ ಎಲ್ಲ ಜನರ ಮೋರೆಯ ಮೇಲೆಯೂ ದುಃಖದ ಛಾಯೆ ಪಸರಿಸಿತು. ವಿಮಾನಾಧಿಕಾರಿಗಳು ಪೇಶಾವರದಿಂದ ಸ್ಪೆಶಲ್ ವಿಮಾನವನ್ನು ತರಿಸುವದಾಗಿಯೂ ಹೇಳಿದರು. ಆದರೆ ಅದರಿಂದ ವೇಳೆ ಏನೂ ಉಳಿಯುತ್ತಿರಲಿಲ್ಲ. ವಿಮಾನ ಬಂದ ಕೂಡಲೆ ಅವರು ಒಳ್ಳೆ ಅವಸರವಸರದಿಂದ ಜನನ್ನು ಬಿಡುವ ಸಿದ್ಧತೆಯನ್ನು ಮಾಡಿದರು. ಸ್ವಮಾಲಿಕನಾದರೂ(?) ಲಾಹೋರದಿಂದ ದಿಲ್ಲಿಗೆ ಒಂದು ಗಂಟೆ ೨೦ ನಿಮಿಷಗಳಲ್ಲಿಯೇ ವಿಮಾನವನ್ನು ತಂದನು.

ನನ್ನ ಗಂಟುಗದಡಿಗಳನ್ನೆಲ್ಲ ಕ್ಲಾಸ್(?) ಇವರ ವಶಕ್ಕೆ ಬಿಟ್ಟುಗೊಟ್ಟು ನಾನು ಕೂಡಲೆ ಮೋಟರಿನಲ್ಲಿ ಬಿರ್ಲಾ ಭವನಕ್ಕೆ ಧಾವಿಸಿದೆನು. ಈ ಕ್ರೂರ ಘಟನೆಯಲ್ಲಿಯೇ ಮಹಾತ್ಮರು ನನ್ನನ್ನು ಭವಾಲಿ(?) ಮುಟ್ಟಲಿಕ್ಕೆ ಕಳಿಸಿದ್ದರು. ನಾನಿನ್ನೂ ಎಚ್ಚರದಪ್ಪಿದ ಸ್ಥಿತಿಯಲ್ಲಿಯೇ ಇದ್ದೆನೆಂದು ಹೇಳಬಹುದು. ಮಿಸೆಸ್(?) ... ನನ್ನ ಸಂಗಡ ಬಂದರು. "ನಾವು ಪ್ರತಿಯೊಬ್ಬರೂ ಗಾಂಧೀಜಿಯ ಕೊಲೆಗೆ ಹೊಣೆಗಾರರು" ಎಂದು ಅವರು ... ಮೋಟರಿನಲ್ಲಿ ಕುಳಿತಾಗ ನನಗೆ ಹೇಳಿದರು. ನಾವು ಒಮ್ಮೆಲ್ಲಿ ಒಮ್ಮೆ ಹಿಂಸೆಯನ್ನು ಏಕೆ ಅನುಭವಿಸಿಲ್ಲವೆ? ನಮ್ಮ ಹೃದಯದಾಳದಲ್ಲಿ ಒಮ್ಮೆ ... ಸೋಂಕಿಗೆ ಅವಕಾಶ ಕೊಟ್ಟಿರಲಿಲ್ಲವೆ? ನಾನು ಆತ್ಮ ಪರೀಕ್ಷಣ ಮಾಡಿಕೊಳ್ಳಹತ್ತಿದೆ "ಕೆಲವರು ಹೊಣೆಗೇಡಿಗಳು ಮಾತಾಡುವರು. ಉಳಿದವರು ಕೃತಿ ಮಾಡುವರು." ನಾನು ಮನಸ್ಸಿನಲ್ಲಿಯೆ ನುಡಿದುಕೊಂಡೆನು— "ನಮ್ಮಲ್ಲಿ ಬಹುಶಃ ಎಲ್ಲರೂ ಯಾವ ಅಪರಾಧದ ಆರೋಪಕ್ಕೆ ಒಳಗಾಗಿರುವರೊ ಅದರ ಸ್ವಾಭಾವಿಕ ಪರಿಣಾಮವೆ ಆ ದುಷ್ಟ ಮನುಷ್ಯ ಎಸಗಿದ ಕೃತ್ಯವು! ಆವನ ಆ ಕೃತ್ಯದಿಂದ ಹಿಂದುಸ್ತಾನವೇ ನಾಚಿಕೆಯಿಂದ ತಲೆ ಕೆಳಗೆ ಹಾಕಬೇಕಾಗಿದೆ." ನನ್ನ ಹೆಣ್ಣುಮಕ್ಕಳ ಬಗ್ಗೆಯೂ ನಾನು ವಿಚಾರ ಮಾಡಿದೆ. ಅವರೂ ಈ ದೋಷದಿಂದ ಮುಕ್ತರಾಗಿರುವದಿಲ್ಲ. ಈ ಬಗೆಯ ಮಹಾವಿನಾಶದಿಂದ ಗಾಂಧೀಜಿ ಎಂತು ಪಾರಾಗಬೇಕಿದ್ದು? ಅವರು ಉಪವಾಸ ಮಾಡಿದರು. ಆದರೀಗ ಕೊನೆ ಪ್ರಾಪ್ತವಾಯಿತು. ಅವರ ಕೊಲೆಯಾಯಿತು, ಅದೂ ಅವರ ಒಬ್ಬ ಬಂಧುವಿನಿಂದ!

ನಾವು ಬಿರ್ಲಾ ಭವನವನ್ನು ಮುಟ್ಟಿದೆವು. ಹಿಂದಾಗಿಲಿನಿಂದ ಮೋಟಾರು ಒಳಗೆ ಪ್ರವೇಶ ಮಾಡಿತು. ಆ ದಾಗಿಲಿನಲ್ಲಿಯೂ ವಿಪರೀತ ಜನ ಸಮ್ಮರ್ದವಿದ್ದಿತು. ಹುಚ್ಚಿಯಂತೆ ನಾನು ಜನರನ್ನು ನೂಕಿಸುತ್ತ ದಾರಿ ಮಾಡಿಕೊಂಡು, ಹೊರಡಲು ಸಿದ್ಧವಾಗಿದ್ದ ಪಾಲಕಿಯಿದ್ದ ಸ್ಥಳಕ್ಕೇರಿ ಬಂದೆನು. ಯಾರೋ ಒಬ್ಬರು ಮೇಲೇರಲು ನನಗೆ ಸಹಾಯ ಮಾಡಿದರು. ಸತ್ತ ಗುರುಗಳ ಕಾಲುಗಳ ಕಡೆಯಲ್ಲಿ ಸರದಾರರು ಕುಳಿತಿದ್ದರು. ಅತ್ಯಂತ ದುಃಖಿತರಾಗಿ ಮ್ಲಾನವದನರಾಗಿದ್ದರವರು. ಅವರು ನನ್ನನ್ನು ಮೇಲಕ್ಕೆಳೆದುಕೊಂಡರು. ಅಲ್ಲಿ ನಮ್ಮ ಅತ್ಯಂತ ಪ್ರೀತಿಯ ಬಾಪು ಬಿದ್ದಿದ್ದ. ಮೋರೆಯೊಂದೇ ತೆರೆದಿದ್ದಿತು. ಜೀವಂತ ಇದ್ದಾಗಿನಂತೆ ಮರಣದಲ್ಲಿಯೂ ಶಾಂತತೆ ಸ್ಫುರಿಸುತ್ತಿದ್ದಿತು. ಮರಣದ ಯಾವುದೇ ಛಾಯೆಯನ್ನು ನಾನು ನೋಡಲಿಲ್ಲ. ಆದರೆ ಅದೇ ಹಿಂದಿನ ಸ್ವಾಗತದ ಮುಗುಳ್ನಗೆ ಇದ್ದಿರಬೇಕೆಂದು ನಾನು ಎಣಿಸಿದೆ. ಅತ್ಯಂತ ದುಃಖಿತಳಾಗಿ ನಾನು ನನ್ನ ಹಣೆಯನ್ನು ಅವರ ಎದೆಯ ಮೇಲೆ ಇಟ್ಟೆನು. ಹಿಂದಿನಂತೆ ಅವರ ಆ ಪ್ರೀತಿಯ ಕೈ ನನ್ನ ಬೆನ್ನ ಮೇಲೆ ಮತ್ತು ಗಲ್ಲದ ಮೇಲೆ ಬರಬಹುದೆಂದು ನಾನು ಎಣಿಸಿದ್ದೆ. ನನ್ನ ಹತ್ತರ ಅಭಾ ಮತ್ತು ಮನು ನಿಂತುಕೊಂಡಿದ್ದರು. "ಇದೀಗ ನೀವು ಕೆಳಗಿಳಿಯಬೇಕಿದ್ದು" ಎಂದು ಯಾರೋ ಒಬ್ಬರು ಕೂಗಿದರು. ಪಂಡಿತ ನೆಹರು ಇವರು ನಮ್ಮನ್ನೆಲ್ಲ ಕೆಳಗಿಳಿಸಿಕೊಂಡರು. ಅವರು ಅತ್ಯಂತ ದುಃಖಿತ ವದನರಾಗಿ ಬಾಗಿಲಿನ ಹಲಗೆಯಿಂದಿಗೆ ನಿಂತುಕೊಂಡರು. ಮೆರವಣಿಗೆ ಹೊರಟಿತು.

ನಾವು ಸ್ಮಶಾನ ಮುಟ್ಟಿದೆವು. ಸ್ವಲ್ಪ ಪ್ರಾರ್ಥನೆ ಮಾಡಿದೆವು. ಅನಂತರ ಅವರ ಶವದ ಮೇಲೆ ಗಂಧದ ಕಟ್ಟಿಗೆಗಳನ್ನು ಒಟ್ಟಲು ಪ್ರಾರಂಭಿಸಿದರು. ನಾವೆಲ್ಲ ನಮ್ಮ ಕೊನೆಯ ಪ್ರಣಾಮ ಮಾಡಿದೆವು. ನಾನು ಬಿಕ್ಕಿ ಬಿಕ್ಕಿ ಅಳಹತ್ತಿದೆನು. 'ಬಾಪು ಕ್ಷಮಿಸಿ, ನಮ್ಮ ದೋಷಗಳನ್ನೆಲ್ಲ ಕ್ಷಮಿಸಿರಿ. ತಪ್ಪುತಡೆಗಳನ್ನೆಲ್ಲ ಹೊಟ್ಟೆಯೊಳಗೆ ಹಾಕಿಕೊಳ್ಳಿ' ಎಂದೆಂದೆ. ನಾನು ಆ ಸ್ಥಾನದಿಂದ ದೂರ ಹೋಗಿ ಕೆಳಗೆ ಕುಳಿತುಕೊಂಡೆನು. ನನಗೆ ಏನೂ ಕಾಣದಂತಾಯಿತು. ಗೀತೆಯಲ್ಲಿಯ ೧೧ ನೇ ಅಧ್ಯಾಯದಲ್ಲಿಯ ಕೆಳಗಿನ ಶ್ಲೋಕಗಳನ್ನು ಪುನಃ ಪುನಃ ಪಠಿಸುತ್ತ ಕುಳಿತೆನು.

ಸಖೇತಿ ಮತ್ವಾ ಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಂ
ಮಯಾ ಪ್ರಮಾದಾತ್ಪ್ರಣಯೇನ ವಾಪಿ ॥
ಯಚ್ಚಾವಹಾಸಾರ್ಥಮಸತ್ಕೃತೋಽಸಿ
ವಿಹಾರ ಶಯ್ಯಾಸನ ಭೋಜನೇಷು ।
ಏಕೋಽಥವಾಪ್ಯಚ್ಯುತ ತತ್ಸಮಕ್ಷಂ
ತತ್ ಕ್ಷಾಮಯೇ ತ್ವಾಮಹಮ
ಪ್ರಮೇಯಂ ॥
ಪಿತಾಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮ ಪ್ರಭಾವ ॥

ಜನಸಮ್ಮರ್ದ ನನ್ನ ಮೇಲೆ ಮುಕುರಿ ಬೀಳಹತ್ತಿತು. ಸರದಾರರು ಅಭಾ ಮತ್ತು ಮನು ಇವರನ್ನು ಹಾಗೆ ಜನಸಮ್ಮರ್ದದೊಳಗಿಂದ ಹೊರದೆಗೆದರು. ಸೈನಿಕರ ಟ್ರಕ್ಕಿನಿಂದ ದೂರದಿಂದ ಅಗ್ನಿಜ್ವಾಲೆಗಳನ್ನು ನಾವು ನೋಡಿದೆವು.

ರಾತ್ರಿಯಲ್ಲಿ ಗಾಂಧೀಜಿಯು ... ಕುಳಿತು ಅಂತರ್ಮುಖರಾಗಿ ಧ್ಯಾನಸ್ಥರಾಗಬಹುದೆ-

"ಜ್ಯೋತಿ ನಂದಿತು, ಸರ್ವತ್ರಲ್ಲಿ ಕತ್ತಲೆ ಕವಿದಿದೆ," ಎಂದು ಪಂಡಿತ ನೆಹರು ಇವರು ಆಕಾಶವಾಣಿ ಭಾಷಣದಲ್ಲಿ ಹೇಳಿದ್ದರು. ಆದರೆ ಕೂಡಲೆ ಅವರು ತಪ್ಪು ತಿದ್ದಿಕೊಳ್ಳುತ್ತ "ಇಲ್ಲ, ಜ್ಯೋತಿ ಬೆಳಗುತ್ತಿದೆ ಮತ್ತು ಇನ್ನು ಮುಂದೆಯೂ ಸಾವಿರಾರು ವರ್ಷಗಳವರೆಗೆ ಹಾಗೆಯೇ ಪ್ರಜ್ವಲಿಸುವದು" ಎಂದು ಅದಕ್ಕೆ ಜೋಡಿಸಿದರು. ಬಾಪೂಜಿ ಬದುಕಿರುವರು ಮತ್ತು ಕ್ರಿಸ್ತ ಬುದ್ಧರಂತೆ ಎಂದೆಂದಿಗೂ ಅಮರರಾಗಿ ಉಳಿಯುವರು. ಅವರೆಲ್ಲ ಪ್ರೇಮ ಸಂದೇಶವನ್ನು ಕಲಿಸಿರುವರು. ಆದರೆ ಅಹಿಂಸೆ ಯಾರೊಬ್ಬರಿಗೆ ಮಾತ್ರ ಮೀಸಲಾಗಿರದೆ ಸಮಾಜದ ... ಆಗಿರುವದೆಂಬುದನ್ನು ಅವರು ಜಗತ್ತಿಗೆಲ್ಲ ತೋರಿಸಿಕೊಟ್ಟರು.

ಅಗಾಖಾನ ಅರಮನೆಯಲ್ಲಿ ನಿಮ್ಮ ಅನುಯಾಯಿಗಳಲ್ಲಿ ವಿಶೇಷತಃ ವಿಧಾಯಕ ಕಾರ್ಯಕರ್ತರಲ್ಲಿ ಜನಸಾಮಾನ್ಯರಲ್ಲಿ ನಿಮ್ಮ ಸಂದೇಶವನ್ನು ಮುಟ್ಟಿಸುವಂಥ ತೇಜಸ್ವಿ ಇಲ್ಲವೆ ವ್ಯಕ್ತಿತ್ವ ಯಾವುದೂ ಇರುವದಿಲ್ಲ ಎಂದು ಯಾರೋ ಒಬ್ಬರು ನುಡಿದರು. ಅದಕ್ಕೆ ಅವರು "ಅದು ನಿಜ. ಅವರೀಗ ಸ್ವಲ್ಪ ನಿರಾಶರಾಗಿರುವಂತೆ ತೋರುತ್ತದೆ. ಆದರೆ ಅವರ ತಪ್ಪು ನನ್ನದು. ಪ್ರತಿಯೊಂದು ವಿಷಯದಲ್ಲಿ ಅವರು ನನ್ನ ನೇತೃತ್ವವನ್ನೇ ಬಯಸುವರು. ನಾನು ಜೀವಂತ ಇರುವವರೆಗೆ ಹೀಗಾಗದೆ ಬೇರೆ ಉಪಾಯವಿಲ್ಲೆಂದು ನನಗನಿಸುತ್ತದೆ. ಆದರೆ ನಾನು ಸತ್ತ ಬಳಿಕ ಅವರು ವಿಕಸಿತರಾಗಿ ಈ ವರೆಗೆ ... ಸಂಪಾದಿಸಿದ್ದರ ಫಲಗಳು ಅನಂತರ ಅವರಿಗೆ ಸಿಕ್ಕಬಲ್ಲವೆಂದು ನಾನು ಆಶಿಸುತ್ತೇನೆ."

"ಕ್ರಿಸ್ತನು ಜೀವಂತ ಇರುವಾಗ ಅವನ ಅನುಯಾಯಿಗಳಲ್ಲಿ ಯಾವನು ಅಷ್ಟೊಂದು ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸಿದ್ದನು? ಕ್ರಿಸ್ತನ ಮರಣಾನಂತರವೇ ಪರಮಾತ್ಮನು ಅವನ ಸಂದೇಶವನ್ನು ಜಗತ್ತಿಗೆ ಬೀರುವ ಶಕ್ತಿಯನ್ನು ಅವನ ಶಿಷ್ಯರಿಗೆ ದಯಪಾಲಿಸಿದನು" ಎಂದು ಸ್ವಲ್ಪ ಸಮಯದ ನಂತರ ಗಾಂಧೀಜಿ ಜೋಡಿಸಿದರು. ಗಾಂಧೀಜಿಯ ಭಾವಚಿತ್ರದೆದುರಿಗೆ ಕುಳಿತು ವಿಚಾರ ಮಾಡುತ್ತಿದ್ದಂತೆ ನನಗೆ ಇವೆಲ್ಲ ವಿಚಾರಗಳು ನೆನಪಾಗಹತ್ತಿದವು. ಗಾಂಧಿಯವರು ಕುಳಿತು ಕಾರ್ಯ ಮಾಡುತ್ತಿದ್ದ ಸ್ಥಳದಲ್ಲಿಯೇ ಈ ಭಾವಚಿತ್ರವನ್ನಿರಿಸಲಾಗಿದೆ. ಪ್ರಾಚೀನ ಪುಣ್ಯ ಪ್ರಭಾವದಿಂದ ಗಾಂಧೀಜಿಯ ಪಾದ ಕಮಲಗಳ ಅಡಿಯಲ್ಲಿ ಕುಳಿತು ಅವರ ಸನ್ನಿಧಿಯಲ್ಲಿ ಕೆಲಸ ಮಾಡುವ ಭಾಗ್ಯ ಒದಗಿದ್ದ ನಮ್ಮೆಲ್ಲರಿಗೆ ಆ ಶ್ರೇಷ್ಠ ಗುರುವಿನ ಉಪದೇಶದಂತೆ ನಡೆಯುವ ಶಕ್ತಿ ಸಾಮರ್ಥ್ಯಗಳನ್ನು ಪರಮಾತ್ಮ ಕರುಣೆಯಿಂದ ದಯಪಾಲಿಸಲಿ. ಆ ಪ್ರೇಮ ಮತ್ತು ಸಮಾಧಾನದ ನುಡಿಗಳನ್ನು ಇನ್ನು ಮುಂದೆ ಕೇಳಲಾರೆವೆಂಬ ವಿಚಾರ ಮೂಡಿದ ಕೂಡಲೆ ಕಣ್ಣೀರು ಸುರಿಯಹತ್ತುವವು. ಯಾವನ ಕೈ ಬೆನ್ನ ಮೇಲೆ ಬೀಳುವದರಿಂದ ಹೆಚ್ಚಿನ ಶಕ್ತಿ ಬಂದಂತಾಗಿ ಭಾರವೆಲ್ಲ ಇಳಿದಂತಾಗುತ್ತಿತ್ತೊ ಅಂಥ ಕೈ ಇನ್ನು ಮುಂದೆ ನಮ್ಮ ಮೇಲೆ ಬೀಳಲಾರದು. ಆ ಭಾರವು ಶಾರೀರಿಕವಾಗಿರಲಿ ಇಲ್ಲವೆ ಮಾನಸಿಕವಾಗಿರಲಿ ಎಲ್ಲವೂ ಹಗುರಾದಂತೆನಿಸುವದು. ಆದರೆ ನಾವು ನಮ್ಮ ಭಾವನೆಗಳನ್ನೆಲ್ಲ ಅವುಗಳಿಂದ ಉದ್ರೇಕಿಸಿಕೊಳ್ಳಬಾರದು. ನಮಗಾದ ಹಾನಿಯಿಂದುಂಟಾದ ದುಃಖವು ಕಾರ್ಯರೂಪದಲ್ಲಿ ಪರ್ಯವಸಾನ ಹೊಂದಲಿಕ್ಕೆ ಬೇಕು. ಅವರು ಜೀವಂತ ಇರುವಾಗ ನಾವು ಅವರ ... ಹೆಜ್ಜೆ ಇಡುತಿದ್ದೆವು. ಆದರೆ ಇನ್ನು ಮುಂದೆ ಅತ್ಯಂತ ದಾರ್ಢ್ಯದಿಂದ ಮತ್ತು ನಿರ್ಧಾರದಿಂದ ಹೆಜ್ಜೆ ಇಡುವ ಸಾಮರ್ಥ್ಯ ನಮ್ಮಲ್ಲಿ ಬರಲಿ ಎಂದು ನಾವೆಲ್ಲ ಪ್ರಾರ್ಥಿಸೋಣ. ಗೆಳೆಯನೊಬ್ಬ ನಿನ್ನೆ ದಿನ ತಾನು ಮಾಡಿದ ಕೆಲ ಪದ್ಯಗಳನ್ನು ಕಳಿಸಿಕೊಟ್ಟಿರುವನು. ಅವುಗಳೊಳಗಿಂದ ಕೆಳಗಿನವನ್ನು ನಾನು ಕೊಡುತ್ತೇನೆ.

"ಉತ್ತರದಿನದಿನೋಡು—
ವಂಥ ನಿಮ್ಮನ್ನು ಮೋಹ್?
ಮಿತ್ರರೆಂದಾತಕರೆ—
ದಿರುವಂಥ ನಿಮ್ಮನ್ನು—
ಹೃತ್ಕಮಲದಲ್ಲಂಜಿ
ಓಡಿದಿರ್ದನೊಲಿದವರೆ,
ಜೀವಜೀವಾಳದೊಡು
ಮುತ್ತಾತಗುಳಿದ ನಾ.
ಧನ ನಿಮ್ಮ ಕೈಕಾಲ್ಗ—
ಳತ್ತಧೀನಿಸಬೇಕು—
ದಲ್ಲಿ ಸೀಸ್ ನೆಡೆವಾಗ,
ಲೆತ್ತಲೆತ್ತಿ ಮುನಿದೀರೋ
ಪದದುನಾವುದವಾಗ
ಮುಟ್ಟುವಿರೆಯೆಂದು ಬಿಡದೆ!"

ನನ್ನೆದೆಯೊಳಗೇ ನಾನೊಂದು ಶಬ್ದವನ್ನು ಕೇಳುತ್ತೇನೆ, "ಇಲ್ಲ, ಆತ ಸತ್ತಿಲ್ಲ. ಆತ ಬದುಕಿರುವನು ಮತ್ತು ಅದೇ ಹಳೆಯ, ಮಧುರ, ಭಿನ್ನ ಮುಗುಳ್ನಗೆಯಿಂದ ನಮ್ಮ ಸ್ವಲಕ್ಷ್ಯ ಯುತ್ತವನ್ನು ಕಾಯುನೋಡುತ್ತಿದ್ದಾನೆ.

ಹೊಸದಿಲ್ಲಿ —ಸುಶೀಲಾ ನಯ್ಯರ

೩—೨—೪೮

ಬೂದಿಯಿಂದ

ನಮಗೆ ದಾರಿದೋರಲು, ಧೈರ್ಯ ಕೊಡಲು ಸಾಂತ್ವನ ಹೇಳಲು, ಮಾತಾಡಿಸಲು ಗಾಂಧಿಯವರಿಂದು ರಕ್ತ ಮಾಂಸಮಯ ಶರೀರದಲ್ಲಿಲ್ಲ. ಆದರೆ ದೇಹವು ಕ್ಷಣಿಕ ಮತ್ತು ಅಶಾಶ್ವತ, ಆತ್ಮವೊಂದೇ ಅಕ್ಷಯ ಮತ್ತು ಅವಿನಾಶಿ ಎಂದು ಅವರು ನಮಗೆ ಹೇಳಿ ಹೋಗಿಲ್ಲವೆ? ತನ್ನ ಉಪಯೋಗಕ್ಕೆ ಬೀಳುವ ವರೆಗೆ ತಮ್ಮ ದೇಹವನ್ನು ದೇವರು ಉಳಿಸುವನೆಂದು ಅವರು ಹೇಳಿಲ್ಲವೆ? ಅವರ ಆತ್ಮವು ಬಹುಶಃ ಶರೀರಬಂಧನದಿಂದ ಮುಕ್ತವಾಗಿ ಇನ್ನೂ ಹೆಚ್ಚು ಸ್ವತಂತ್ರವಾಗಿ ಕೆಲಸ ಮಾಡಿ ಸಿದ್ಧಿಸದೆ ಉಳಿದುದನ್ನು ಸಂಪೂರ್ಣವಾಗಿ ಸಾಧಿಸುವ ಸಾಧನಗಳನ್ನು ಸೃಜಿಸಬಹುದು. ಬಹುಶಃ ಯಮುನಾ ತೀರದಲ್ಲಿರುವ ಬೂದಿಯಿಂದ ಪರಸ್ಪರದಲ್ಲಿರುವ ತಪ್ಪುತಿಳುವಳಿಕೆ ಮತ್ತು ಅಪನಂಬಿಗೆಗಳನ್ನು ಹೊಡೆದು ಹಾರಿಸಿ ನಾವು ಬದುಕಿ ಕೆಲಸ ಮಾಡಿ ಸಾಧಿಸಬಯಸಿದ ಮತ್ತು ಆ ಕಾರ್ಯದಲ್ಲೇ ಕೊಲೆಗಡುಕನ ಗುಂಡಿಗೆ ತುತ್ತಾಗಿ ಹೋದ ಶಾಂತಿ ಸಮಾಧಾನಗಳನ್ನು ಸ್ಥಾಪಿಸುವಂಥ ಶಕ್ತಿಗಳು ಎದ್ದು ಹೊರಬರೂ ಹೊರಬಾವು.

ಹಿಂದುಧರ್ಮದಲ್ಲಿ, ಏಕೆ—ಇಡೀ ಮಾನವಕುಲದಲ್ಲಿ ಇರುವ ಎಲ್ಲ ಉದಾತ್ತ ಮತ್ತು ಉಚ್ಚಭಾವನೆಗಳ ಸಾಕಾರಸ್ವರೂಪವಾಗಿರಲಿಲ್ಲವೆ ಅವರು? ಆದರೂ ಆ ದೇಶ, ಧರ್ಮ, ಕುಲಗಳ ಇತಿಮಿತಿಯನ್ನರಿಯದ ಹೃದಯದಲ್ಲಿ ಗುರಿಯಿಟ್ಟು ಗುಂಡಿಕ್ಕಿದ್ದು ಒಂದು ಹಿಂದುಹಸ್ತವೇ ಅಲ್ಲವೆ? ಈ ಅಪರಾಧದ ಉದ್ದೇಶವೇನಿರಬಲ್ಲುದು? ಅದು ಹಿಂದುಧರ್ಮವನ್ನು ಉಳಿಸಲೆಂದೋ? ಹಿಂದು ಸಮಾಜವನ್ನು ಸೇವಿಸಲೆಂದೋ? ಹಾಗೆ ಹಿಂದು ಧರ್ಮದ ರಕ್ಷಣೆಯಾಯಿತೆ? ಹಿಂದು ಸಮಾಜ ಅದರಿಂದ ಸೇವೆ ಹೊಂದಿತೆ? ಹಿಂದು ಧರ್ಮದ ಸ್ವಲ್ಪಗತಿಯ ಚರಿತ್ರೆಯನ್ನು ಹುಡುಕಿರಿ— ಇಂತಹ ಕೆಟ್ಟ ವಿಶ್ವಾಸಘಾತಕ ಕಾರ್ಯ ನಿಮಗೆಲ್ಲಿ ಸಿಗದು. ಇದು ಅದರ ಚರಿತ್ರೆಯಲ್ಲಿಯ ಹೊಳೆಯಬರಹ, ಕೆತ್ತಿಕೆಗೆಯ ಬರದ ಕಗ್ಗುರುತು.

ನಾವು ಖಿನ್ನರಾಗಿದ್ದೇವೆ. ನಾವು ದಿಙ್ಮೂಢರಾಗಿದ್ದೇವೆ. ನಾವು ನಿರಾಶರಾಗಬೇಕೆ? ದೇಹ ಕಾಣಲಾರದು. ಆದರೆ ಅವರು ನಮಗೊಂದು ಅಮೂಲ್ಯವಾದ ಪಿತ್ರಾರ್ಜಿತಸ್ವತ್ತನ್ನು ಬಿಟ್ಟು ಹೋಗಿಲ್ಲವೆ? ನಮ್ಮ ಪ್ರಗತಿಯಲ್ಲಿ ನಮ್ಮನ್ನು ಆಧರಿಸುವ ಮತ್ತು ಮುಂದಕ್ಕೊಯ್ಯುವ ಸ್ಫೂರ್ತಿ ಮತ್ತು ಉಪದೇಶಗಳನ್ನು ಸಾಕಷ್ಟು ಕೊಟ್ಟು ಹೋಗಿಲ್ಲವೆ? ಈ ವಿಕಟ ದುರಂತವೆದುರಲ್ಲಿ ಅವರ ... ನಮ್ಮಲ್ಲಿ ಕರ್ತವ್ಯಬುದ್ಧಿಯನ್ನೆಬ್ಬಿಸಲಿ. ಅವರು ಮಣ್ಣಿಂದ ಮಹಾವೀರರನ್ನು ತಯಾರಿಸಿದರು. ದಾಸ್ಯದ ವಿರುದ್ಧ ಅಧರ್ಮದ ವಿರುದ್ಧ, ಅನ್ಯಾಯದ ವಿರುದ್ಧ ... ಹೂಡಿದ ಹೋರಾಟದಲ್ಲಿ ಅವರು, ಅಲಕ್ಷಿತ ಸಾಧನಗಳನ್ನು ಬಳಸಿದರು. ಧರ್ಮವನ್ನು ಪ್ರತಿಷ್ಠಾಪಿಸಲು ಭಾರತಕ್ಕೆ ಅದೇ ಧೈರ್ಯ, ಅಪಾಯಾಲಕ್ಷ್ಯ, ಫಲತಿರಸ್ಕಾರಗಳು ಬೇಕು. ಅದಕ್ಕಾಗಿ ಗಾಂಧಿಯವರು ತಮ್ಮ ಜೀವನವನ್ನೇ ಕೊಟ್ಟುಬಿಟ್ಟಿದ್ದಾರೆ; ಅವರು ಈ ನೆಲದ ಮೇಲೆ ನಡೆಯುತ್ತಿದ್ದಾಗ ಹೇಗೋ ಹಾಗೇ ನಾವು ಅವರ ಮರಣಾನಂತರವೂ ಅವರನ್ನು ಅನುಸರಿಸಬೇಡವೆ?

ಇದು ಸಿಟ್ಟಿಗಾಗಲಿ, ಪ್ರತೀಕಾರಕ್ಕಾಗಲಿ ಸಮಯವಲ್ಲ. ಗಾಂಧಿಯವರ ಉಪದೇಶದಲ್ಲಿ ಅವೆರಡಕ್ಕೂ ಕಾಲವಿಲ್ಲ, ಸ್ಥಳವಿಲ್ಲ. ನಮಗೀಗ ಅತ್ಯವಶ್ಯವಾದುದೆಂದರೆ, ಈ ಅಪರಾಧಕ್ಕೆ ಕಾರಣವಾದ ಆತ್ಮಘಾತಕವಾದ ಸಂಕುಚಿತ ಜಾತೀಯತೆಯನ್ನು ಧ್ವಂಸ ಮಾಡುವ ದೃಢನಿಶ್ಚಯ. ಗಾಂಧಿಯವರ ರಾಜಕೀಯ, ಸಾಮಾಜಿಕ ಇಲ್ಲವೆ ಆರ್ಥಿಕ ಕಾರ್ಯಗಳಲ್ಲಿ ಯಾವಾಗಲೂ ಎರಡು ಮುಖಗಳಿದ್ದವು— ನಿಷೇಧಾತ್ಮಕ ಮತ್ತು ಅನುರೋಧಾತ್ಮಕ ಇಲ್ಲವೆ ರಚನಾತ್ಮಕ, ಸದಾಶಯ ಉದಯಿಸುವಂತೆ ದುರಾಶಯವನ್ನು ನಾಶಗೊಳಿಸಬೇಕು. ಜಾತೀಯ ಅಪನಂಬಿಗೆ ಮತ್ತು ಅಸಮಾಧಾನಗಳು ಅದೃಶ್ಯವಾಗಬೇಕು ಮತ್ತು ವಿಶ್ವಾಸ ಮತ್ತು ಸಮಾಧಾನಗಳು ಸ್ಥಾಪಿತವಾಗಬೇಕು. ಇದೇ ಅವರ ಕಡೆಯ ಬಯಕೆಯಾಗಿತ್ತು. ನಾವು ಖಂಡಿತವಾಗಿ ಅದನ್ನು ನೆರವೇರಿಸಬೇಕು.

೩—೨—೪೮ —ರಾಜೇಂದ್ರ ಪ್ರಸಾದ

ಬಡೋದೆಯ ಹಿಂದು ಮಹಾಸಭೆಯ ಒಬ್ಬ ಕಾರ್ಯಕರ್ತರ ಮನೆಯ ಮೇಲೆ ಜನರು ದಾಳಿ ಮಾಡಿದಾಗ ಅವರನ್ನು ಚದುರಿಸಲು ಸೈನಿಕರು ಎರಡು ಸಲ ಗುಂಡು ಹಾರಿಸಿದರು. ಒಬ್ಬನು ಸತ್ತನಲ್ಲದೆ ಅನೇಕರಿಗೆ ಗಾಯಗಳಾಗಿವೆ. ಜನರು ಆ ಕಾರ್ಯಕರ್ತರ ಮನೆಯೊಳಗಿನ ಕುರ್ಚಿ ಮೇಜು ಪುಸ್ತಕ ಮೊದಲಾದವನ್ನು ಹೊರಗೆಳೆದು ಸುಟ್ಟು ಹಾಕಿದರು.

ರೈಲಿನಲ್ಲಿ ಸುಧಾರಣೆ

ಭಾರತೀಯ ರೈಲಿನಲ್ಲಿ ಹೆಚ್ಚನ್ನು ರಾಷ್ಟ್ರೀಕರಿಸಲಾಗಿದೆ. ಪ್ರಯಾಣ ಮಾಡುವ ಬಹುಸಂಖ್ಯಾಕ ಸಾರ್ವಜನಿಕರ ನಿರೀಕ್ಷೆ ಹೆಚ್ಚಿದೆ. ವರ್ಗರಹಿತ ರೈಲಿನ ವ್ಯವಸ್ಥೆಯೇ ಅಂತ್ಯದ ಗುರಿಯಾಗಿದೆ. ಅಧಿಕಾರಾರೂಢರು ನಿಜವಾದ ಸಾಮ್ಯವಾದಿ ರಾಜ್ಯವನ್ನು ಕಟ್ಟಬೇಕೆಂದು ಮನಸ್ಸನ್ನಿಟ್ಟು ಸೂಚಿಸಿದರೆ ಆ ವಿಷಯದಲ್ಲಿ ಇದು ಸಾಮಾನ್ಯ ನಾಗರಿಕನಿಗೆ ಪ್ರಾಥಮಿಕ ಶಿಕ್ಷಣವೆನಿಸುತ್ತದೆ. ಇದರಿಂದ ಕಿರುಗಾದುವಾಗಲಾದರೂ ಕಡೆಯ ಪಕ್ಷ ಧನಿಕ ದರಿದ್ರರಲ್ಲಿ ಜೀವನಮಟ್ಟ ಒಂದೇ ಆಗಿರಬಲ್ಲುದು.

ಸಂಧಾರಿಸಿದ ಬೋಗಿಗಳನ್ನು ಕಟ್ಟುವುದು ಮುಂತಾದ ಕಾರ್ಯಗಳಿಂದ ೩ನೆಯ ವರ್ಗದ ರೇಲ್ವೆ ಪ್ರಯಾಣವನ್ನು ಹೆಚ್ಚು ಸುಖಕರವಾಗಿ ಮಾಡಲು ಬಹಳ ದಿನ ಬೇಕಾದೀತು. ಆದರೆ ಹೆಚ್ಚಿಗೆ ಖರ್ಚಿಲ್ಲದೆ ಸಮೀಕರಣ (Levelling down) ವನ್ನು ಈಗಲೇ ಪ್ರಾರಂಭಿಸಿಬಿಡಬಹುದು. ಇದರಿಂದ ಪರಿಣಾಮತಃ ಉಳಿತಾಯವೇ ಆಗಿ ಅದನ್ನು ಇತರ ಅಗತ್ಯ ಖರ್ಚಿಗೆ ಬಳಸಲನುಕೂಲವಾಗುವದು ಸ್ಪಷ್ಟ ಕಾರಣಗಳಿಗಾಗಿ, ಪ್ರಥಮ ಮತ್ತು ದ್ವಿತೀಯ ವರ್ಗಗಳನ್ನು ಮುಚ್ಚುವುದರ ವಿರುದ್ಧ ಭಿನ್ನಾಭಿಪ್ರಾಯವಿರುವುದು ಸಹಜವಿದೆ. ಆದರೆ ದೌಲತ್ತಿನ ಬೋಗಿಗಳಲ್ಲದೆ ಇನ್ನೂ ಎಷ್ಟೋ ಸವಲತ್ತುಗಳು ಮೇಲಿನ ವರ್ಗಗಳಿಗಿವೆ. ೩ನೆಯ ವರ್ಗದ ಪ್ರಯಾಣಿಕರನ್ನು ಅಸ್ಪೃಶ್ಯರಂತೆ ಕಾಣಲಾಗುತ್ತಿದೆ.

ಮೇಲಿನ ವರ್ಗಗಳಿಗಾಗಿ ಬೇರೆಯೇ ಆದ ತಿಕೀಟಾಫೀಸುಗಳಿರುತ್ತವೆ. ನಿಜಸ್ಥಿತಿಯೆಂದರೆ ಉಚ್ಚ ವರ್ಗದ ಪ್ರಯಾಣಿಕರ ಸಂಖ್ಯೆ ಬಹಳ ಕಡಿಮೆ. ಅವರೂ ಸುಖವಾಗಿ ೩ನೆಯ ವರ್ಗದ ತಿಕೀಟಾಫಿಸಿನಲ್ಲೇ ತಿಕೀಟುಕೊಳ್ಳಬಹುದು. ಈ ರೀತಿಯಿಂದ, ಸರ್ವವರ್ಗಗಳಿಗೂ ಒಂದೇ ತಿಕೀಟಾಫೀಸಿರುವ ಚಿಕ್ಕ ಚಿಕ್ಕ ನಿಲ್ದಾಣಗಳನ್ನು ಬಿಡರೆ ದೊಡ್ಡವೆನ್ನಿಸಿಕೊಳ್ಳುವಂಥವು ಸುಮಾರು ೨ ಸಾವಿರ ನಿಲ್ದಾಣಗಳಿವೆ. ಅವುಗಳಲ್ಲಿ ಉಚ್ಚ ವರ್ಗದ ತಿಕೀಟಾಫೀಸಿನಲ್ಲಿ ಕೆಲಸಕ್ಕಿರುವ ಸುಮಾರು ೨ ಸಾವಿರ ಕಾರಕೂನರು ಉಳಿದರೆ ಅವರನ್ನು ಮೂರನೆಯ ವರ್ಗದ ಸಾಮಾನ್ಯ ಪ್ರಯಾಣಿಕರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಲು ನಿಯೋಜಿಸಬಹುದು. ಖಾಲಿಯಿರುವ ಉಚ್ಚವರ್ಗದ ತಿಕೀಟಿನ ಆಫೀಸುಗಳು ಮೂರನೆಯ ವರ್ಗದ ಪ್ರಯಾಣಿಕನ ಕಣ್ಣನ್ನು ಚುಚ್ಚುತ್ತಿರುತ್ತವೆ. ಏಕೆಂದರೆ ಅವನು ತಿಕೀಟು ಪಡೆಯಬೇಕಾದರೆ ಎಂತಹ ಅಗ್ನಿ ಪರೀಕ್ಷೆಯಲ್ಲಿ ಹೊಕ್ಕು ಹೊರಡಬೇಕೆಂಬುದು ಎಲ್ಲರಿಗೂ ತಿಳಿದದ್ದು—ಅದನ್ನೇನು ಬೇರೆ ಬಣ್ಣಿಸುವದಗತ್ಯವಿಲ್ಲವಷ್ಟೆ.

ಉಚ್ಚವರ್ಗದ ಪ್ರಯಾಣಿಕನಿಗಾಗಿ ವಿಶಿಷ್ಟ ಪ್ರವೇಶ ಮತ್ತು ನಿರ್ಗಮನ ದ್ವಾರಗಳಿರುತ್ತವೆ. ಇದು ಅನವಶ್ಯವಾಗಿ ಮತ್ತೆ ೨ ಸಾವಿರ ತಿಕೀಟು ಕಲೆಕ್ಟರರನ್ನು ನಿಯಮಿಸಿಕೊಳ್ಳುವ ಅವಶ್ಯಕತೆಯನ್ನು ತಂದೊಡ್ಡಿದೆ. ಎಲ್ಲರಿಗೂ ಸಾಮಾನ್ಯ ದ್ವಾರಗಳನ್ನು ರಚಿಸಿ ಬಿಟ್ಟರೆ ಅವರನ್ನು ಆ ಕೆಲಸದಿಂದ ನಿವೃತ್ತಿಗೊಳಿಸಬಹುದು.

ದೊಡ್ಡ ನಿಲ್ದಾಣಗಳಲ್ಲಿ ಕೇವಲ ಮೇಲ್ತರಗತಿಯ ಪಯಣಿಗರಿಗಾಗಿ ಕಕ್ಕಸುಗಳನ್ನು ಕೂಡ ಬೇರೆ ಕಟ್ಟಿಸಲಾಗಿದೆ. ಅದಕ್ಕೆ ವಿಶೇಷ ಖರ್ಚಿನಿಂದ ಕೆಲಸಗಾರರನ್ನಿಡಲಾಗಿದೆ. ಅದೇ ಕೆಲಸಗಾರರನ್ನು ಸಾಮಾನ್ಯ ಕಕ್ಕಸುಗಳ ಭಯಂಕರ ಪರಿಸ್ಥಿತಿಯನ್ನು ಸುಧಾರಿಸಲು ಹಚ್ಚುವುದು ಸಾಧ್ಯವಿದೆ.

ರೇಲ್ವೆ ಸಂಗಮಗಳಲ್ಲಿ ಮತ್ತು ದೊಡ್ಡ ನಿಲ್ದಾಣಗಳಲ್ಲಿ ವಿಶೇಷ ಕೊಠಡಿಗಳೂ ಭೋಜನಾಲಯಗಳೂ ಇರುತ್ತವೆ. ನರಕ ಸದೃಶವಾದ ಮತ್ತು ಯಾರೂ ಬರದ ೩ನೆಯ ವರ್ಗದ ವಿಶ್ರಾಮಧಾಮಗಳು ಸಾಕಷ್ಟು ಕುಖ್ಯಾತಿಗೀಡಾಗಿವೆ. ಹಾಗಿರುವಲ್ಲಿ ಎಲ್ಲರಿಗೂ ಸಾಮಾನ್ಯವಾದ ಒಂದು ಶುಚಿಯಾದ, ಸರಳವಾದ ಮತ್ತು ಹಿತಕರವಾದ ವಿಶ್ರಾಂತಿಗೃಹವನ್ನಿಡಬಾರದೇಕೆ?

ಮಧ್ಯಕಾಲೀನ ಸುಧಾರಣೆಗಳು

ಮೇಲೆ ಹೇಳಿದ ಸುಧಾರಣೆಗಳಲ್ಲದೆ ೩ನೆಯ ವರ್ಗದ ಪಯಣಿಗರ ಕಷ್ಟವಿಮೋಚನೆಗಾಗಿ ಈಗಿಂದೀಗ ಈ ಕೆಳಗಿನ ಕ್ರಮವನ್ನು ಕೈಗೊಳ್ಳಬೇಕು:—

೧ ನಿಲ್ದಾಣಪಂಗಳದಲ್ಲಿ ನೈರ್ಮಲ್ಯ– ಬಹಳ ಕಡೆ ೩ನೆಯ ವರ್ಗದ ವಿಶ್ರಾಂತಿಗೃಹಗಳನ್ನು ದನಗಳ ದೊಡ್ಡಿಯಂತೆ ಗಾಳಿ, ಚಳಿ, ಇಲ್ಲವೆ ಧೂಳಿಂದ (ಕೆಲವಡೆ ಮಳೆಯಿಂದ ಕೂಡ) ರಕ್ಷಿಸದ, ತೆರೆದ ಒಳದ ರೂಪದಲ್ಲಿಡುವುದರ ಬದಲು ಅವುಗಳಿಗೆ ಯುಕ್ತವಾದ ಆವಾರವನ್ನು ಸಾಕಷ್ಟು ಮರೆಕೊಡುವಂತೆ ಕಟ್ಟಿಸಬೇಕು. ಸಾಕಷ್ಟು ಪೀಕದಾನಿಗಳನ್ನಿಡಬೇಕು.

೨ ನೀರಿನ ಪೂರೈಕೆ– ಈಗಿರುವ ನೀರಿನ ಪೂರೈಕೆಯ ವ್ಯವಸ್ಥೆ ಅತ್ಯಂತ ಅತೃಪ್ತಿಕರವಾಗಿದೆ. ಅತಿ ಮುಖ್ಯವಾದ ಸಂಗಮಗಳಲ್ಲಿ ಕೂಡ ಕೇವಲ ೨ ಅಥವಾ ೩ ನಳಗಳಿರುತ್ತವೆ. ಒಂದು ಹೂಜಿ ನೀರನ್ನು ತುಂಬಿಕೊಳ್ಳಬೇಕಾದರೂ ಪಯಣಿಗರು ಹೆಣಗಬೇಕಾಗುತ್ತದೆ. ರೈಲು ಬರ-ಹೋಗುವಾಗ ನೀರು ಕೊಡಲಿರುವವನಿಗೆ ಕೊಟ್ಟು ಪೂರಯಿಸಲಾಗುವುದಿಲ್ಲ.

ಭಾರತದಂತಹ ಉಷ್ಣವಲಯದಲ್ಲಿರುವ ದೇಶದಲ್ಲಿ ಪ್ರಯಾಣಿಕರಿಗೆ ಬೇಕಾದಷ್ಟು ಒಳ್ಳೆಯ ನೀರು ಸಿಗತಕ್ಕದ್ದವಶ್ಯ. ಒಂದೇ ಪಂಪಿನ ತುದಿಗೆ ೧೦–೧೨ ನಳಗಳನ್ನು ಹಚ್ಚಬೇಕು. ನಳಗಳಿರುವ ಒಗೆವ ಜಾಗಗಳನ್ನು ಸುಧಾರಿಸಬೇಕು. ನೀರು ಹೆಚ್ಚಿನ ಒತ್ತಡದಿಂದ ಸುರಿಯುವುದರಿಂದ ಇಡೀ ಜಾಗವೇ ಹೊಲಸಾಗುವದಲ್ಲದೆ ಬಹಳ ನೀರು ಹಾಳಾಗುತ್ತದೆ. ಹಾಗಲ್ಲದೆ ಒಂದೇ ಪಂಪಿಗೆ ಹೆಚ್ಚು ನಳಗಳನ್ನು ಹಚ್ಚಿದರೆ ಬಹಳ ಜನರು ನೀರನ್ನು ಸುಖವಾಗಿ ಏಕಕಾಲದಲ್ಲಿ ಬಳಸಿಕೊಳ್ಳಬಹುದು. ನಳಗಳ ಕೆಳಗಿನ ಕಲ್ಲಿನ ಕಟ್ಟೆ ನಳಗಳ ಎತ್ತರ, ಗಾತ್ರ, ಮತ್ತು ಯೋಜನೆ ಈ ಎಲ್ಲವೂ ಬೇರೆ ಬೇರೆ ಕಡೆ ಬೇರೆ ಬೇರೆ ನಮೂನೆಯಾಗಿವೆ. ಎಲ್ಲ ನಿಲ್ದಾಣಗಳಿಗೂ ಅನುಕೂಲವಾದ ಒಂದೇ ಒಂದು ಮಾದರಿಯ ನಳಗಳನ್ನಿಡುವುದು ಯೋಗ್ಯವಲ್ಲವೆ?

ಚಲಿಸುವ ರೈಲಿನಲ್ಲಿ ನಾವು ಆಗಲೇ ಕುಡಿವ ನೀರನ್ನಿಡಬೇಕಾಗಿತ್ತು.

೩ ಈಗ ೩ನೆಯ ವರ್ಗದ ಕಕ್ಕಸುಗಳಿಗೆ ದೀಪವೇ ಇಲ್ಲ. ಇದರಿಂದ ಅದು ಮತ್ತಷ್ಟು ಅಶುಚಿಯಾಗುವುದಕ್ಕೆ ಕಾರಣವಾಯಿತು. ಕೆಲವೆಡೆ ಕಕ್ಕಸಿನಲ್ಲಿಯ ನೀರಿನ ನಳಗಳು ಕೆಟ್ಟು ಹೋಗಿರುತ್ತವೆ ಮತ್ತು ಬಹಳ ಕಡೆ ಅವುಗಳಲ್ಲಿ ನೀರೇ ಇರುವದಿಲ್ಲ. ೩ನೆಯ ವರ್ಗದ ಕಕ್ಕಸುಗಳನ್ನು ಸುಧಾರಿಸುವದರಲ್ಲಿ ತಕ್ಕ ಎಚ್ಚರಿಕೆಯನ್ನು ತೆಗೆದುಕೊಳ್ಳುವವರೆಗೆ ಸ್ವತಂತ್ರ ಹಿಂದುಸ್ತಾನದ ಘನಸ್ಥ ನಾಗರಿಕನ ಬಳಕೆಗೆ ಅವು ಯೋಗ್ಯವೆನಿಸಲಾರವು. ಹಳೆಯ ಬೋಗಿಗಳು ನೋಡಿದರೆ ಸಿಟ್ಟು ಬರುವಂತಿರುತ್ತವೆ. ಅವಕ್ಕೆ ಪುನಃ ಬಣ್ಣ ಬಳಿಸಬೇಕು.

೪. ಆಹಾರ ಪೂರೈಕೆ— ಪೂರಯಿಸಲ್ಪಡುತ್ತಿರುವ ತಿನಸುಗಳು ಅತ್ಯಂತ ಕೆಳತರಗತಿಯವಿವೆ. ಇದು ಈಗಿರುವ ಗುತ್ತಿಗೆ ಪದ್ಧತಿಯಿಂದ ಸಂಭವಿಸಿದ್ದಿರಬೇಕು. ಇಡೀ ರೇಲ್ವೆ ಮಾರ್ಗದಲ್ಲಿ ತಿನಸು ಮಾರುವವರನ್ನಿಡಲು ಗುತ್ತಿಗೆದಾರರಿಗೆ ಹುಂಡು ಗುತ್ತಿಗೆ ಕೊಡಲಾಗುತ್ತಿದೆ. ಈ ಹುಂಡುಗುತ್ತಿಗೆ ಕೊಡುವುದನ್ನು ನಿಲ್ಲಿಸಿ ಸ್ಥಳೀಯ ತಿನಸುಗಾರರಿಗೆ ನೇರವಾಗಿ ಲೈಸೆನ್ಸ ಕೊಡಬೇಕು. ಬಹುಸಂಖ್ಯಾಕ ಪ್ರಯಾಣಿಕರು ಕೊಳ್ಳುವ ಶಕ್ತಿಗನುಗುಣವಾಗಿ ನಿರ್ದಿಷ್ಟ ಆಹಾರ ಸಾಮಗ್ರಿಗಳನ್ನು ಸುಧಾರಿಸಬೇಕು. ಪೌಷ್ಟಿಕಾಂಶ ಮತ್ತು ಹವಾಮಾನಗಳನ್ನು ಗಣನೆಗೆ ತರಬೇಕು. ಕಬ್ಬಿನ ಹಾಲು ನೀರ ಶರಬತ್ತುಗಳಂತಹ ಸುಲಭ ಗ್ರಾಹ್ಯವಾದ ಹಣ್ಣಿನ ರಸಗಳನ್ನು ಬೆಲ್ಲಹಾಕಿ ತಯಾರಿಸಿ ಹೆಚ್ಚು ಬೆಲೆಯ ಸೋಡಾ ಮುಂತಾದ ಪಾನೀಯಗಳ ಬದಲು ಮಾರಲಿಡಬೇಕು. ಅನಾರೋಗ್ಯಕರವಾದ ಪೂರಿಗಳಿಗಿಂತ ಸುಲಭ ದರದ ಚಪಾತಿ ಮತ್ತು ಜೋಳದ ರೊಟ್ಟಿಗಳು ಎಲ್ಲೆಡೆಯೂ ಸಿಗುವಂತೆ ಮಾಡಬೇಕು. ದಕ್ಷಿಣ ಹಿಂದುಸ್ತಾನ ರೈಲಿನ ಆಹಾರ ಪೂರೈಕೆ ಮೆಚ್ಚಲರ್ಹವಾಗಿದೆ. ಪ್ರತಿಯೊಂದು ಮುಖ್ಯ ನಿಲ್ದಾಣದಲ್ಲೂ (ಅಲ್ಲಿ ಇತರ ಸುಲಭ ದರದ ಸ್ಥಳೀಯ ವಸ್ತುಗಳಲ್ಲದೆ) ಮೊಸರನ್ನವನ್ನು ಶುಚಿಯಾದ ಎಲೆಗಳಲ್ಲಿ ಸುತ್ತಿ ಮಾರಲಾಗುತ್ತಿದೆ. ದೊಡ್ಡ ನಿಲ್ದಾಣಗಳಲ್ಲಿ ಹೊಟ್ಟೆ ತುಂಬುವಂಥ ಹಿಂದೀಯರ ಸಂಪೂರ್ಣವಾದ ಊಟವು ಬಹಳ ಕಡಿಮೆ ಬೆಲೆಗೆ ಸಿಗುತ್ತದೆ. ಇತರ ರೇಲ್ವೆ ಮಾರ್ಗದಲ್ಲೂ ಅಂತಹ ವ್ಯವಸ್ಥೆಯನ್ನೇಕೆ ಮಾಡಬಾರದು? ಸಾಮಾನ್ಯವಾಗಿ, ಎಲ್ಲ ತಿನಸಿನ ಮಾರಾಟವೂ ಪ್ರಯಾಣಿಕರ ಅನುಕೂಲಕ್ಕಾಗಿ ಇರಬೇಕಲ್ಲದೆ ಕೆಲವೇ ಮಂದಿ ಹಣಗಳಿಸಲಿಕ್ಕಾಗಿ ಇರತಕ್ಕದ್ದಲ್ಲ.

೫. ಅರ್ಥವಿಲ್ಲದ ದೌಲತ್ತು– ಮಧ್ಯ, ೨ನೆಯ ಮತ್ತು ೧ನೆಯ ಸ್ತ್ರೀಯರ ಬೋಗಿಗಳಿರುವುದು ಅನವಶ್ಯಕ. ಸಾಮಾನ್ಯವಾಗಿ ವಿವಾಹಿತೆಯರು ಮಾತ್ರ ಉಚ್ಚ ವರ್ಗಗಳಲ್ಲಿ ಪ್ರಯಾಣ ಮಾಡುತ್ತಾರೆ. ಉಳಿದ ಜೀವನಕ್ಷೇತ್ರಗಳಲ್ಲಿ ಪ್ರತ್ಯೇಕತೆ ಅವರಿಗೆ ಬೇಡವಾಗಿರುವಾಗ ಅವಶ್ಯ ಬಿದ್ದರೆ ಬಸ್ಸಿನಲ್ಲಿರುವಂತೆ ಪೂರ್ವಸಿದ್ಧ ಜಾಗದಲ್ಲಿ ಗಂಡಸರ ಬೋಗಿಯಲ್ಲೇ ಕುಳಿತುಕೊಳ್ಳುವುದು ಅವರಿಗೆ ಹಿಡಿಸುವುದಿಲ್ಲವೇ? ವರ್ಗಭೇದವನ್ನು ಸಹಿಸಿಕೊಳ್ಳುತ್ತಿರುವ ವರೆಗೆ ಒಂದೇ ಒಂದು ಉಚ್ಚ ವರ್ಗದ ಬೋಗಿಯನ್ನು ಮಹಾತ್ರ ಸ್ತ್ರೀಯರಿಗಾಗಿ ಇಡಬಹುದು: ಬಳಕೆಯಲ್ಲಿ ಸಾಮಾನ್ಯವಾಗಿ ಹೆಂಗಸರು ಅವರ ಸಂಬಂಧಿಕರೊಡನಿರುತ್ತಾರೆ. ಸ್ತ್ರೀಯರ ಬೋಗಿಗಳು ಖಾಲಿಯಾಗಿರುತ್ತವೆ. ಹೆಂಗಸರ ವಿಶ್ರಾಂತಿ ಗೃಹದ ಕತೆಯಾದರೂ ಇದೇ ರೀತಿಯದಿರುತ್ತದೆ. ನಿಜವಾಗಿ ನೋಡಿದರೆ, ಪ್ರತ್ಯೇಕವಾಗಿ ಪ್ರಯಾಣ ಮಾಡುವ ಹೆಂಗಸರು ಹೆದರಿಕೊಂಡು ಏಕಾಕಿಗಳಾಗಿರಬೇಕಾಗುತ್ತದೆ. ಹೀಗೆ, ರೈಲುಗಳಲ್ಲಿಯ ಜಾಗವನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡರೆ ೩ನೆಯ ವರ್ಗದ ಪ್ರಯಾಣಿಕರು ಉಸಿರು ಕಟ್ಟಿಕೊಂಡು ಕುಳಿತು ಪ್ರಯಾಣ ಮಾಡುವ ಕಷ್ಟದಿಂದ ಎಷ್ಟೋ ಮಟ್ಟಿಗೆ ಮುಕ್ತರಾದಾರು.

೬. ನೈರ್ಮಲ್ಯ ಕಾರ್ಯ— ಉಚ್ಚ ವರ್ಗದ ಬೋಗಿಗಳನ್ನು ಶುಚಿಮಾಡಲು ವಿಶೇಷವಾದ, ಕರೆವಾಕ್ಷಣ ಬರುವ ಕೆಲಸಗಾರರನ್ನಿಡಲಾಗಿದೆ. ಆದರೆ ೩ನೆಯ ವರ್ಗದ ಬೋಗಿಗಳನ್ನು ಅಲಕ್ಷ್ಯ ಮಾಡಲಾಗಿದೆ. ಅನೇಕ ರೈಲುಗಳಲ್ಲಿ ಕಕ್ಕಸುಗಳು ಹೊಲಸಾಗಿಯೂ (ಅಸರೂಪವಾಗಿ ಬೋಗಿಯ ತಳವನ್ನು ಗುಡಿಸುತ್ತಿರುವುದರಿಂದ) ಅದು ಕಸ ತುಂಬಿಯೂ ಇರುತ್ತದೆ. ಪ್ರಯಾಣಿಕರ ಸಹಕಾರ ಅತಿ ಮುಖ್ಯವಾದುದು. ಆದರೆ ರೈಲಿನವರು ಉಚ್ಚ ವರ್ಗದ ಬೋಗಿಗಳ ನಿರ್ಮಲೀಕರಣದ ಬಗ್ಗೆ ಲಕ್ಷ್ಯಕೊಡುತ್ತಿರುವಷ್ಟೆ ಲಕ್ಷ್ಯವನ್ನು ೩ನೆಯ ವರ್ಗದ ಬೋಗಿಗಳ ನಿರ್ಮಲೀಕರಣದ ಬಗೆಗೂ ಕೊಡಬೇಕು. ಈ ಕೆಲಸ ಚೆನ್ನಾಗಿ ನಡೆಯಬೇಕಾದರೆ ಹೆಚ್ಚು ಖರ್ಚಿಲ್ಲದೆ ಸಾರ್ವಜನಿಕ ಸೇವಾ ಧುರೀಣರಾದ ಸಾಮಾಜಿಕ ಸೇವಕರೆನಿಸಿದ ನಿರ್ಮಲೀಕರಣದ ಅಧಿಕಾರಿಗಳ ಉಚಿತ ಸೇವೆಯನ್ನು ತೆಗೆದುಕೊಳ್ಳಬಹುದು ಬೋಗಿಗಳಲ್ಲಿ ಪೊರಕೆ ಮುಂತಾದವನ್ನಿಡುವುದರಿಂದ ಪ್ರಯಾಣಿಕರ ಚಟುವಟಿಕೆಯ ಸಹಕಾರವನ್ನು ಪಡೆಯಬಹುದು.

೭. ೩ನೆಯ ವರ್ಗದ ಬೋಗಿಯಲ್ಲಿ ರಾತ್ರಿಯ ದೂರ ಪ್ರಯಾಣ— ಪೂರ್ವ ನಿರ್ದಿಷ್ಟವಾದ ಮಲಗುವ ಅನುಕೂಲವುಳ್ಳ ವಿಶಿಷ್ಟ ಬೋಗಿಗಳನ್ನು ರಾತ್ರಿಯ ಪಯಣಿಗರಿಗಾಗಿ ಏರ್ಪಡಿಸಬೇಕು. ಪಯಣಿಗರಿಗೆ ನೆರವಾಗಲು ಒಬ್ಬ ರೇಲ್ವೆ ನೋಕರನನ್ನು ಬೋಗಿಯಲ್ಲಿಡಬೇಕು.

೮. ಹತ್ತಿರದ ಪ್ರಯಾಣ— ಹಳೆಯ ಕಾಯದೆಯನ್ವಯ ಬೋಗಿಗಿಂತಿಷ್ಟು ಪಯಣಿಗರೆಂಬುದನ್ನು ತಾತ್ಕಾಲಿಕವಾಗಿ ಬದಲಾಯಿಸಿ ಹೆಚ್ಚು ಜನ ಕೂಡುವಂತೆ ಮಾಡಬಹುದು. ನ್ಯಾಯವಾಗಿ ಕೊಡಲಾದ ನಿರ್ದಿಷ್ಟ ಸಂಖ್ಯೆಯನ್ನು ಮಾತ್ರ ಎಂದೂ ಮೀರಬಾರದು. ಇದನ್ನು ಪ್ರಯಾಣಿಕರಿಗೇ ಬಿಟ್ಟು ಬಿಡಬಾರದು. ಈ ನಿಯಮದನ್ನು ಲಕ್ಷಿಸದಂತೆ ನೋಡಿಕೊಳ್ಳಲು ತಿಕೀಟಿಲ್ಲದೆ ಪ್ರಯಾಣ ಮಾಡುವ ಅಭ್ಯಾಸವನ್ನು ನಿಲ್ಲಿಸಲು ಪ್ರತಿಯೊಂದು ಬೋಗಿಯಲ್ಲೂ ಒಬ್ಬೊಬ್ಬ ಸೇವಕನನ್ನಿಡುವುದು ಒಳ್ಳೆಯದು. ಅವನು ಪಯಣಿಗರ ಹಿತದತ್ತ ಲಕ್ಷ್ಯವೀಯುವುದಲ್ಲದೆ ರೇಲ್ವೆಯ ಹಿತವನ್ನು ಕಾಯ್ದುಕೊಂಡಿರಬೇಕು. ರೇಲ್ವೆಯ ಪರವಾಗಿ ತಿಕೀಟುಕೊಡುವ ಮತ್ತು ಹಣ ವಸೂಲುಮಾಡುವ ಕಾರ್ಯವನ್ನುಳಿದು ಇಂದಿನ ತಿಕೀಟು ಕಲೆಕ್ಟರನ ಮತ್ತು ರೇಲ್ವೆ ಪೋಲೀಸನ ಎಲ್ಲ ಅಧಿಕಾರವನ್ನೂ ಅವನಿಗೆ ಕೊಡಬೇಕು. ತಿಕೀಟಿಲ್ಲದೆ ಪ್ರಯಾಣ ಮಾಡುವದನ್ನು ಪರಿಣಾಮಕಾರಿಯಾಗಿ ನಿಲ್ಲಿಸಬೇಕಾದರೆ ಇಂದಿನ ತಿಕೀಟು ಪರೀಕ್ಷಕರ ತರಗತಿಯನ್ನೂ ರೈಲು ಹೋಗುತ್ತಿರುವಾಗ ವಿಸ್ತರಣದ ಮತ್ತು ಇತರ ತಿಕೀಟನ್ನು ಕೊಡುವ ವ್ಯವಸ್ಥೆಯನ್ನೂ ತೆಗೆದುಹಾಕಿ ಬಿಡಬೇಕು.

ಮಗನವಾಡಿ, ವರ್ಧಾ ೧೩—೧—೪೮

— ಗಜಾನನ ನಾಯಕ

ನಿಮ್ಮ ಹೃದಯ ಕಳವಳಿಸದಿರಲಿ

(೭ನೆಯ ಪುಟದಿಂದ)

ನಿಮ್ಮ ದುಃಖ ಹರ್ಷವಾಗಿ ಪರಿಣಮಿಸುವುದು, ಮತ್ತು ನಿಮ್ಮಿಂದ ಯಾವನೂ ನಿಮ್ಮ ಹರ್ಷವನ್ನು ತೆಗೆದುಕೊಂಡು ಹೋಗಲಾರನು'' "ತಂದೆ (ದೇವರು) ಕಳುಹಿಸುವ ಹಿತಚಿಂತಕನೆಂದರೆ ಸತ್ಯಭಾವ– ಅವನು ಸರ್ವ ಸತ್ಯಕ್ಕೆ ನಿಮ್ಮನ್ನೊಯ್ಯುವನು''. "ತಂದೆಯೇ(ದೇವರು)ಸ್ವತಃ ನಿಮ್ಮನ್ನು ಪ್ರೀತಿಸುವನು; ಏಕೆಂದರೆ ನೀವು ನನ್ನನ್ನು ಪ್ರೀತಿಸಿದ್ದೀರಿ ಮತ್ತು ನಾನು ದೇವರಿಂದಲೇ ಬಂದವನೆಂದು ನಂಬಿದ್ದೀರಿ. ನಾನು ತಂದೆಯಿಂದಲೇ (ದೇವರಿಂದ) ಜಗತ್ತಿಗೆ ಬಂದೆ ಮತ್ತು ಪುನಃ ಜಗತ್ತನ್ನುಳಿದು ತಂದೆಯೆಡೆಗೆ ಹೋಗುತ್ತೇನೆ". "ನೋಡಿರಿ, ಹೊತ್ತು ಬಂತು, ಹೌದು ಈಗ ಬಂದಿದೆ– ನಿಮ್ಮಲ್ಲಿ ಪ್ರತಿಯೊಬ್ಬನೂ ಚದರಿ ತನ್ನ ತನ್ನ ಎಡೆಗೆ ಹೋಗುವನು ಮತ್ತು ನನ್ನನ್ನು ಏಕಾಕಿಯಾಗಿ ಬಿಟ್ಟು ಬಿಡುವನು; ಆದರೂ ನಾನು ಏಕಾಕಿಯಲ್ಲ, ಏಕೆಂದರೆ, ತಂದೆ (ದೇವರು) ನನ್ನೊಡನಿದ್ದಾನೆ".

"ಈ ಮಾತುಗಳನ್ನು ನನ್ನಲ್ಲಿ ನಿಮಗೆ ಶಾಂತಿಯುಂಟಾಗಲೆಂದು ಹೇಳಿದ್ದೇನೆ. ಜಗತ್ತಿನಲ್ಲಿ ನಿಮಗೆ ದುಃಖವಿರುವದು; ಆದರೆ ಸಂತಸದಿಂದಿರಿ, ನಾನು ಜಗತ್ತನ್ನು ಮೀರಿ ನಿಂತಿದ್ದೇನೆ."

ದೇಶಕಾಲಗಳ ಇತಿಮಿತಿಗಳ ಸಂಕಲೆಯನ್ನು ಕೊಡಹಿ ಗಾಂಧಿಯವರು ವಿಶ್ವಾತ್ಮವನ್ನು ಸೇರಿಹೋದರು. ನಮ್ಮಲ್ಲಿ ಅವರನ್ನು ನಿಜವಾಗಿ ಪ್ರೀತಿಸುವವರಿಗೆ ಅವರು ತಮ್ಮ ಜೀವನ ಮತ್ತು ಕಾರ್ಯಗಳಿಂದ ಬಿಟ್ಟು ಹೋದ ನಿದರ್ಶನವನ್ನು ಅನುಸರಿಸಲು ಬೇಕಾದ ಮನಃಪ್ರಸಾದ ಮತ್ತು ಶಕ್ತಿಗಳನ್ನು ಒದಗಿಸಲಿ.

ಗಾಂಧಿಯವರ ಧ್ಯೇಯಗಳ ಸಾಧನೆಗಾಗಿ ನಾವು ನಮ್ಮ ಜೀವನಗಳನ್ನು ಮುಡಿಪಿಟ್ಟರೆ– ದ್ವೇಷ ಸಂಶಯಗಳಿಂದ ತುಂಬಿ ಹೊಗೆಯಾಡುತ್ತಿರುವ ವಾತಾವರಣದಲ್ಲಿ ಅಧಿಕಾರಲಾಲಸೆ, ಅರ್ಥಲೋಭ, ಜಾತೀಯ ಭಿನ್ನಾಭಿಪ್ರಾಯ ಇವುಗಳಿಂದ ಛಿನ್ನಭಿನ್ನವಾದ ಈ ಪ್ರಪಂಚದಲ್ಲಿ ಶಾಂತಿಯನ್ನು ತರಬೇಕಾದರೆ ನಾವು ಬಹಳ ಹೆಣಗಬೇಕಾಗಿದೆ. ಆದರೆ ಸರ್ವಶಕ್ತನಾದ ದೇವರಲ್ಲಿ ನಂಬಿಗೆಯುಳ್ಳವರಿಗೆ ಯಾವುದೂ ಅಸಾಧ್ಯವಲ್ಲ. ನಾವು ಕಂಟಕಗಳನ್ನು ಎದುರಿಸಿಕೊಂಡು ನಮ್ಮ ಅಮರನೇತ್ಯರಾದ ಬಾಪು ಸ್ಪ್ರದರ್ಶಿಸಿ ಹಾಕಿಕೊಟ್ಟ ಕಾರ್ಯವನ್ನು ಮುಂದುವರಿಸಲು ದೇವರು ಮತ್ತು ಬಾಪು ಸ್ವರ್ಗದಿಂದ ಅನುಗ್ರಹಿಸಿ ಸ್ಫೂರ್ತಿ ಕೊಟ್ಟು ಸಹಾಯಿಸಲಿ!

ಮಗನವಾಡಿ — ಜೆ. ಸಿ. ಕುಮಾರಪ್ಪ

೩೧-೧-೧೯೪೮

ಮುಂಚಿನ ದಿನ

[ಶ್ರೀ ಕೆ. ಜಿ. ಮಶ್ರೂವಾಲರಿಗೆ ೨ ನೆಯ ತಾರೀಕಿನಲ್ಲಿ ಗಾಂಧಿಯವರು ೩೧—೧—೪೮ ರಲ್ಲಿ (ಅಂದರೆ ಅವರ ಮರಣದ ಮುಂಚಿನ ದಿನ) ಬರೆದ ಪೋಸ್ಟ್‌ಕಾರ್ಡ ಸಿಕ್ಕಿತು. ಅದು ಶ್ರೀ ಮಶ್ರೂವಾಲರು ಗಾಂಧಿಯವರ ಒಬ್ಬ ಸೇವಕನಿಗೆ ಬರೆದ ಪತ್ರವೊಂದು ಕಳ್ಪೆಬೋ ಅಲ್ಲವೋ ಎಂಬ ಬಗ್ಗೆ ಸಂಬಂಧಿಸಿದೆ. ಆದುದರಿಂದ ಅದಕ್ಕೆ ಸ್ವತಃ ಗಾಂಧಿಯವರೇ ಬರೆದ ಉತ್ತರವು ಅವರಿಂದ ಕರೆದಾದ ಅತ್ಯಮೂಲ್ಯವಾಗಿ ಒಂದಿದೆ. ಅದು ಶ್ರೀ ಮಶ್ರೂವಾಲರಿಗೊಂದು ಪರಿವಾಳುವ ಸ್ಮಾರಕವೆನಿಸಿದೆ. ಈ ಕೆಳಗಿನದು ಪೋಸ್ಟ್‌ಕಾರ್ಡಿನ ತರ್ಜುಮೆಯಾದ. — ಸಂ.]

"ಹೊಸದಿಲ್ಲಿ, ೩೧—೧—೪೮

"ಪ್ರಿಯ ಕಿಶೋರಲಾಲ,

"ಪ್ರಾರ್ಥನಾಸಂತರದ ಕಾಲವನ್ನು ನಾನಿಂದು ಪತ್ರ ಬರೆಯಲು ಬಳಸುತ್ತಿದ್ದೇನೆ. ಶಂಕರನ್ನರ ಮಗಳ ಮರಣದ ವಾರ್ತೆಯನ್ನು ಅಲ್ಲಿಗೆ ಕಳುಹಿ ಒಳ್ಳೆಯ ಕೆಲಸ ಮಾಡಿದಿರಿ. ನಾನು ಅವರಿಗೊಂದು ಪತ್ರ ಬರೆದು ಹಾಕಿದ್ದೇನೆ. ನಾನು ಸೇವಾಗ್ರಾಮಕ್ಕೆ ಹೋಗುವೆನೆಂಬ ಸುದ್ದಿ ಸುಮ್ಮನೆ ಅನಿಶ್ಚಿತವೆಂದು ತಿಳಿಯಬೇಕು. ಅಲ್ಲಿ ನಾನು ೩ ರಿಂದ ೧೨ ರ ವರೆಗೆ ಇರಬೇಕೆಂದು ಸೂಚಿಸಿದ್ದೇನೆ. ನಾನು ದಿಲ್ಲಿಯಲ್ಲಿ "ಮಾಡಿದೆ" ನೆಂದು ಹೇಳಬಹುದಾದರೆ ನನ್ನ ವಚನವನ್ನು ಪೂರೈಸುವುದರ ಸಲುವಾಗಿ ನಾನು ಅಲ್ಲಿರಬೇಕಾಗಲಾರದು. ಇಲ್ಲಿಯ ನನ್ನ ಸಹೋದ್ಯೋಗಿಗಳ ಮತದ ಮೇಲೆಯೇ ಇದು ಅವಲಂಬಿಸಿದೆ. ಬಹುಶಃ ನಾಳೆ ಇದನ್ನು ನಿಶ್ಚಯಿಸಲಾಗಬಹುದು. ರಚನಾತ್ಮಕ ಕಾರ್ಯಕ್ರಮಗಳ ಎಲ್ಲ ಸಂಸ್ಥೆಗಳನ್ನು ಒಂದುಗೂಡಿಸಿ ಜವಾಹರಲಾಲರ ಮಾರ್ಗದರ್ಶಕತೆಯನ್ನು ನಡೆಸಲು ಸಾಧ್ಯವೇನೆಂಬುದನ್ನು ವಿಚಾರಿಸುವುದೇ ನನ್ನ ಸಂದರ್ಶನದ ಉದ್ದೇಶ. ನಾನು ಕೃತ್ರಿಮವಾಗಿ ಶಕ್ತಿ ಹೊಂದುತ್ತಿದ್ದೇನೆ. ಈ ಸಂದರ್ಭದಲ್ಲಿ ಮಬೂತ್ರಕೋಶ ಮತ್ತು ಪಿತ್ತಕೋಶಗಳೆರಡೂ ಕೆಟ್ಟಿವೆ. ನನ್ನ ಪ್ರಕಾರ ಅದು ರಾಮನಾಮದಲ್ಲಿ ನನಗಿರುವ ಶ್ರದ್ಧಾ ದೌರ್ಬಲ್ಯವನ್ನು ತೋರಿಸುತ್ತದೆ.

—"ನಿಮ್ಮೆಲ್ಲರಿಗೂ ಆಶೀರ್ವಾದ."

ಟಿಪ್ಪಣಿ

ಶ್ರೀ ಶಂಕರನ್ನರು ಸೇವಾಗ್ರಾಮದ ಹಿಂದುಸ್ತಾನಿ ತಾಲೀಮಿ ಸಂಘದಲ್ಲೊಬ್ಬ ಶಿಕ್ಷಕರು.

ದಿಲ್ಲಿಗೆ ಸೇರಿದಾಗ "ಮಾಡುತ್ತೇನೆ" ಎಂದು ಗಾಂಧಿಯವರು ಮಾಡಿದ ದೃಢಪ್ರತಿಜ್ಞೆಗೆ "ಮಾಡಿದೆ" ಎಂಬ ಕ್ರಿಯಾಪದವು ಸಂಬಂಧಿಸಿದೆ.

"ನಿಮ್ಮೆಲ್ಲರಿಗೂ ಆಶೀರ್ವಾದ" ಎಂಬಲ್ಲಿ ಹೇಳಲಾದ ೨ನೆಯ ವ್ಯಕ್ತಿಯೆಂದರೆ ಶ್ರೀಮತಿ ಜಿ. ಮಶ್ರೂವಾಲ.

ಗಾಂಧಿಯವರ ಪ್ರಾರ್ಥನೋತ್ತರ ಭಾಷಣ

ಹೊಸದಿಲ್ಲಿ ಬಿರ್ಲಾಭವನ
೨೯—೧—೪೮

ಭಾವಲಪುರಕ್ಕೆ ಶಿಷ್ಟ ಮಂಡಳ

ಮಹಾತ್ಮಾ ಗಾಂಧೀಜಿಯವರು ಗುರುವಾರದ ಸಂಜೆಯ ಪ್ರಾರ್ಥನೋತ್ತರ ಭಾಷಣದಲ್ಲಿ ಡಾ. ಸುಶೀಲಾ ನಯ್ಯರವರು, ಶ್ರೀ ಲೆಸ್ಲಿ ಕ್ರಾಸ ಮಿತ್ರ ದಲದೊಡನೆ ಭಾವಲಪುರಕ್ಕೆ ಹೇಗೆ ಹೋದರೆಂಬ ಬಗ್ಗೆ ಈ ರೀತಿ ಹೇಳಿದರು.

ಶ್ರೀ ಲೆಸ್ಲಿ ಕ್ರಾಸರು ದೇವನಂತಹ ಮನುಷ್ಯರು ಮತ್ತು ಎಲ್ಲರ ಮಿತ್ರರು. ಅವರು ಈ ಕಾರ್ಯಕ್ಕೆ ಸ್ವಯಂ ಸ್ಫೂರ್ತಿಯಿಂದ ಟೊಂಕಕಟ್ಟಿದ ಸಮಾಚಾರವು ಶ್ರೀಮತಿ ಸುಶೀಲಾ ಬೇಹಳಿಗೆ ತಿಳಿದು ಬರುತ್ತಲೇ ಆಕೆ ತಾನೂ ಅವರೊಡನೆ ಹೋಗಬಯಸುವೆನೆಂದು ಕೇಳಿದಳು. ಈ ಮಿತ್ರ ದಲದವರು ನೌಖಾಲಿಯಲ್ಲಿ ಕೆಲಸಮಾಡುತ್ತಿದ್ದಾಗ ಅವರೊಡನೆ ಆಕೆಯೂ ಕೆಲಸ ಮಾಡಿದ್ದಳು. ಆಕೆ ಪಂಜಾಬದಲ್ಲಿ ಗುಜರಾತದ ತನ ಹೊರವಳು. ಮುಸಲ್ಮಾನರೊಡನೆ ಮಿತ್ರ ಭಾವದಿಂದ ಇದ್ದ ಬಗ್ಗೆ ಅಲ್ಲಿ ವಿಖ್ಯಾತವಾದ ಇವರ ಹಾನಿತನವು ತುಂಬ ಹಾನಿಗೀಡಾಗಿತ್ತು. ಆದರೂ ಆಕೆಯ ಮನಸ್ಸು ಈ ಬಗ್ಗೆ ಕಲುಷಿತವಾಗಿರಲಿಲ್ಲ. ಆಕೆಗೆ ಅಲ್ಲಿಯ ಭಾಷೆ ಬರುತ್ತಿತ್ತಲ್ಲದೆ ಅಲ್ಲಿಗೆ ಹೋಗಲೂ ಆಕೆ ಅಂಜಿರಲಿಲ್ಲ. ನಾನು ಶ್ರೀ ಕ್ರಾಸರನ್ನು ಈ ಬಗ್ಗೆ ಕೇಳಿ ನೋಡಲು ಅವರಿಗೆ ಆಕೆಯ ಸಹಕಾರ ಒಪ್ಪಿತವಾಯಿತು. ಇವರಿಬ್ಬರಲ್ಲಿ ಯಾರು ಪ್ರಮುಖರು ಎಂದು ಕೇಳಿದ್ದಾದರೆ, ಶ್ರೀ ಕ್ರಾಸರು ನನ್ನ ನಂಬಿಗೆಯ ಮಿತ್ರರೆಂದೂ ಮತ್ತು ಶ್ರೀಮತಿ ಸುಶೀಲಾ ನನ್ನ ಮಗಳೆಂದೂ ನಾನು ಅಭಿಮಾನದಿಂದ ಹೇಳುತ್ತೇನೆ. ಇಬ್ಬರಿಗೂ ಪರಸ್ಪರರ ಬಗ್ಗೆ ಗೌರವವಿದೆ. ಇಬ್ಬರೂ ಸೇವಾ ಭಾವದಿಂದಲೇ ಹೋಗಿದ್ದು ಅಲ್ಲಿಯ ಪರಿಸ್ಥಿತಿಯನ್ನು ಅಭ್ಯಸಿಸಿ ಮರಳುತ್ತಲೇ ಅವರು ನನಗೆ ವರದಿ ಮಾಡುವರು. ನಿಸ್ವಾರ್ಥ ಸೇವೆಯಲ್ಲಿ ತಾರತಮ್ಯವಿಲ್ಲ. ತಾರತಮ್ಯವಿದ್ದುದೇ ಆದಲ್ಲಿ ಸ್ವಾಭಾವಿಕವಾಗಿ ನಾನು ಶ್ರೀ ಕ್ರಾಸರೇ ಪ್ರಮುಖರೆಂದು ಹೇಳಬೇಕು.

ನಿಮ್ಮ ಸೇವಕ ನಾನು

ಇಂದು ಇಳಿ ಹೊತ್ತಿಗೆ ಬನ್ನೂದಿಂದ ೪೦ ಜನ ನಿರಾಶ್ರಿತರ ಶಿಷ್ಟ ಮಂಡಲವೊಂದು ನನ್ನನ್ನು ಕಾಣ ಬಂದಿತ್ತು. ಪಾಪ, ಅವರು ತುಂಬ ಸಂಕಷ್ಟಕ್ಕೊಳಗಾಗಿದ್ದರು. ನಾನು ಅವರ ದರ್ಶನದಿಂದ ಧನ್ಯನಾದೆ. ನನಗೆ ಮತ್ತೆ ಬೇರೆ ಕೆಲಸಗಳಿದ್ದ ಕಾರಣ ನನ್ನ ಬಿನ್ನಹದ ಮೇರೆಗೆ ಅವರು ತಾವು ಹೇಳಬೇಕಾದುದನ್ನು ಶ್ರೀ ಬ್ರಿಜಕೃಷ್ಣರಿಂದ ಬರೆಯಿಸಿದ್ದರು. ಅವರಲ್ಲಿ ಒಬ್ಬರು, ತಮ್ಮ ದುಃಖಕ್ಕೆಲ್ಲ ನಾನೇ ಕಾರಣನೆಂದು ತುಂಬ ಕೋಪಾವಿಷ್ಟರಾಗಿ ಉದ್ಗಾರ ತೆಗೆದರು. ಹಾಗೂ ತಮ್ಮನ್ನು ತಮ್ಮ ಪಾಡಿಗೆ ಬಿಟ್ಟು ನಾನೇಕೆ ಹಿಮಾಲಯಕ್ಕೆ ಹೋಗುವದಿಲ್ಲವೆಂದು ಉದ್ರಿಕ್ತರಾಗಿ ಕೇಳಿದರು. ಯಾರ ಅಪ್ಪಣೆಯಂತೆ ನಾನು ಹೋಗಬೇಕು ಎಂದವರಿಗೆ ನಾನು ಕೇಳಿದೆನು. ಕೆಲವರು ರೇಗಿದರೆ ಕೆಲವರು ನನ್ನನ್ನು ಬಯ್ಯಲೂ ಹಿಂದೆಗೆಯುವದಿಲ್ಲ. ಇನ್ನು ಹಲವರು ನನ್ನ ಪ್ರಯತ್ನಗಳನ್ನೆಲ್ಲ ಬಾಯ್ತುಂಬ ಕೊಂಡಾಡುತ್ತಾರೆ. ಎಂದ ಮೇಲೆ ನನಗೆ ಒಂದೇ ದಾರಿಯುಂಟು. ಅದೆಂದರೆ ಎಲ್ಲರ ಅಂತರಾಳದಲ್ಲಿ ಕುಳಿತು ಮಾತನಾಡುವ ಪರಮಾತ್ಮನ ಆಣತಿಯನ್ನು ಅನುಸರಿಸುವದು. ಆ ಜನರೊಡನೆ ಸ್ತ್ರೀಯರೂ ಇದ್ದರು. ಅವರೆಲ್ಲ ನನ್ನ ಬಂಧು ಭಗಿನಿಯರೇ ಎಂದು ನನ್ನ ಭಾವನೆ. ದೇವರೊಬ್ಬನೆ ನಮ್ಮ ನಿಜವಾದ ಮಿತ್ರನು. ನಾವೆಲ್ಲ ಆತನ ಕೈಗೊಂಬೆ. ಹಿಮಾಲಯದ ಅಚಲ ಶಾಂತಿಯನ್ನು ಭೋಗಿಸಬೇಕೆಂಬ ಮೋಹ ನನಗಿಷ್ಟು ಇಲ್ಲ. ಆದರೆ ನನ್ನ ಸುತ್ತಲಿನ ಅಶಾಂತಿಯಲ್ಲಿ ನಾನು ದೊರಕಿಸಿಕೊಳ್ಳಬಲ್ಲಷ್ಟು ಶಾಂತಿಯಿಂದಲೇ ನನಗೆ ಸಮಾಧಾನ. ಅದ್ದರಿಂದ ನಾನು ನಿಮ್ಮೆಲ್ಲರ ಜೊತೆಗಿರಬಯಸುತ್ತೇನೆ. ನೀವೆಲ್ಲ ಹಿಮಾಲಯಕ್ಕೆ ಹೊರಟರೆ ನಾನೂ ನಿಮ್ಮ ಸೇವಕನಾಗಿ ನಿಮ್ಮನ್ನು ಹಿಂಬಾಲಿಸುತ್ತೇನೆ.

ಹೊಟ್ಟೆಯ ದುಡಿಮೆ

ನಿರಾಶ್ರಿತರ ಬಗ್ಗೆ ನನಗೆ ದೂರು ಬರುತ್ತಿವೆ. ಅವರಿಗೆ ವಾಸ ಗ್ರಾಸ ವಸನ ಮೊದಲಾದ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಟ್ಟರೂ ನಿರಾಶ್ರಿತರು ಯಾವ ಕೆಲಸವನ್ನೂ ಮಾಡಲು ಒಲ್ಲರಂತೆ. ಮನುಷ್ಯನು ಸಂಕಟಕ್ಕೆ ಸಿಲುಕಿದಾಗ ಅವನಿಗೆ ಸುಖ ಕೊಡುವ ಸಾಧನವೆಂದರೆ ದುಡಿಮೆ. ತಿಂದು ಉಂಡು ಸುಖಲೋಲನಾಗಿರಲೆಂದೇ ದೇವರು ಮನುಷ್ಯನನ್ನು ನಿರ್ಮಿಸಲಿಲ್ಲ. ಪ್ರತಿಯೊಬ್ಬನೂ ಯಜ್ಞ ಮಾಡಿಯೇ ಅಂದರೆ ದುಡಿದೇ ಅದರ ಫಲವನ್ನು ಉಣ್ಣಬೇಕೆಂದು ಗೀತೆಯು ಬೋಧಿಸುತ್ತದೆ. ದುಡಿಯದೇ ಉಣ್ಣುವ ಲಕ್ಷಾಧೀಶರು ಸಮಾಜ ಕಂಟಕರೇ ಸರಿ. ಅವರು ಕೂಡ ದುಡಿದು ವೇತನ ಗಳಿಸಿಯೇ ಉಣ್ಣಬೇಕು. ಇಲ್ಲದೆ ಹೋದರೆ ಅವರಿಗೆ ಅನ್ನ ಗ್ರಹಣಕ್ಕೆ ಅಧಿಕಾರವಿಲ್ಲ. ಅಂಗಹೀನರಿಗೆ ಮಾತ್ರ ಈ ನಿಯಮವಿಲ್ಲ. ಅವರನ್ನು ಸಮಾಜವೇ ಪೋಷಿಸತಕ್ಕದ್ದು. ನಿರಾಶ್ರಿತರಿಗೆ ಮಾಡಲು ಬೇಕಾದಷ್ಟು ಕೆಲಸಗಳಿವೆ. ತಮ್ಮ ವಾಸಸ್ಥಳವನ್ನು, ಶೌಚಕೂಪಗಳನ್ನು ಅವರು ಶುಚಿಗೊಳಿಸಬಹುದು. ನೂಲುವದು ಅಥವಾ ಇನ್ನಾವುದೇ ಕೈಗಾರಿಕೆಯಲ್ಲಿ ತೊಡಗಿರಬಹುದು. ತಾವಿರಬೇಕಾಗಿ ಬಂದ ಪರಿಸ್ಥಿತಿ ಪರಿಕರಗಳ ಲಾಭವನ್ನು ಅವರು ಸಾಧ್ಯವಿದ್ದಷ್ಟು ಪಡೆದುಕೊಳ್ಳಲು ಕಲಿಯಬೇಕು.

ಕಿಸಾನರು

ನನಗೆ ಯಾರಾದರೂ ಕೇಳಿದರೆ ನಮ್ಮ ಗವ್ಹರ್ನರ ಜನರಲ್ಲ ಮತ್ತು ಮುಖ್ಯ ಪ್ರಧಾನರು ಕಿಸಾನರಿಂದ ಆಯ್ದವರೇ ಇರತಕ್ಕದ್ದೆಂದು ಹೇಳುತ್ತೇನೆ. ನಾನು ಸಣ್ಣವನಿದ್ದಾಗ ಶಾಲೆಯ ಪುಸ್ತಕಗಳಲ್ಲಿ ಭೂಮಿಯ ರಾಜ್ಯಕ್ಕೆ ಒಕ್ಕಲಿಗರೇ ಅರಸರೆಂದು ಕಲಿತಿದ್ದೆ. ಹೊಲದಲ್ಲಿ ಹೋಗಿ ದುಡಿದು ಅದರಲ್ಲಿ ಹುಟ್ಟಿ ಬಂದುದನ್ನೇ ತಿನ್ನುವವರಿಗೆ ಇದು ಅನ್ವಯಿಸುತ್ತದೆ. ಇಂತಹ ಒಕ್ಕಲಿಗರಿಗೆ ಪ್ರಧಾನ ಪಟ್ಟವೇರಲು ಪುಸ್ತಕ ಶಿಕ್ಷಣ ದೊರಕದಿರಬಹುದು. ಆದರೆ ಅವರಿಗೆ ಆಳವಾದ ವ್ಯವಹಾರ ಜ್ಞಾನ, ವೈಯಕ್ತಿಕ ಸಾಹಸ ಮತ್ತು ಶೌರ್ಯ, ನಿರ್ದುಷ್ಟವಾದ ದೇಶನಿಷ್ಠೆ, ಯಾರ ಸಂಶಯಕ್ಕೂ ಒಳಗಾಗದಂತಹ ಪ್ರಾಮಾಣಿಕತನ ಈ ಗುಣಗಳಿದ್ದರೆ ಸರಿ. ಅವರೇ ಸಂಪತ್ತನ್ನು ಹುಟ್ಟಿಸುವವರೆಂದ ಮೇಲೆ ಅವರೇ ಅದರ ಅಧಿಪತಿಗಳಾಗಿರುವದು ಕ್ರಮ ಪ್ರಾಪ್ತ. ಆದರೆ ನಾವು ಅವರನ್ನು ದಾಸರನ್ನಾಗಿ ಮಾಡಿದ್ದೇವೆ. ಸರಕಾರದ ದೈನಂದಿನದ ಆಡಳಿತದ ಉಚ್ಚಾಧಿಕಾರಿಗಳೂ ಕಿಸಾನರೇ ಇರತಕ್ಕದ್ದೆಂದು ನನಗೆ ಸೂಚಿಸಲಾಗಿದೆ. ಈ ಸೂಚನೆಯನ್ನು ನಾನು ಬಲವಾಗಿ ಅನುಮೋದಿಸುತ್ತೇನೆ. ಆದರೆ ಅವರಿಗೆ ತಾವು ಮಾಡಬೇಕಾದ ಕೆಲಸ ತಿಳಿದಿರಬೇಕು ಮತ್ತು ಅದು ಅವರಿಗೆ ಒಗ್ಗಬೇಕು. ಈ ಬಗೆಯ ಕಿಸಾನರು ಮುಂದೆ ಬಂದದ್ದೇ ಆದಲ್ಲಿ ನಾನು ಸಾರ್ವಜನಿಕವಾಗಿಯೇ ಎಲ್ಲ ಮಂತ್ರಿಗಳು ಇನ್ನುಳಿದ ಅಧಿಕಾರಿಗಳು ಹೊರಬಿದ್ದು ಅವರಿಗೆ ಇಂಬುಗೊಡಬೇಕೆಂದು ಹೇಳುವೆ.

ಮದ್ರಾಸದಲ್ಲಿ ಆಹಾರದ ಕೊರತೆ

ಮದ್ರಾಸದಲ್ಲಿ ಆಹಾರದ ಕೊರತೆಯಾಗಿದ್ದು ಮದ್ರಾಸ ಸರಕಾರದ ಪರವಾಗಿ ಒಂದು ಶಿಷ್ಟ ಮಂಡಳವು ಶ್ರೀ ಜಯರಾಮದಾಸರ ಬಳಿಗೆ ಬಂದು ಆ ಪ್ರಾಂತಕ್ಕೆ ಆಹಾರ ಒದಗಿಸುವ ಎತ್ತುಗಡೆ ಮಾಡಬೇಕೆಂದು ಕೇಳಿಕೊಂಡಿತು. ಈ ಬಗೆಯ ಯಾಚಕಭಾವದಿಂದ ನನಗೆ ವಿಷಾದವೆನಿಸುತ್ತದೆ. ಮದ್ರಾಸದ ಜನಕ್ಕೆ ಒಂದು ಮಾತನ್ನು ನಾನು ಚನ್ನಾಗಿ ಬಿಂಬಿಸಬಯಸುತ್ತೇನೆ. ನೆಲಗಡಲೆ, ತೆಂಗು ಇವೇ ಮೊದಲಾದ ನಾನಾ ತರಹದ ತಿನ್ನುವ ಪದಾರ್ಥಗಳ ರೂಪದಲ್ಲಿ ಆ ಪ್ರಾಂತದಲ್ಲಿ ಸಾಕಷ್ಟು ಆಹಾರವಿದೆ. ಮೀನ ತಿನ್ನುವವರು ಅನೇಕರಿದ್ದು ಅಲ್ಲಿ ಬೇಕಾದಷ್ಟು ಮೀನವೂ ಸಿಕ್ಕುವದು. ಎಂದಮೇಲೆ ಕೈಲೋಡವಿಡಿದು ಪರ ಪ್ರಾಂತಕ್ಕೆ ಭಿಕ್ಷೆ ಬೇಡಲೇಕೆ ಅವರು ಹೋಗಬೇಕು. ಅಕ್ಕಿಯೇ ಬೇಕೆಂದು ಅವರು ಹಟ ಹಿಡಿಯುವದು ತರವಲ್ಲ. ಅದೂ ಪೋಷಕ ಸತ್ವವೆಲ್ಲ ಹೀರಿ ಹೋದ ಗಿರಣಿಗೆ ಹಾಕಿ ಬೆಳ್ಳಗೆ ಮಾಡಿದ ಅಕ್ಕಿ. ಇದು ದೊರಕದಿದ್ದಲ್ಲಿ ನಿರ್ವಾಹವಿಲ್ಲದೆ, ಅವರು ಗೋದಿಯನ್ನು ಸ್ವೀಕರಿಸಬೇಕಾಗುವದು ಇಷ್ಟೆಲ್ಲ ಏಕೆ? ಅವರು ಅಕ್ಕಿಯ ಹಿಟ್ಟಿನೊಡನೆ ನೆಲಗಡಲೆಯ ಅಥವಾ ಕೊಬ್ಬರಿಯ ಪುಡಿಯನ್ನು ಬೆರೆಯಿಸಿ ಕ್ಷುಧಾಬಾಧೆಯನ್ನು ಸಹಜವಾಗಿ ಹಿಂಗಿಸಬಹುದು. ಅವರಿಗೆ ಈಗ ಅಗತ್ಯವಾಗಿ ಬೇಕಾದುದು ಸ್ವಾವಲಂಬನವೃತ್ತಿ ಮತ್ತು ಆತ್ಮವಿಶ್ವಾಸ. ಮದ್ರಾಸಿಗಳನ್ನು ನಾನು ಚನ್ನಾಗಿ ಬಲ್ಲೆ. ನಾನು ದಕ್ಷಿಣ ಅಫ್ರಿಕೆಯಲ್ಲಿದ್ದಾಗ, ಮದ್ರಾಸ ಪ್ರಾಂತದ ಎಲ್ಲ ಭಾಷೆಯ ಜನರ ಸಂಪರ್ಕವೂ ನನಗೆ ಬಂದಿದೆ. ನಾವು ಪೌಡಿನಲ್ಲಿದ್ದಾಗ ಅವರ ದಿನದ ಆಹಾರವೆಂದರೆ ಕೇವಲ ಒಂದೂವರೆ ಪೌಂಡಿನ ರೊಟ್ಟಿ ಮತ್ತು ಒಂದು ಔಂಸು ಸಕ್ಕರೆ ಇಷ್ಟೇ ಇರುತ್ತಿತ್ತು. ಆದರೆ ನಾವು ರಾತ್ರಿಗಾಗಿ ಬೀಡಾರ ಬಿಟ್ಟಾಗೆಲ್ಲ ಅವರು ಹಾಡುತ್ತ ಅಡಿಗೆಯಲ್ಲಿ ತೊಡಗಿರುತ್ತಿದ್ದರು. ಅವರ ಅಡಿಗೆ ಏತರಿಂದ ಗೊತ್ತೆ? ಅಲ್ಲಿ ಬೆಳೆದ ಹುಲ್ಲಿನಲ್ಲಿ ಆಯ್ದು ತಂದ ತಿನಬರುವ ಪದಾರ್ಥದಿಂದ! ಇದನ್ನು ನೋಡಿ ನಾನು ಬೆರಗುಗೊಳ್ಳುತ್ತಿದ್ದೆ. ಇಂತಹ ಪ್ರತ್ಯುತ್ಪನ್ನಮತಿಗಳು ಎಂದಾದರೂ ಅಸಹಾಯರಾಗುವದುಂಟೆ? ನಾವೆಲ್ಲ ಕೂಲಿಕಾರರೆಂಬುದನ್ನು ಮರೆಯಕೂಡದು. ಪ್ರಾಮಾಣಿಕ ದುಡಿಮೆಯಲ್ಲಿಯೇ ನಮ್ಮೆಲ್ಲರ ಸುಖವಿದೆ ಮತ್ತು ನಮ್ಮ ಆತ್ಮಾವಶ್ಯಕ ಬಯಕೆಗಳ ಸಂತೃಪ್ತಿಯಿದೆ.

ಗಿರಣಿ ಬಟ್ಟೆ ಮತ್ತು ಖಾದಿ

ನವಖಾಲಿಯ ಕಾಜಿರಖಿಲ್ಲಿನ ಗಾಂಧಿ ಶಿಬಿರದಲ್ಲಿಯ ಮೂಲ ಶಿಕ್ಷಣ ಶಾಲೆಯ ಮೂಲಕ ಮಾಡಲಾದ ಚಿಕ್ಕ ಪ್ರಯೋಗದ ಫಲದಿಂದ ಸೂಚನೆಯು ಎಷ್ಟು ಸುಲಭವಿದೆಯೆಂಬುದು ಗೊತ್ತಾಗುತ್ತದೆ. ೧೯೪೭ ನೆಯ ಜುಲೈ ತಿಂಗಳಲ್ಲಿ ಮಕ್ಕಳು ಕೈಗಾರಿಕೆಯನ್ನಾಗಿ ನೂಲುವುದನ್ನು ಪ್ರಾರಂಭಿಸಲಾಯಿತು. ಮೊದಲನೆಯ ತಿಂಗಳಲ್ಲಿ ೧೪ ನೂಲಿಗರು ೧೦ ರಾಟಿಗಳಿಂದ ಕೆಲಸ ಮಾಡುತ್ತ ೪ ಸೇರು ಮತ್ತು ಒಂದು ಛಟಾಕು ತೂಕದ ೬೭೦೦೦ ಗಜ ನೂಲನ್ನು ತೆಗೆದರು. ಅದರಿಂದ ೨೩ ಚ. ಗಜ ಖಾದಿ ಬಟ್ಟೆ ತಯಾರಾಗುವಂತಾಯಿತು. ಸರಾಸರಿ ಅತಿ ಹೆಚ್ಚಿನ ವೇಗವೆಂದರೆ ಒಬ್ಬ ನೂಲಿಗನು ಅರ್ಧ ಗಂಟೆಯಲ್ಲಿ ೧೮೬ ಗಜ ನೂಲು ತೆಗೆಯುವುದು: ಅತಿ ಹೆಚ್ಚಿನ ಉತ್ಪಾದನೆಯೆಂದರೆ ೧೨.೫ ಛಟಾಕು ತೂಕದ ೧೨೫೦೦ ಗಜ ನೂಲು ಅಕ್ಟೋಬರಿನಲ್ಲಿ ೧೯ ಹುಡುಗ ಹುಡುಗಿಯರು ಒಟ್ಟು ೧,೦೬,೫೦೦ ಗಜ ನೂಲು ತೆಗೆದರು; ಡಿಸೆಂಬರಿನಲ್ಲಿ ೧,೪೬,೭೮೮ ಗಜ ನೂಲನ್ನು ತೆಗೆಯಲಾಯಿತು; ಅಂದರೆ ಸರಾಸರಿ ೧೨೨೦೦ ಗಜ ಇಲ್ಲವೆ ತಲಾ ೪ ಚ. ಗಜ ಖಾದಿ ಬಟ್ಟೆ; ತೆಗೆದವರ ಸಂಖ್ಯೆ ೧೨. ಅರ್ಧಗಂಟೆಗೆ ೧೨೨ ರಿಂದ ೨೪೮ ಗಜಗಳ ವರೆಗೆ ಸರಾಸರಿ ವೇಗವಿತ್ತು. ವಿವಿಧ ವಯಸ್ಸಿನ ಮಕ್ಕಳ ಕಾರ್ಯಗತಿಯ ವೇಗವನ್ನು ಈ ಕೆಳಗೆ ಕೊಡಲಾಗಿದೆ:—

ವಯಸ್ಸು	ಅರ್ಧಗಂಟೆಯಲ್ಲಿ ತೆಗೆದ ನೂಲು
೬ ರಿಂದ ೬॥ ವರ್ಷ	೧೨೨ ಗಜ.
೧೦ ವರ್ಷ	೨೯೫ ಗಜ.
೧೬ ವರ್ಷ	೨೯೮ ಗಜ.

ಅತಿದೊಡ್ಡ ಮಗು ತೆಗೆದ ನೂಲು ೧೯,೬೪೨ ಗಜ; ಹುಡುಗಿಯೊಬ್ಬಳು ೧೫,೯೯೯ ಗಜ ನೂಲು ತೆಗೆದಿದ್ದಳು.

ಇಂದು ಶಾಲೆಗೆ ಹೋದ ಮಕ್ಕಳಲ್ಲಿ ಪ್ರತಿಯೊಂದೂ ಸಂಪೂರ್ಣವಾಗಿ ತಾನೇ ನೂತ ನೂಲಿನ ಬಿಳಿಯ ಖಾದಿ ಬಟ್ಟೆಯನ್ನು ಧರಿಸಿದ್ದಿತು.

ರಾಮದೇವಪುರದಲ್ಲಿ ಕನು ಗಾಂಧಿ ಕೆಲಸ ಮಾಡುತ್ತಿದ್ದಾನೆ. ಅಲ್ಲಿ ಬಹುಪಕ್ಷ ಪ್ರತಿಯೊಬ್ಬ ಹೆಂಗಸೂ ಸ್ವಂತ ನೂತ ನೂಲಿನಿಂದ ತಯಾರಿಸಿದ ಸೀರೆಯನ್ನಿಟ್ಟುಕೊಂಡಿದ್ದಾಳೆ. ಸ್ವಯಂಪೂರ್ಣತೆಯ ಆಧಾರದಮೇಲೆ ಸಂಘಟಿಸಲಾದ ನೂಲಿನ ಕೇಂದ್ರಗಳ ಅಂಕೆ ಸಂಖ್ಯೆಗಳೂ ಇಷ್ಟೇ ಹೆಚ್ಚಿನವಿವೆ.

ಕೇಂದ್ರ	ನೂಲಿಗರ ಸಂಖ್ಯೆ	ನವೆಂಬರಿನಲ್ಲಿ
ನಂದಾಪುರ	೩೨	ತಯಾರಿಸಿದ ಬಟ್ಟೆ ಧೋತ್ರ ೬, ಸೀರೆ, ೫, ಚಾದರ ೩೧, ೧೫ ಉದ್ದ ತುಂಡು.
ಕೇಥುರಿ	೯೫	ಧೋತ್ರ ೧೭, ಸೀರೆ. ೯ ಮತ್ತು ೧೫ ಉದ್ದ ತುಂಡು.
ಶಿರೋಂದಿ	೭೬	ಲುಂಗಿ ೧೪, ಅಂಗಿ ೧೩, ಸೀರೆ ೨೦, ಧೋತ್ರ ೨೨ ಮತ್ತು ೨೧ ಗಜ ಉದ್ದ ತುಂಡು.
ಚಂಡೀಪುರ	೧೩೭	ಸೀರೆ ೧೫, ಚಾದರ ೨ ಮತ್ತು ಧೋತ್ರ ೬
ಪಾರಕೋಟೆ	೮೮	ಚಾದರ ೧೪, ಸೀರೆ ೧೭, ಧೋತ್ರ ೨ ಮತ್ತು ೧೦ ಉದ್ದ ತುಂಡು.

ಮತ್ತು ಇದು ಕೂಡ ಒಂದು ತುಂಡು ಗಿರಣಿ ಸೀರೆ ಇಲ್ಲವೆ ಲುಂಗಿಗಾಗಿ ತಿಂಗಳು ತಿಂಗಳು ಜನ ಕಾದು ಕೂಡುವ ಸ್ಥಳದಲ್ಲಿ.

ಹೊಸದಿಲ್ಲಿ, ೨೦—೧—೪೮.

—ಪ್ಯಾರೇಲಾಲ

ಬೆಲ್ಜಿಯಂ ಶಾಸನ ಸಭೆಯ ಅಧ್ಯಕ್ಷರು ಸಭೆಯಲ್ಲಿ 'ಶಾಂತಿಗಾಗಿ ಹೋರಾಗುವದನ್ನು ಬಿಡದೆ ಮನುಷ್ಯನು ವಿಜಯ ದೊರಕಿಸಬಹುದೆಂದು ಮಹಾತ್ಮರ ಜೀವನವು ಸ್ಪಷ್ಟಪಡಿಸುತ್ತದೆ; ಅವರ ವಿಷಾದಕರ ನಿಧನವು ವಿಶ್ವಬಂಧುತ್ವದ ಅವರ ಉದಾತ್ತ ಕಲ್ಪನೆಯನ್ನು ಪ್ರೇರಿಸುತ್ತಿರಲಿ' ಎಂದರು. ಅಧ್ಯಕ್ಷರು ಮಾತಾಡುತ್ತಿದ್ದಾಗ ಸಭಿಕರು ಎದ್ದು ನಿಂತಿದ್ದರು.

ಭಾರತದಲ್ಲೆಲ್ಲ ಬಂಧನ

ಮಹಾತ್ಮಾ ಗಾಂಧಿಯವರ ಕೊಲೆಯ ಪ್ರತಿಕ್ರಿಯೆಯಿಂದ ಹಿಂದು ಮಹಾ ಸಭೆಯ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರನ್ನು ಭಾರತದ ಎಲ್ಲ ಪ್ರಾಂತಗಳಲ್ಲಿಯೂ ಸರಕಾರದವರು ಬಂಧಿಸುತ್ತಿದ್ದಾರೆ. ಈ ವರೆಗೆ ಬಂಧಿತರಾದ ಕೆಲವರ ಸಮಾಚಾರ ಈ ಕೆಳಗೆ ಕೊಡಲಾಗಿದೆ.

ಅ. ಭಾ. ಹಿಂದು ಮಹಾಸಭೆಯ ಹಿಂದಿನ ಅಧ್ಯಕ್ಷರಾದ ಶ್ರೀ ವಿ.ಡಿ.ಸಾವರಕರ, ಶ್ರೀ ಜಮುನಾದಾಸ ಮೆಹತಾ ಮತ್ತು ಮುಂಬಯಿ ಪ್ರಾಂ. ಹಿಂದು ಮಹಾ ಸಭೆಯ ಅಧ್ಯಕ್ಷ ಶ್ರೀ ಎ. ಎಚ್. ಗಡ್ರೆ ಇವರನ್ನು ತಾ. ೫ ಮುಂಜಾನೆ ಸೆರೆ ಹಿಡಿಯಲಾಯ್ತು.

ಹಿಂದು ಮಹಾ ಸಭೆಯ ಕೋಶಾಧ್ಯಕ್ಷರಾಗಿದ್ದ ರಾಜಾ ಬಹದ್ದೂರ ನಾರಾಯಣಲಾಲ ಬನ್ಸಿಲಾಲ, ಕೆ. ಎಚ್. ಘಂಢೇರಿ, ಡಾ. ವಿ. ಜಿ. ಭಿಡೆ, ಡಾ. ದೇಶಮುಖ, ಜಿ. ವಿ. ದಯಾಳ (ಸಂಘಚಾಲಕ) ಮತ್ತು ರಾ. ಸ್ವ. ಸೇ. ಸಂಘದ ಇತರ ಅಧಿಕಾರೀ ವರ್ಗದವರನ್ನು ಬಂಧಿಸಲಾಗಿದೆ.

ಪುಣೆಯಲ್ಲಿ ಪ್ರಾಂತಿಕ ಸಂಘಟಿಕರಾದ ಶ್ರೀ ಎಸ್. ಜಿ. ಅಭ್ಯಂಕರ, ಶ್ರೀ ಜಿ. ನಲವಡೆ, ಶ್ರೀ ವಿ. ಎಂ. ದೇಶಮುಖ ಇವರನ್ನು ಬಂಧಿಸಲಾಗಿದೆ.

ಪುಣೆಯಲ್ಲಿ ಮತ್ತು ಮುಂಬಯಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಮನೆಗಳ ಶೋಧ ನಡೆದಿದೆ.

ಕರ್ನಾಟಕದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರನಾಯಕರಾದ ಶ್ರೀ ಯಾದವರಾವ ಜೋಶಿ ಮತ್ತು ಮೈಸೂರ ಸಂಸ್ಥಾನ ರಾ. ಸ್ವ. ಸೇ. ಸಂಘದ ಸರನಾಯಕರಾದ ಶ್ರೀ ಸೂರ್ಯನಾರಾಯಣರಾಯರನ್ನು ಬೆಂಗಳೂರಲ್ಲಿ ಬಂಧಿಸಲಾಗಿದೆ.

ಅಂಧೇರಿ (ಮುಂಬಯಿ ಉಪನಗರ) ಮ್ಯುನಿಸಿಪಲ ಕಮೀಟಿಯ ಉಪಾಧ್ಯಕ್ಷರಾದ ಶ್ರೀಮತಿ ರಮಾಬಾಯಿ ಜೆಂಬೂರಕರರನ್ನು ಬಂಧಿಸಲಾಗಿದೆ.

ಸೊಲ್ಲಾಪುರದಲ್ಲಿ ಸ್ಥಳೀಯ ಆರ್. ಎಸ್. ಎಸ್. ಸಂಘ ಪ್ರಮುಖರಾದ ಡಾ. ಬಿ. ವಿ. ಮುಳೆ ಶ್ರೀ ಎಸ್. ಎಸ್. ದ್ರವಿಡರನ್ನು ಬಂಧಿಸಿದರು.

ಸುರತದಲ್ಲಿ ಶ್ರೀ ರಮಣಲಾಲ ಶಹಾ, ಮಣಿಲಾಲ ಶಹಾ ಮೊದಲಾದ ನಾಲ್ವರು ರಾ. ಸ್ವ. ಸೇವಕರನ್ನು ಬಂಧಿಸಲಾಗಿದೆ.

ದಿಲ್ಲಿಯಲ್ಲಿ ತಾ. ೫ ರಂದು ರಾ. ಸ್ವ. ಸೇ. ಸಂಘದ ೨೦ ಸದಸ್ಯರನ್ನು ಬಂಧಿಸಲಾಗಿದೆ.

ಮದ್ರಾಸದಲ್ಲಿ ರಾ. ಸ್ವ. ಸೇ. ಸಂಘದ ೧೩ ಸೇವಕರನ್ನು ಬಂಧಿಸಲಾಗಿದೆ.

ಬೆಝವಾಡದಲ್ಲಿ ಪ್ರಾಂತಿಕ ಸಂಘಟಕರಾದ ಶ್ರೀ ಎಂ. ಡಬ್ಲ್ಯೂ. ವೇಲ್ಲೆ, ಜಿಲ್ಲಾ ಸಂಘಟಿಕ ಶ್ರೀ ಬಿ. ವೆಂಕಟೇಶ್ವರರಾವ ಮತ್ತು ಇಲ್ಲಿಯ ಎಸ್. ಆರ್. ಆರ್. ಸಿ. ವಿ. ಆರ್. ಕಾಲೇಜಿನ ಪ್ರಿನ್ಸಿಪಾಲ ಮತ್ತು ವೈಸ ಪ್ರಿನ್ಸಿಪಾಲರಾದ ಡಾ. ಪಿ. ಶ್ರೀನಿವಾಸಾಚಾರಿ, ಶ್ರೀ ರಾಘವಾಚಾರಿಯವರನ್ನೂ, ಜಿ. ಸೀತಾಪತಿ ಎಂಬ ನಗರ ಸಭೆಯ ಸದಸ್ಯರನ್ನೂ ಬಂಧಿಸಲಾಗಿದೆ. ಇಲ್ಲಿಂದ ನಾಗಪುರಕ್ಕೆ ಹೊರಟಿದ್ದ ಶ್ರೀ ಪಾರ್ಕೆ ಮತ್ತು ಎಂ. ಗೋಖಲೆಯವರನ್ನು ರೇಲ್ವೆ ಪೋಲೀಸರು ಹಿಡಿದಿದ್ದಾರೆ.

ಕಲಕತ್ತೆಯಲ್ಲಿ ಹತ್ತು ರಾ. ಸ್ವ. ಸೇವಕರನ್ನು ಬಂಧಿಸಲಾಗಿದೆ.

ಜಾತೀಯ ೯ ಸಂಸ್ಥೆಗಳು ಅಕ್ರಮವಾದವು

ಮದ್ರಾಸ ಗವ್ಹರ್ನರರ ಆಜ್ಞೆ

ಮದ್ರಾಸ ಗವ್ಹರ್ನರರಾದ ಸರ ಆರ್ಚಿಬಾಲ್ಡ ನೈ ಅವರು ತಾ. ೬ ರಂದು ಒಂದು ಆಜ್ಞೆ ಹೊರಡಿಸಿ ರಾಷ್ಟ್ರೀಯ ಸ್ವಯಂ ಸೇವಕ ಸಂಘವಲ್ಲದೆ ಮತ್ತೆ ಬೇರೆ ೯ ಸಂಸ್ಥೆಗಳು ಅಕ್ರಮವೆಂದು ಸಾರಿದ್ದಾರೆ. ಅವನ್ನು ಕೆಳಗೆ ಕೊಟ್ಟಿದೆ.

(೧) ಶಾಂತಿ ಸೇನೆಗಳು (೨) ಕಮ್ಯುನಿಸ್ಟ ಸ್ವಯಂಸೇವಕ ಸಂಘ (೩) ಕೆಂಪು ಸಂರಕ್ಷಣ ದಲ (೪) ಕಮ್ಯುನಿಸ್ಟ ಜಥಾ (೫) ಕಮ್ಯುನಿಸ್ಟ ರೆಡ್ ಕ್ರಾಸ ವಾಲಂಟಿಯರ ಸಂಸ್ಥೆ (೬) ಶಿಬಿರಗಳು (೭) ಮುಸ್ಲಿಂ ನ್ಯಾಶನಲ್ ಗಾರ್ಡ್ಸ (೮) ಮುಸ್ಲಿಂ ಬಾಲಕ ಸಂಘ (೯) ಮುಸ್ಲಿಂ ರಾಷ್ಟ್ರೀಯ ಸೇವಕ ಸಂಘ.

ಮೇಲ್ಕಾಣಿಸಿದ ಈ ಸಂಸ್ಥೆಗಳು, ಮೆರವಣಿಗೆ, ಶಿಬಿರ, ಕವಾಯಿತ ಇವೇ ಮೊದಲಾದವನ್ನು ಜರಗಿಸತಕ್ಕದ್ದಲ್ಲವೆಂದು ಆ ಆಜ್ಞೆ ವಿಧಿಸುತ್ತದೆ. ಈ ಸಂಸ್ಥೆಗಳು ಶಾಂತಿ ಸುವ್ಯವಸ್ಥೆಗೆ ಭಂಗತರುವಂತಹವೆಂದು ಸರಕಾರಕ್ಕೆ ತೋರಿಬಂದುದರಿಂದ ಇವುಗಳನ್ನು ಅಕ್ರಮಗೊಳಿಸಿರುವದಾಗಿ ಸರಕಾರವು ಕಾರಣಕೊಟ್ಟಿದೆ.

ಉದ್ವೇಗಗೊಂಡು ಹೊಲ್ಲದ ಕೆಲಸ ಮಾಡಬೇಡಿರಿ

ದೇಶ ಶಾಂತಿಯೇ ಮಹಾತ್ಮರ ಆತ್ಮಕ್ಕೆ ಶಾಂತಿ ಕೊಡುವದು

ಸರದಾರ ಪಟೇಲರ ಹಿತವಾದ

ಭಾರತದ ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ತಾ. ೧ ಕ್ಕೆ ಒಂದು ಪ್ರಕಟನೆ ತೆಗೆದು ಜನರು ಉದ್ವೇಗಗೊಂಡು ಹೊಲ್ಲದ ಕೆಲಸಕ್ಕೆ ಕೈ ಇಕ್ಕಕೂಡದೆಂದು ಸಾರಿದ್ದಾರೆ. ಮಹಾತ್ಮರ ಕೊಲೆಗೆ ಕಾರಣರಾದವರನ್ನೆಲ್ಲ ಶೋಧಿಸಿ ಶಿಕ್ಷಿಸಲು ಸರಕಾರ ಸಮರ್ಥವಾಗಿದೆಯೆಂದೂ ಈ ಸಂಚಿನಲ್ಲಿ ಅಂಗವಿದ್ದವರು ಪಾತಾಳದಲ್ಲಿ ಅಡಗಿ ಕುಳಿತರೂ ಅವರನ್ನು ಹುಡುಕಿ ತೆಗೆದು ತಕ್ಕ ಶಾಸನ ಮಾಡುವದೆಂದೂ ಹೇಳಿದ್ದಾರೆ. ಅವರು ಇನ್ನೂ ಹೇಳಿರುವದೇನಂದರೆ —

ಕೆಲವು ಪ್ರದೇಶಗಳಲ್ಲಿ ವಿಶೇಷವಾಗಿ ಮುಂಬಯಿ ಪ್ರಾಂತದಲ್ಲಿಯೂ ಕೊಲ್ಹಾಪುರ ಸಂಸ್ಥಾನದಲ್ಲಿಯೂ ಕೆಲವು ಜನರು ಹಿಂದೂ ಮಹಾಸಭೆ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸದಸ್ಯರ ಮೇಲೆಯೂ ಅವರ ಕಚೇರಿಗಳ ಮೇಲೆಯೂ ಏರಿ ಹೋಗಿ ದಾಂಧಲೆ ನಡೆಸಿರುವರೆಂದು ಕೇಳಿ ನನಗೆ ವಿಷಾದವಾಗಿದೆ. ದಿಲ್ಲಿಯಲ್ಲಿಯೂ ಸಣ್ಣಪುಟ್ಟ ಘಟನೆಗಳಾಗಿರುವವೆಂದು ತಿಳಿದು ಬಂದಿದೆ.

ಸಿಟ್ಟಿನ ಭರದಲ್ಲಿ ನಾವು ಸೇಡು ತೀರಿಸಿಕೊಳ್ಳತೊಡಗಿದರೆ ಮಹಾತ್ಮಾ ಗಾಂಧಿಯವರ ಉಪದೇಶದ ವಿರುದ್ಧ ವರ್ತಿಸಿದಂತಾಗುತ್ತದಲ್ಲದೆ ಅವರು ನಮ್ಮಲ್ಲಿಟ್ಟ ವಿಶ್ವಾಸಕ್ಕೆ ದ್ರೋಹ ಬಗೆದಂತಾಗುತ್ತದೆ.

ಕೊಲೆಯ ಸಂಚಿನಲ್ಲಿ ಅಂಗವಿದ್ದವರನ್ನೆಲ್ಲ ಹಿಡಿದು ಶಿಕ್ಷಿಸುವದು ಸರಕಾರದ ಕರ್ತವ್ಯ. ಅದನ್ನು ಸರಕಾರವು ತತ್ಪರತೆಯಿಂದ ಮಾಡುವದೆಂದು ನಾನು ಆಶ್ವಾಸನ ಕೊಡುತ್ತೇನೆ. ಈ ಅತ್ಯಾಚಾರದ ಪೂರ್ವ ಭಾವಿಯಾಗಿ ನಡೆದ ಕಾರಸ್ಥಾನದ ತಳ ಬುಡವನ್ನೆಲ್ಲ ಶೋಧ ಮಾಡದೆ ಬಿಡಲಾರೆವು. ಜನರು ಉದ್ರಿಕ್ತರಾಗಿ ಮನ ಬಂದಂತೆ ವರ್ತಿಸದೆ ಸರಕಾರಕ್ಕೆ ಅಪರಾಧಿತರನ್ನು ಶಿಕ್ಷಿಸುವ ಕಾರ್ಯವನ್ನು ಒಪ್ಪಿಸಿಬಿಡುವದು ಯೋಗ್ಯವಾದುದು. ನಾನು ಜಾನೇವರಿ ೩೦ ನೇ ದಿನ ಆಕಾಶವಾಣಿ ಭಾಷಣದಲ್ಲಿ ಇದನ್ನೆಲ್ಲ ಮನದಂದೇ ಜನರೆಲ್ಲ ಶಾಂತರಾಗಿರಬೇಕೆಂದೂ ಉದ್ರಿಕ್ತರಾಗಿ ವಿವೇಕವನ್ನು ಕಳೆದುಕೊಳ್ಳಬಾರದೆಂದೂ ಬಿನ್ನವಿಸಿದ್ದೆ. ಇನ್ನೊಮ್ಮೆ ಜನರೆಲ್ಲ ನಾನು ಅದೇ ಬಿನ್ನಹ ಮಾಡಿಕೊಳ್ಳುತ್ತೇನೆ.

ಈ ಪ್ರಸಂಗದಲ್ಲಿ ಗಲಭೆ ಉಂಟಾದರೆ ನಮ್ಮ ಪ್ರೀತಿಯ ಪೂಜ್ಯ ಮತ್ತು ಜಗದ್ವಂದ್ಯ ಮುಖಂಡರಾದ ಮಹಾತ್ಮರ ತತ್ವಕ್ಕೆ ವಿರೋಧವಾಗಿ ಆಚರಿಸಿ ಅವರಿಗೆ ದ್ರೋಹ ಬಗೆದಂತಾಗುತ್ತದೆ. ಆ ಮಹಾ ವಿಭೂತಿಯ ಸೂತಕದಲ್ಲಿ ನಾವಿರುವಾಗ ಈ ಬಗೆಯ ಅನುಚಿತ ಕೆಲಸ ಮಾಡುವದು ಧರ್ಮವೆ?

ಆದ್ದರಿಂದ ವೈಯಕ್ತಿಕವಾಗಿಯಾಗಲೀ ಸಾಮೂಹಿಕವಾಗಿಯಾಗಲೀ ಸೇಡು ತೀರಿಸಿಕೊಳ್ಳುವ ಹೀನ ಕೆಲಸಕ್ಕೆ ಕೈಯಿಕ್ಕಬಾರದೆಂದು ನಾನು ಬಾರಿ ಬಾರಿ ಬೇಡಿಕೊಳ್ಳುತ್ತೇನೆ. ತಪ್ಪಿತಸ್ಥರ ಸಮಾಚಾರ ತೆಗೆದುಕೊಳ್ಳುವದನ್ನು ಸರಕಾರಕ್ಕೆ ಬಿಟ್ಟು ಕೊಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಸತ್ಯಾಭಿಜ್ಞ ತೀರ್ಥರು ವೃಂದಾವನಸ್ಥರಾದರು

ಶ್ರೀ ಗುತ್ತಲ ರಾಮಾಚಾರ್ಯರು ಹೊಸ ಶ್ರೀಗಳು

[illegible] ಅವರಿಗೆ ಶ್ರೀ ಸತ್ಯಪ್ರಮೋದತೀರ್ಥರೆಂದು ನಾಮಕರಣ ಮಾಡಲಾಗಿದೆ. ಹೊಸ ಸ್ವಾಮಿಗಳು ನ್ಯಾಯ ವೇದಾಂತ [illegible]ಗಳಲ್ಲಿ ನಿಷ್ಣಾತರಾಗಿರುವರು. ಅವರ [illegible] ಮಾತ್ರ.

ಭಾರತ ಸರಕಾರದ ನಿರ್ಣಯ

ಜಾತೀಯ ಸಂಸ್ಥೆಗಳಿಗೆ ಖಾಸಗಿ ಸೈನ್ಯಗಳಿಗೆ ಅನುವಿಲ್ಲ

ಭಾರತ ಸರಕಾರವು ತಾ. ೩ ರಂದು ಮಹಾತ್ಮರ ನಿಧನದ ಫಲವಾಗಿ ಎರಡು ಗೊತ್ತುವಳಿಗಳನ್ನು ಮಾಡಿ ಅವನ್ನು ಅಂದೇ ಸಂಜೆಗೆ ವಿಶೇಷ ಗ್ಯಾಜೆಟ್ಟಿನಲ್ಲಿ ಪ್ರಕಟಿಸಿತು.

ಈ ಗೊತ್ತುವಳಿಗಳು ಜಾತೀಯ ದ್ವೇಷ ಹಾಗೂ ಹಿಂಸಾಚಾರಗಳಿಗೆ ಹುಟ್ಟುಕೊಡುವ ಸಂಸ್ಥೆಗಳ ಬಗ್ಗೆಯೂ ಖಾಸಗಿ ಸೇನೆಗಳಿಗೆ ಅವಕಾಶವಿರಕೂಡದೆಂಬ ಬಗ್ಗೆಯೂ ಇವೆ.

ಭಾರತದಲ್ಲಿ ಬೆಳೆದು ಬರುತ್ತಿರುವ ಹಿಂಸಾಪ್ರವೃತ್ತಿಯನ್ನೂ ದುಷ್ಟ ಚೇತನಗಳನ್ನೂ ನಿರ್ಮೂಲನ ಮಾಡುವ ಕೆಲಸದಲ್ಲಿ ಭಾರತೀಯರೆಲ್ಲ ಸರಕಾರದೊಡನೆ ಸಹಕರಿಸಬೇಕೆಂಬುದಾಗಿ ಆ ಗೊತ್ತುವಳಿಯಲ್ಲಿ ಬಿನ್ನವಿಸಲಾಗಿದೆ.

ಮೊದಲನೆಯ ನಿರ್ಣಯದ ಸಾರ ಹೀಗಿದೆ:—

ಮಹಾತ್ಮರ ನಿಧನದ ರೀತಿಯಿಂದ ನಮ್ಮಲ್ಲಿ ಹಿಂಸಾಪ್ರವೃತ್ತಿಯೂ ದುಷ್ಟ ಚೇತನಗಳೂ ಹೇಗೆ ಒಳಗೊಳಗೆ ಕೆಲಸ ನಡೆಸಿವೆ ಎಂಬುದು ಸ್ಪಷ್ಟ ಕಾಣುತ್ತದೆ. ಭಾರತದ ಧವಲ ಕೀರ್ತಿಗೆ ಈ ದುಷ್ಟಭಾವಗಳು ಕಲಂಕವಾಗಿರುವ ಕಾರಣ ಅವನ್ನು ಕೊಡೆದು ಹಾಕುವದು ಅತ್ಯಗತ್ಯ. ಇವುಗಳನ್ನು ನಿರ್ಮೂಲಗೊಳಿಸಲು ಜನತೆಯ ಸಹಕಾರವೂ ಸರಕಾರಕ್ಕೆ ಅವಶ್ಯ ಬೇಕು. ಸರಕಾರವು ಈ ಕೆಲಸವನ್ನು ಕೈಕೊಳ್ಳಬೇಕೆಂದು ಜನಸಾಮಾನ್ಯರೂ ಬಯಸುತ್ತಿರುವರು. ಇದು ಸರಕಾರಕ್ಕೆ ಗೊತ್ತಿದೆ. ಸರಕಾರವು ಇನ್ನು ದೃಢನಿಶ್ಚಯದಿಂದ ಈ ಕಾರ್ಯಕ್ಕೆ ಕೈಯಿಕ್ಕುವದು. ಕಾರಣ ಜನತೆಯು ಈ ವಿಷಯದಲ್ಲಿ ಮನಬಲ್ಲಂತೆ ವರ್ತಿಸದೆ ಸರಕಾರಕ್ಕೇ ಈ ನಿಗ್ರಹಕಾರ್ಯವನ್ನು ಬಿಟ್ಟುಕೊಡಬೇಕು.

ಭಾರತದಲ್ಲಿ ಇನ್ನು ಮೇಲೆ ಜಾತೀಯತೆಯನ್ನು ಹಿಂಸಾವೃತ್ತಿಯನ್ನೂ ಪ್ರಸಾರಗೊಳಿಸುವ ಯಾವ ಸಂಘ ಸಂಸ್ಥೆಗಳಿಗೂ ಅನುವಿಲ್ಲ. ಖಾಸಗಿ ಸೈನ್ಯ ಕಟ್ಟುವದಕ್ಕೆ ಇನ್ನು ಅಪ್ಪಣೆ ಸಿಕ್ಕಲಾರದು. ಇದನ್ನು ಅನುಲಕ್ಷಿಸಿ ನಾಗರಿಕರೂ ಸರಕಾರೀ ನೌಕರ ವರ್ಗವೂ ಸರಕಾರದ ಧೋರಣಕ್ಕನುಗುಣವಾಗಿ ನಡೆದುಕೊಳ್ಳಬೇಕೆಂದು ಸರಕಾರವು ಈ ಮೂಲಕ ಕೇಳಿಕೊಳ್ಳುತ್ತದೆ.

ಎರಡನೆಯ ಗೊತ್ತುವಳಿಯ ಸಾರ ಹೀಗಿದೆ—

ದಲಿತರ ಮತ್ತು ಅನಾಥರ ತಂದೆಯಾಗಿದ್ದ ಮಹಾತ್ಮರನ್ನು ಕೊಲೆಪಾತಕಿಯೊಬ್ಬನು ಕೊಂದು ಹಾಕಿದನು. ಹಿಂದುಸ್ತಾನದಲ್ಲಿ ಶಾಂತಿಸೌಹಾರ್ದಗಳನ್ನು ಪ್ರಸ್ಥಾಪಿಸಬೇಕೆಂಬ ಸಂಕಲ್ಪವೇ ಮಹಾತ್ಮರ ಕೊನೆಯ ಮಹಾಕೃತಿ. ಕೋಟ್ಯಂತರ ಜನರಿಗೆ ಸ್ಫೂರ್ತಿದಾತನೂ ಮಾರ್ಗದರ್ಶಕನೂ ಆದ ಈ ಮಹಾಪುರುಷನನ್ನು ಹಿಂದುಸ್ತಾನ ಸರಕಾರವು ಒಳ್ಳೆ ಕೃತಜ್ಞತೆಯಿಂದಲೂ ಅಭಿಮಾನದಿಂದಲೂ ಸ್ಮರಿಸುತ್ತದೆ. ಮರಣಾನಂತರ ಕೂಡ ಅವರ ಮುಖದ ಮೇಲೆ ಶಾಂತ ಮಂದಸ್ಮಿತ ಪ್ರೇಮಭಾವವು ಸತ್ಯ ಅಹಿಂಸೆಯ ಸಂದೇಶಸ್ವರೂಪವಾಗಿ ಮಿನುಗುತ್ತಿತ್ತು.

ಮಹಾತ್ಮರ ಕೊಲೆಗೆ ಕಾರಣವಾದ ದೇಶದ ದುಷ್ಟ ಮತ್ತು ಹಿಂಸಾ ಪ್ರವೃತ್ತ ಶಕ್ತಿಗಳೊಡನೆ ಹೋರಾಡಲು ಜನತೆಯು ಸರಕಾರದೊಡನೆ ಸಹಕರಿಸಬೇಕು. ಮಹಾತ್ಮರ ಕನಸಿನ ರಾಜ್ಯವನ್ನು ಕಟ್ಟುವದಕ್ಕಾಗಿ ಅವರಿಗೂ ದೇಶಕ್ಕೂ ಎಲ್ಲರೂ ನಿಷ್ಠರಾಗಿರಬೇಕೆಂದು ಸರಕಾರವು ಜನತೆಗೆ ಬೇಡುತ್ತದೆ.

ಆರ್. ಎಸ್. ಎಸ್. ಸಂಘ ಅಕ್ರಮ ಸಂಸ್ಥೆ

ಭಾರತ ಸರಕಾರದ ಆಜ್ಞೆ

ಭಾರತ ಸರಕಾರವು ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಅಕ್ರಮ ಸಂಸ್ಥೆಯೆಂದು ಆಜ್ಞೆ ಹೊರಡಿಸಿದೆ. ಇದಕ್ಕನುಸರಿಸಿ ಯುಕ್ತಪ್ರಾಂತ, ಮಧ್ಯಪ್ರಾಂತ, ಮದ್ರಾಸ, ಮುಂಬಯಿ ಮೊದಲಾದ ಪ್ರಾಂತಿಕ ಸರಕಾರಗಳೂ ಈ ಸಂಸ್ಥೆಯನ್ನು ಅಕ್ರಮವೆಂದು ಸಾರಿವೆ. ಈ ಸಂಸ್ಥೆಯ ಅನೇಕ ಕಾರ್ಯಕರ್ತರು ಹಿಂದುಸ್ತಾನದಲ್ಲೆಲ್ಲ ಬಂಧಿತರಾಗಿದ್ದಾರೆ.

ಮುಧೋಳ ಸಂಸ್ಥಾನದ ವಿಲೀನೀಕರಣ

ಮುಧೋಳದ ರಾಜಾಸಾಹೇಬರು ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ವಿಲೀನಗೊಳಿಸುವ ನಿರ್ಣಯ ಕೈಕೊಂಡಿದ್ದಾರೆ. ಹಿಂದುಸ್ತಾನ ಸರಕಾರದ ಸಂಸ್ಥಾನ ಶಾಖೆಯವರಿಗೆ ತಿಳಿಸಿದ್ದಾರೆ. ಮುಂದಿನ ಕ್ರಮವನ್ನು ಕೈಕೊಳ್ಳಲು ಅವರನ್ನು ಬಿನ್ನವಿಸಿಕೊಂಡಿದ್ದಾರೆ.

ಕೇಂದ್ರ ಶಾಸನ ಸಭೆ

ತಾ. ೨೭ ಕ್ಕೆ ಭಾರತ ಸರಕಾರದ ಕೇಂದ್ರ ಶಾಸನ ಸಭೆಯು ದುಃಖಮಯ ವಾತಾವರಣದಲ್ಲಿ ಕೂಡಿತು. ಪಂ. ನೆಹರು ಮೊದಲಾದವರು ಮಹಾತ್ಮರ ದುಃಖ ವ್ಯಕ್ತ ಮಾಡಿದರು. ತಾ. ೩೧ ರ ಸಭೆಯಲ್ಲಿ ಉದ್ಯೋಗ ಹಾಗೂ ಪೂರೈಕೆ ಮಂತ್ರಿ ಡಾ. ಶ್ಯಾಮಪ್ರಸಾದರು ಭಾರತದ ಜವಳಿ ಸರಕುಗಳ ಮೇಲೆ ಕರ ಹೇರುವ ಮಸೂದೆ ಮಂಡಿಸಿದರು. ಗಿರಣಿಗಳು ಹಾಸು ಸಂಗ್ರಹಕಾರರಿಂದ ಬಟ್ಟೆಯ ಹಳೆ ಸಂಗ್ರಹದ ಬೆಲೆಯಲ್ಲಿ ಪ್ರಾಕ್ಸಸದ ಹಣವನ್ನು ವಸೂಲ ಮಾಡುವದಕ್ಕಾಗಿ ಈ ಮಸೂದೆ ಇದೆ.

ನಿರಾಶ್ರಿತರ ಸಹಾಯಕ್ಕಾಗಿ ೧೦ ಕೋಟಿ ರೂ. ಗಳ ಬಂಡವಾಲದ ಪುನರ್ನಿವೇಶನ ಸಂಸ್ಥೆಯೊಂದನ್ನು ಪ್ರಾರಂಭಿಸಬೇಕೆಂದು ತಂದ ಅರ್ಥ ಮಂತ್ರಿ ಷಣ್ಮುಖಂ ಚೆಟ್ಟಿಯವರ ಮಸೂದೆಯು ಪರಿಶೀಲಕ ಸಮಿತಿಗೆ ಒಪ್ಪಿಸಲ್ಪಟ್ಟಿತು.

ಪ್ರಶ್ನೋತ್ತರಗಳಲ್ಲಿ ಈ ಕೆಳಗಿನ ಅಂಶಗಳು ತಿಳಿದುಬರುತ್ತವೆ.

ಭಾರತ ಪಾಕಿಸ್ತಾನಗಳ ಗಡಿಯು ಗೆರೆ ಕೊರೆದಿಲ್ಲ. ಎರಡು ಮೂರು ಪ್ರಸಂಗಗಳಲ್ಲಿ ಗಡಿಯ ಬಗ್ಗೆ ವಾದವಿವಾದವೆದ್ದುದರಿಂದ ಉಭಯ ಸರಕಾರದ ಪ್ರತಿನಿಧಿಗಳು ಸೀಮಾ ಸಮಸ್ಯೆಯನ್ನು ಪರಿಶೀಲಿಸಿ ಒಂದು ನಿರ್ಣಯಕ್ಕೆ ಬರುವದು ಯೋಗ್ಯವೆಂದು ಪಾಕಿಸ್ತಾನ ಸರಕಾರಕ್ಕೆ ಸೂಚಿಸಲಾಗಿದೆ.

ಭಾರತದ ಅಥವಾ ಪಾಕಿಸ್ತಾನದ ನಿವಾಸಿಗಳಿಗೆ ಹೋಗಲು ಬರಲು ಭಾರತ ಸರಕಾರದ ಸಮ್ಮತಿ ಪತ್ರ ಬೇಕಾಗಿಲ್ಲ. ಈ ವಿಷಯದಲ್ಲಿ ಪಾಕಿಸ್ತಾನ ಸರಕಾರದ ಧೋರಣ ತಿಳಿಯದು.

ಗುಜರಾತದ ರೇಲ್ವೆ ಅಪಘಾತದಲ್ಲಿ ೩೦ ನಿರಾಶ್ರಿತರು ಮರಣಹೊಂದಿದರು. ೭೦೦ ಜನರಿಗೆ ಗಾಯವಾಯಿತು. ೩೦ ಲಕ್ಷ ರೂ. ಸಾಮಾನು ಸುಲಿಗೆಯಾಯಿತು. ಈ ನಿರಾಶ್ರಿತರ ಉಗಿಬಂಡಿಯ ಕಾವಲಿಗಿದ್ದ ಸೈನ್ಯಪಡೆಯ ಮುಖ್ಯಾಧಿಕಾರಿಯು ಕಣ್ಮರೆಯಾಗಿರುವನು. ಈ ದುರಂತದ ಬಗ್ಗೆ ವಿಚಾರ ನಡೆಸುವದಾಗಿ ಪಾಕಿಸ್ತಾನ ಸರಕಾರವು ಆಶ್ವಾಸನ ಕೊಟ್ಟಿದೆ.

ತಾ ೪ ನೇ ದಿನದ ಸಭೆಯಲ್ಲಿ ಶ್ರೀ ಅನಂತಶಯನಂ ಅಯ್ಯಂಗಾರರು ಭಾರತಕ್ಕೆ ಬರಗಾಲ ಬರದಂತೆ ಒಂದು ವೇಳೆ ಬಂದರೆ ಅದನ್ನು ಯಶಸ್ವಿಯಾಗಿ ಎದುರಿಸಲು ಕ್ಷಾಮಮಂಡಲ ಒಂದನ್ನು ಶಾಶ್ವತವಾಗಿ ಸ್ಥಾಪಿಸಬೇಕೆಂಬ ಗೊತ್ತುವಳಿ ತಂದರು. ಇದಕ್ಕೆ ಕಾಜಿ ಕರೀಮುದ್ದೀನರು ಅನುಮೋದಿಸಿದರು ಮತ್ತು ಇನ್ನು ಅನೇಕರು ಬೆಂಬಲ ಕೊಟ್ಟರು.

ಆಹಾರ ಮಂತ್ರಿಗಳಾದ ಶ್ರೀ ಜಯರಾಮದಾಸ ದೌಲತರಾಮರು ಈ ವಿಷಯಕ ಚರ್ಚೆಗೆ ಉತ್ತರ ಕೊಡುತ್ತ ತಾವು ಈ ಬಗ್ಗೆ ಇದ್ದ ಸದಸ್ಯರ ಅಭಿಪ್ರಾಯಗಳನ್ನು ಮಾನ್ಯ ಮಾಡಿದರೂ ಈ ಗೊತ್ತುವಳಿಯು ಈಗಿನ ಸ್ವರೂಪದಲ್ಲಿರುವದು ಯೋಗ್ಯವಲ್ಲವೆಂದೂ ಬರಗಾಲ ನಿವಾರಣೆಯ ಬಗ್ಗೆ ಕೇಂದ್ರದಲ್ಲಿ ಪ್ರಾಂತಗಳ ಸಹಕಾರದಿಂದ ಒಂದು ಸಂಸ್ಥೆಯನ್ನು ಏರ್ಪಡಿಸುವದು ಯುಕ್ತವೆಂದೂ ಸಕಾರಣವಾಗಿ ವಿವರಿಸಿ ಹೇಳಲು ಶ್ರೀ ಅನಂತಶಯನಂ ಅವರು ತಮ್ಮ ಸೂಚನೆ ಹಿಂದೆಗೆದುಕೊಂಡರು.


ಹಿಂದೂ ಮಹಾಸಭೆಯ ಉಪಾಧ್ಯಕ್ಷರ ಮನವಿ

[illegible] ಹೊರಡಿಸಿದ್ದು ಅದರ ಸಾರ [illegible]

ಹಿಂದೂ ಮಹಾಸಭೆಯ [illegible] ಸಂಕ್ರೇವೆ. ಈ ಅವಿವೇಕದ ಕೃತಿಯಿಂದ ಭಾರತದ ಕೀರ್ತಿಗೆ ಕಲಂಕ ಹತ್ತಿದೆ. ಹಿಂದುಸ್ತಾನದ ವೀರ ಪುತ್ರರಾದ ಮಹಾತ್ಮರ ಕೊಲೆ ಮಾಡಿದವನು ಕಲಂಕಕಾರನಾಗಿದ್ದಾನೆ. ನಾವು ಹಿಂಸಾಚಾರವನ್ನು ಎಂದೂ ಧ್ಯೇಯವೆಂದಲ್ಲದೆ ಶಾಸನ ಸಮ್ಮತವಾದ ರೀತಿಯಲ್ಲಿಯೇ ಸಾಗತಕ್ಕದ್ದೆಂದು ನಾವು ಸದಾ ಸಾರುತ್ತ ಬಂದಿದ್ದೇವೆ. ರಾಜಕೀಯ ಉದ್ದೇಶ ಸಾಧನೆಗೆ ವ್ಯಕ್ತಿಗಳ ಮೇಲೆ ಹಿಂಸಾಚಾರ ಮಾಡುವದನ್ನು ಮಹಾಸಭೆಯು ತೀವ್ರವಾಗಿ ವಿರೋಧಿಸುತ್ತದೆ. ಹಿಂದುಸ್ತಾನ ಒಕ್ಕೂಟದ ವೈರಿಗಳು ನಮ್ಮ ಯಾದವೀ ಯುದ್ಧವನ್ನೇ ಕುತೂಹಲರಾಗಿ ನಿರೀಕ್ಷಿಸುತ್ತಿದ್ದಾರೆ. ಆದ್ದರಿಂದ ಈ ಬಗೆಯ ಹಿಂಸಾಚಾರಗಳು ನಮ್ಮ ನಮ್ಮೊಳಗೆ ವೈರಹಬ್ಬಿಸಿ ನಮ್ಮ ವಿನಾಶಕ್ಕೆ ಕಾರಣವಾಗುತ್ತವೆ. ಇದರ ದುರ್ಲಾಭವನ್ನು ನಮ್ಮ ಒಕ್ಕೂಟದ ವೈರಿಗಳು ಖಂಡಿತ ಪಡೆಯುವರು.

ಮುಖ್ಯ ಮಂತ್ರಿಗಳಾದ ಪಂ. ಜವಾಹರಲಾಲರು ಮತ್ತು ಉಪ ಮುಖ್ಯ ಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು ಹೇಳಿದಂತೆ ನಾವೆಲ್ಲರೂ ಮತಭೇದ ತೊರೆದು ನಮ್ಮ ರಾಷ್ಟ್ರೀಯ ಸರಕಾರಕ್ಕೆ ನೆರವಾಗಲೇಬೇಕು.

ಹಿಂದುಸ್ತಾನದ ನಗರ ಹಾಗೂ ಹಳ್ಳಿಗಳಲ್ಲಿದ್ದ ಎಲ್ಲ ಹಿಂದೂ ಮಹಾಸಭೆಯ ಕಚೇರಿಗಳಿಂದ ಶಾಂತಿ, ಸೌಹಾರ್ದ, ಅಹಿಂಸೆಯ ಸಂದೇಶಗಳನ್ನು ಸಾರಬೇಕು. ಅಲ್ಲದೆ ಮಹಾತ್ಮಾ ಗಾಂಧಿಯವರ ಕೊಲೆಯನ್ನು ಅಂತಃಕರಣ ಪೂರ್ವಕ ಖಂಡಿಸುವ ಗೊತ್ತುವಳಿಯನ್ನು ಎಲ್ಲ ಹಿಂದೂ ಮಹಾಸಭೆಯವರೂ ಸಭೆಸೇರಿಸಿ ಸ್ವೀಕರಿಸಬೇಕೆಂದು ನಾವು ಈ ಮೂಲಕ ವಿಜ್ಞಾಪಿಸುತ್ತೇವೆ.






... ಸತ್ಯಾಗ್ರಹದಲ್ಲಿ (ಸಂಗಡ ಶ್ರೀಗಳಾದ ಕಾಲನ್ ಬಾಕ್, ... ಮತ್ತು ಶ್ರೀಮತಿ ಪೋಲಕ್)




ರಾಜಾಜಕ ಚಕ್ರವರ್ತಿ ಗಾಂಧಿ ...





...ರಲ್ಲಿ ಜೋಹಾನ್ಸಬರ್ಗದಲ್ಲಿ ಬ್ಯಾರಿಸ್ಟರ ಗಾಂಧಿ ತಮ್ಮ ಪರಿವಾರದೊಡನೆ (ಎಡಕ್ಕೆ) ಕಸ್ತೂರಬಾ (ಬಲಕ್ಕೆ) ದ. ಅಫ್ರಿಕದ ಜೈಲಿನಿಂದ ಬಿಡುಗಡೆಯಾದ ಬಳಿಕ



... ...ಂದ ಕುಂಬಿದ ಒಂದು ಮೋಟಾ ... ಪ್ರಭಾವದಲ್ಲಿ ಸಾಲ್ವರು ಅರ ... ಪ್ರಭಾ ರಾಷ್ಟ್ರೀಯ ಕಟ್ಟಡ ... ...ಲಿದ್ದ ಮನೆಗಳಿಗೆ ಬೆಂಕಿ ...

ಹುಬ್ಬಳ್ಳಿಯಲ್ಲಿ

ಆರ್. ಎಸ್. ಎಸ್. ಸಂಘವು ಅಕ್ರಮವೆಂದು ಸರಕಾರವು ಸಾರುತ್ತಲೇ ಹುಬ್ಬಳ್ಳಿಯ ಪೋಲೀಸ ಅಧಿಕಾರಿಗಳು ಅನೇಕ ಸ್ಥಾನಿಕ ಕಾರ್ಯಕರ್ತರನ್ನು ಬಂಧಿಸಿ ಅವರ ಮನೆಗಳನ್ನು ಶೋಧಿಸಿದರು. ಹುಬ್ಬಳ್ಳಿ ಆರ್. ಎಸ್. ಎಸ್. ಮುಖ್ಯಸ್ಥರಾದ ಡಾ. ಜಿ. ಎನ್. ವಝೆ ಮತ್ತು ಕಾರ್ಯದರ್ಶಿ ಶ್ರೀ ಜಿ. ವಿ. ದಿವೇಕರರನ್ನು ಬಂಧಿಸಲಾಗಿದೆ. ಇನ್ನಿತರ ಪ್ರಮುಖ ಕಾರ್ಯಕರ್ತರಾದ ಎಸ್. ಕೆ. ಮಾಯದೇವ ಮತ್ತು ಟಿ. ಜಿ. ಪರಡುರೆಯವರನ್ನು ಬಂಧಿಸಿ ಅವರ ಮನೆಯನ್ನು ಶೋಧಿಸಲಾಗಿ ಕೆಲ ಆಕ್ಷೇಪಾರ್ಹ ಸಾಹಿತ್ಯ ಸಿಕ್ಕಿದೆಯಂತೆ ಅದರಂತೆ ಎ. ಕೆ. ಶಿರೂರ, ಎಸ್. ಡಿ. ಬಾಂಡ ಮತ್ತು ಡಿ. ಡಿ. ಬಾಂಡ ಇವರ ಮನೆಗಳಲ್ಲಿ ಖಂಜಿರು ದೊರಕಿದ್ದರಿಂದ ಅವರನ್ನೂ ಬಂಧಿಸಲಾಗಿದೆ. ಎಸ್. ಎನ್. ಟಕ್ರೆ, ಜಿ. ಆರ್. ವಾಡದೇಕರ, ಬಿ. ಎಸ್. ಗಣವುಖಿ ಇವರೂ ಬಂಧಿತರಾಗಿದ್ದಾರೆ. ಜಿ. ಎನ್. ಹೆಗಡೆ ಎಂಬವರಲ್ಲಿ ಒಂದು ಚಲಕತ್ತು ದೊರಕಿದ್ದು ಪೋಲೀಸರು ಅದನ್ನು ವಶಪಡಿಸಿಕೊಂಡು ಅವರನ್ನೂ ಒಯ್ದಿದ್ದಾರೆ.

ಧಾರವಾಡದಲ್ಲಿ

ಧಾರವಾಡ ಪೋಲೀಸರು ತಾ ೫ ಕ್ಕೆ ಇಲ್ಲಿಯ ಆರ್. ಎಸ್. ಎಸ್. ಕಾರ್ಯಕರ್ತರ ಮನೆಗಳನ್ನು ಶೋಧಿಸಿ ಅವರನ್ನು ಬಂಧಿಸಿದರು ಕರ್ನಾಟಕ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಎಲ್. ಎಂ. ಟೇಂಬೆ, ಶ್ರೀ ಎಸ್. ಡಿ. ಕಾಪೂರಕರ, ಶ್ರೀ ಸಿ. ಜಿ. ನೇರ್ಲೇಕರರನ್ನೂ ವಕೀಲರಾದ ಶ್ರೀ ಟಿ. ಎಲ್. ಗಾಡಕರ ಮತ್ತು ಶ್ರೀ ಕೆ. ಎಲ್ ಗಾಡಕರರನ್ನೂ ವ್ಯಾಪಾರಸ್ಥರಾದ ಶ್ರೀ ಎಸ್. ಜಿ ಟಿಕಾರೆ, ಶ್ರೀ ಎಸ್. ಜಿ. ಜಾಧವ, ಶ್ರೀ ಎಸ್. ಎ. ಕರಂದೀಕರ, ಶ್ರೀ ಎ. ವಿ. ಉತ್ತರಕರ ಮೊದಲಾದವರನ್ನು ಬಂಧಿಸಿದ್ದಾರೆ.

ಸಂಪಾದಕೀಯ ಟೀಕೆಟಿಪ್ಪಣಿಗಳು

[೫ನೆಯ ಪುಟದಿಂದ]

ವಹಿಸಬೇಕು. ಹೀಗೆ ಪ್ರಯತ್ನಿಸಿದ್ದಾದರೆ ಈಗ ಎಲ್ಲೆಲ್ಲಿಯೂ ಉಂಟಾದ ಬಟ್ಟೆಯ ಕೊರತೆ ಹಿಂಗುವದು. ಬಟ್ಟೆಯ ಕಳ್ಳಪೇಟೆಯೂ ಮಾಯವಾಗುವದು. ಸಂಬಂಧಿಸಿದವರೆಲ್ಲ ಇತ್ತ ಗಮನಿಸಬೇಕೆಂದು ಸೂಚಿಸುತ್ತೇವೆ. ಬಿಡುಚಿ ಎಣ್ಣೆಯ ಮೇಲಿನ ನಿಯಂತ್ರಣವನ್ನೂ ತೆಗೆಯಲಾಗಿದೆ. ಆದರೆ ಸದ್ಯಕ್ಕೆ ಎಣ್ಣೆ ಎಲ್ಲಿಯೂ ಸಂಗ್ರಹದಲ್ಲಿ ಇಲ್ಲದ್ದರಿಂದ ಯಾರಿಗೂ ಸಿಕ್ಕದಂತಾಗಿದೆ. ಸರಕಾರದವರು ಇತ್ತ ಗಮನಿಸಿ ಎಣ್ಣೆ ವ್ಯಾಪಾರಿಗಳಿಗೆ ಅದು ಬೇಗ ದೊರೆವಂತೆ ನೋಡಿಕೊಳ್ಳಬೇಕು. ವ್ಯಾಪಾರಸ್ಥರಿಂದರೂ ಎಣ್ಣೆಯನ್ನು ಇಟ್ಟುಕೊಂಡು ಇಲ್ಲವೆಂದು ಹೇಳುವ ವೃತ್ತಿಯನ್ನು ತಾಳಬಾರದು. ಹಾಗೆ ಮಾಡಿದ್ದಾದರೆ ಸರಕಾರದವರು ಮತ್ತೆ ನಿಯಂತ್ರಣವನ್ನು ಹಾಕುವ ಪ್ರಸಂಗ ಬರಬಹುದು. ಎಣ್ಣೆ ವ್ಯಾಪಾರಿಗಳು ತಮ್ಮ ಕರ್ತವ್ಯದಲ್ಲಿ ತಪ್ಪಲಿಕ್ಕಿಲ್ಲೆಂದು ನಂಬುತ್ತೇವೆ.

ಗದಗಿನಲ್ಲಿ

ಇಲ್ಲಿಯೂ ಪೋಲೀಸ ಅಧಿಕಾರಿಗಳು ತಾ ೫ಕ್ಕೆ ಅನೇಕ ಆರ್. ಎಸ್. ಎಸ್. ಕಾರ್ಯಕರ್ತರ ಮನೆಗಳನ್ನು ಶೋಧಿಸಿದರು. ಆಕ್ಷೇಪಾರ್ಹ ಕಾಗದ ಪತ್ರಗಳು ... ಶ್ರೀ ಖರೆ, ಶ್ರೀ ... ಕುಲಕರ್ಣಿ ಶ್ರೀ ಚಿತ್ತರಂಜನ ಬಾಂದೋಳಿ, ಅಷ್ಟೇ, ಲಕ್ಷ್ಮೀ ... ... ಬಂಧಿಸಲಾಗಿದೆ. ಗಜೇಂದ್ರಗಡ ವಿಭಾಗದಲ್ಲಿಯೂ ... ಬಂಧನ ಕತ್ತು ... ...

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. ೬

ಬಂಗಾರ

ತಯಾರಿ	೧೦೬...[illegible]

ಬೆಳ್ಳಿ

ತಯಾರಿ	೧೬೪—೦—೦
ಟೇಂಬರ	೧೬೦—೮—೦
ಸಾವರಿನ	೬೮—೧೩—೦

ಅರಳೆ

ಮಾರ್ಚ	೫೩೪—೮—೦
ಮೇ	೫೩೯—೧೩—೦
ಜುಲೈ	೫೩೯—೦—[illegible]
ಸಪ್ಟಂಬರ	೫೪೫—೦—[illegible]
ಹೆಚ್ಚು	೫೩೫-೦-೦ — ೫೩೫-೮-೦
ಕಡಿಮೆ	೫೧೩-೦-೦ — ೫೧೩-೦-೦

ಮುಂಬಯಿ ಸ್ಟಾಕ್ ಪೇಟೆ ಮುಚ್ಚಿದೆ

ಸಾಂಗಲಿ ಪೇಟೆ

ತಾ. ೨೯

ಅರಿಷಣ ಹೇರಿಗೆ	೧೩೫-೧೩೪
ಹೊಸ ಮೆಣಸಿನಕಾಯಿ	೧೦೦-೧೩೫
ಬೆಲ್ಲ ಹೇರಿಗೆ	೩೫--೩೩
ಶೇಂಗಾ ಖಂಡಿ	೧೩೫--೧೩೭

ಶಿವಮೊಗ್ಗೆ

ತಾ. ೨೯

ಶಿವಮೊಗ್ಗೆ ಅಡಿಕೆಪೇಟೆಯ ಧಾರಣೆ ಮಣ ೧ ಕ್ಕೆ ಈರೀತಿ ಇದೆ—

ದೇಶಾವರ ನಂ. ೧ ಮಣ ೧ ಕ್ಕೆ			೩೫-೪೦
,,	,,	೩	೩೩-೩೫
,,	,,	೩	೩೮-೩೩
ರಾಜಾಅಲಿ...			—
[illegible]			—
ಬೆಟ್ಟೆ ಮಂತಿ			೧[illegible]
ಬೆಟ್ಟೆ			೧[illegible]

ನಿರ್ಯಾತ ... ಬೇಡಿಕೆ ಇದೆ ...

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ. ೧	[illegible]
	[illegible]
	[illegible]
ಗಳೇ ಜಯವಂತ ಹತ್ತಿ	[illegible]
ಜಿನ ಹಳೆದು	೩೪೫-೩೫೫
ಜಿನ ಹೊಸದು	೩೩೫-೩೩೫
ಕಬು ನೋಲ	೩೩೦-೩೩೦
	[illegible]
ಅಸಲಂಡ ...	[illegible]
ಹತ್ತಿ ಕಾಳು	[illegible]

... ಜಾಹಿರಾತು


... ಬೆಲೆ ಸಾಲ್ಕೆ ... ಆಣೆ

... ಪಿ. ಎಸ್. ನಾರಾಯಣರಾವ್

- ... ಚಿತ್ರಗಳು
- ... ಚರಿತ್ರೆ
- ...
- ...
- ...
- ... ಇತ್ಯಾದಿ.

... ವ್ಯಾಪಾರಿ ...

... ಲಿಮಿಟೆಡ್



-ಮಹಾತ್ಮರ ಕೊಲೆಯ ಪ್ರತಿಕ್ರಿಯೆಗಳು-

ಮುಂಬಯಿ

ಮುಂಬಯಿ ಆರ್ ಎಸ್ ಎಸ್ ಸಂಘದ ಚಾಲಕರು ತಾ. ೧೮ರಂದು ಒಂದು ಪ್ರಕಟನೆ ಹೊರಡಿಸಿ, ಮಹಾತ್ಮರ ಕೊಲೆಗಡಕನು ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಎಂದೂ ಯಾವ ವಿಧದಿಂದಲೂ ಸಂಬಂಧಿಸಿದವನಲ್ಲವೆಂದು ಪ್ರಸಿದ್ಧಿಸಿದ್ದಾರೆ. ಅಲ್ಲದೆ ತಾವು ಈಗಾಗಲೇ ಮಹಾತ್ಮರ ಮೇಲಾದ ಈ ಹೇಡಿತನದ ಹಲ್ಲೆಯನ್ನು ನಿಷೇಧಿಸಿದ್ದು ತಮ್ಮ ಕೇಂದ್ರಗಳನ್ನು ೧೩ ದಿವಸ ಮುಚ್ಚಿ ರಾಷ್ಟ್ರೀಯ ಸೂತಕ ಆಚರಿಸಲು ನಿರ್ಧರಿಸಿರುವ ಬಾಗೆಯೂ ಅವರು ಉಲ್ಲೇಖಿಸಿದ್ದಾರೆ.

ಅಹಮದಾಬಾದದ 'ನವಜೀವನ' ಕಚೇರಿಯವರು ಬೇಗ ಮಹಾತ್ಮರ "ದಿಲ್ಲಿ ದಿನಚರಿ" ಪ್ರಸಿದ್ಧಿಸಲಿದ್ದಾರೆ. ದಿಲ್ಲಿಯಲ್ಲಿಯ ಮಹಾತ್ಮರ ಪ್ರಾರ್ಥನೋತ್ತರ ಭಾಷಣಗಳನ್ನು ಅದರಲ್ಲಿ ಕೊಡಲಾಗುವದು. ಈ ಪುಸ್ತಕವನ್ನು ಇಂಗ್ಲೀಷ, ಗುಜರಾತಿ ಮತ್ತು ಹಿಂದುಸ್ತಾನಿಯಲ್ಲಿ ಪ್ರಸಿದ್ಧಿಸಲಾಗುವದು.

ಗುಜರಾತದ ಪ್ರಾಂತಿಕ ಹಿಂದುಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ. ನಟವರಲಾಲ ದೇಸಾಯಿ ಅವರು ಮಹಾತ್ಮರ ಕೊಲೆಯ ನಿಷೇಧಕ್ಕೆಂದು ತಮ್ಮ ಸದಸ್ಯತ್ವಕ್ಕೂ ಕೆಲಸಕ್ಕೂ ರಾಜೀನಾಮೆ ಕೊಟ್ಟು ಹಿಂದುಗಳೆಲ್ಲ ಕಾಂಗ್ರೆಸ್ಸಿನಲ್ಲಿ ಸೇರಬೇಕೆಂದು ಹೇಳಿದ್ದಾರೆ.

ಅಹಮದಾಬಾದದಲ್ಲಿ ಹಿಂದು ಮಹಾಸಭೆಯ ೫ ಕಾರ್ಯಕರ್ತರು ಸಾರ್ವಜನಿಕ ಸಂರಕ್ಷಿತತೆ ಕಾಯದೆ ಅನ್ವಯ ಬಂಧಿಸಲ್ಪಟ್ಟಿದ್ದಾರೆ.

ಬಾರಾಮತಿ, ಪಾಲಚಂದನಗರ, ಅಹಮ್ಮದನಗರ, ಸಾತಾರಾ, ಕೊಲ್ಹಾಪುರ, ಮೊದಲಾದಲ್ಲಿ ಲೂಟಿ ಕೊಳ್ಳಿ ನಡೆದ ವರದಿಗಳು ಬಂದಿವೆ. ಸಾತಾರೆಯಲ್ಲಿ ಕರ್ಫ್ಯೂ ಸಾರಲಾಗಿದೆ.

ಕೊಲೆಪಾತಕಿ, ಗೋಡಸೆಯ ತಮ್ಮನನ್ನು ಬಂಧಿಸಲಾಗಿತ್ತು. ಈಗ ಅವನನ್ನು ಬಿಟ್ಟು ಬಿಡಲಾಗಿದೆ.

ಮುಂಬಯಿಯ ಹಿಂದೂ ಮಹಾಸಭೆಯ ಕಾರ್ಯಾಧಿಕಾರಿಗಳಾದ ಶ್ರೀ. ಉಮೇಶ ಶಿರಾಳಿಯವರು ಮಹಾತ್ಮರ ಕೊಲೆಮಾಡಿದ ಪಾತಕಿಯು ಮಹಾಸಭೆಗೆ ಸಂಬಂಧಿಸಿದವನೆಂದು ತಿಳಿದು ಹಿಂದೂ ಮಹಾಸಭೆಗೆ ರಾಜೀನಾಮೆ ಕೊಟ್ಟಿದ್ದಾರೆ.

ಮುಂಬಯಿ ಗ್ರ್ಯಾಂಟ ರೋಡ ಭಾಗದಲ್ಲಿ ಕೆಲವು ಅಂಗಡಿಗಳು ಲೂಟಿ ಆಗಿರುವವಲ್ಲದೆ ಆರ್. ಎಸ್. ಎಸ್. ಕಚೇರಿಯ ಸಾಮಾನುಗಳನ್ನು ಅಗ್ನಿಗೆ ಅರ್ಪಿಸಲಾಯ್ತು.

ಡಾ. ಪರಾಂಜಪೆ ಮತ್ತು ಶ್ರೀ. ಗೋಳವಲಕರರು ಬಂಧಿಸಲ್ಪಟ್ಟಿರುವರು.

ಮದ್ರಾಸ

ಮುಸಲ್ಮಾನರು ಶೀಖರ ವೇಷ ಧರಿಸಿ ಪಂಡಿತ ನೆಹರೂರವರ ಕೊಲೆ ಮಾಡಲು ಯತ್ನಿಸಿದರೆಂದು ಕೆಲ ತಮಿಳು ಪತ್ರಿಕೆಗಳಲ್ಲಿ ಪ್ರಕಟವಾದುದನ್ನು ನೋಡಿ ತಿರುಪುನ್ನಿ ಕಂದದಂ ಎಂಬಲ್ಲಿ ಒಬ್ಬನು ಇರಿಯಲ್ಪಟ್ಟನು. ೩೯ ಮನೆಗಳು ಸುಟ್ಟವು ಹಾಗೂ ೨೭ ಅಂಗಡಿಗಳು ಮನೆಗಳು ಸುಲಿಗೆಗೆ ಒಳಗಾದವು. ಸುಮಾರು ೨ ಲಕ್ಷ ರೂ. ಗಳ ಸುಲಿಗೆಯಾಗಿದ್ದು ೬ ಸಾವಿರ ರೂ. ಗಳಷ್ಟು ಮಾಲು ದೊರೆತಿದೆ ಎಂಬುದಾಗಿ ಸರಕಾರೀ ಪ್ರಕಟನೆ ಹೊರಟಿದೆ.

ಮಹಾತ್ಮರ ಗೌರವಾರ್ಥವಾಗಿ ಮದ್ರಾಸ ಮತ್ತು ಮದ್ರಾಸ ಪ್ರಾಂತದಲ್ಲಿಯ ಎಲ್ಲ ಮದ್ಯದ ಅಂಗಡಿಗಳನ್ನು ಮದ್ರಾಸ ಸರಕಾರವು ೨ನೇ ದಿನಾಂಕ ಮುಚ್ಚಿರಿಸಲು ಆಜ್ಞೆ ವಿಧಿಸಿತ್ತು.

ಬೆಜವಾಡದಲ್ಲಿ ಕಾಂಗ್ರೆಸ್ಸಿಗರು ಆರ್ ಎಸ್ ಎಸ್‌ನವರ ಮೇಲೆ ಕಲ್ಲು ತೂರಿದ್ದರಿಂದ ಉಭಯತರಲ್ಲಿ ತಿಕ್ಕಾಟವಾಗಿ ೧೨ ಜನ ಗಾಯಗೊಂಡಿದ್ದಾರೆ. ಪೋಲೀಸರು ಈ ಬಗ್ಗೆ ೫ ಜನರನ್ನು ಬಂಧಿಸಿದ್ದಾರೆ.

ಮಧ್ಯಪ್ರಾಂತ

ನಾಗಪುರದ ಹಿಂದೂ ಮಹಾಸಭೆಯ ಪ್ರಮುಖರ ಮನೆಯ ಮುಂದೆ ಮತ್ತು ಆರ್. ಎಸ್. ಎಸ್. ಕಚೇರಿಯ ಮುಂದೆ ಅನೇಕ ಜನರು ಗುಂಪು ಗೂಡಿದ್ದರಿಂದ ಪೋಲೀಸರು ಊರಲ್ಲೆಲ್ಲ ಕಾವಲಿಟ್ಟಿದ್ದಾರೆ. ಆರ್. ಎಸ್. ಎಸ್. ದ ಕಚೇರಿಗಳನ್ನೆಲ್ಲ ಸೀಲು ಮಾಡಲಾಗಿದೆ. ಅದೇಶ ಎಂಬ ಹಿಂದೂ ಮಹಾ ಸಭೆಯ ವಾರಪತ್ರಿಕೆಯ ಕಚೇರಿಯಲ್ಲಿ ಜನ ನುಗ್ಗಿ ಕೆಲ ಆಸ್ತಿಗೆ ಹಾನಿಯನ್ನುಂಟು ಮಾಡಿದ್ದಾರೆ.

ಹೊಸದಿಲ್ಲಿ

ಕಾಂಗ್ರೆಸ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಒಂದು ಪ್ರಕಟನೆ ಹೊರಡಿಸಿ ಫೆಬ್ರುವರಿ ತಾ. ೧೨ನೇ ದಿನವನ್ನು ರಾಷ್ಟ್ರದ ಸೂತಕ ದಿನವೆಂದು ಆಚರಿಸತಕ್ಕದ್ದೆಂದೂ ಅಂದು ಮೆರವಣಿಗೆ ತೆಗೆದು ಸಂಜೆ ಜಾಹೀರ ಸಭೆ ಸೇರಿಸಿ ಮಹಾತ್ಮರ ಆತ್ಮಶಾಂತಿಗಾಗಿ ಪ್ರಾರ್ಥನೆ ಸಲ್ಲಿಸಬೇಕೆಂದೂ ನಂಬಿಗೆ ಇದ್ದವರು ಉಪವಾಸವನ್ನೂ ಸೂತ್ರಯಜ್ಞವನ್ನೂ ಕೈಕೊಳ್ಳತಕ್ಕದ್ದೆಂದೂ ಹೇಳಿದ್ದಾರೆ.

ತಾ. ೨ಕ್ಕೆ ದಿಲ್ಲಿಯಲ್ಲಿ ಸೇರಿದ ಪ್ರಚಂಡ ಸಭೆಯಲ್ಲಿ ಪಂ. ನೆಹರು, ಸರದಾರ ಪಟೇಲ, ಅಬುಲ ಕಲಂ ಅಜಾದ ಮೊದಲಾದವರು ಮಾತಾಡಿ ಜಾತೀಯತೆಯನ್ನು ಹತ್ತಿಕ್ಕಲಾಗುವದೆಂದು ಹೇಳಿದರು. ಶ್ರೀ. ಜಯಪ್ರಕಾಶರು ಎಲ್ಲ ಜಾತೀಯ ಸಂಸ್ಥೆಗಳ ಮೇಲೂ ನಿರ್ಬಂಧ ಹೇರಬೇಕೆಂದು ಸೂಚಿಸಿದರು.

ಹಿಂದೂ ಮಹಾಸಭೆ ಮತ್ತು ಆರ್. ಎಸ್. ಎಸ್‌ದ ಕತೆಗೆ ಒಲವಿದ್ದವರಿಗೆ ತಾವು ತಿಂದಿತಿನಸುಗಳನ್ನು ಪೂರೈಸುವದಿಲ್ಲವಾಗಿ ದಿಲ್ಲಿ ಹೊಟೆಲ ಕೆಲಸಗಾರರು ತಮ್ಮ ಸಭೆಯಲ್ಲಿ ನಿರ್ಧರಿಸಿದ್ದಾರೆ.

ಹೊಸದಿಲ್ಲಿಗೆ ಇನ್ನು ಮುಂದೆ ಗಾಂಧಿ ನಗರವೆಂದೂ ಕುತುಬಮಿನಾರ ಪ್ರದೇಶಕ್ಕೆ ಹಸ್ತಿನಾಪುರವೆಂದೂ ಹೊಸದಾಗಿ ಹೆಸರಿಡಬೇಕೆಂಬ ವಿಚಾರವು ಕೇಂದ್ರ ಶಾಸನ ಸಭೆಯವರ ತಲೆಯಲ್ಲಿ ಸುಳಿದಾಡಹತ್ತಿದೆ. ಈ ಬಗ್ಗೆ ಬೇಗ ಒಂದು ನಿರ್ಣಯ ಹೊರಬೀಳಬಹುದೆಂದು ನಿರೀಕ್ಷಿಸಲಾಗಿದೆ.

ಮಹಾತ್ಮಾ ಗಾಂಧಿಯವರ ಕೊಲೆಯ ಫಲವಾಗಿ ಜಾತೀಯ ಸಂಸ್ಥೆಗಳು ಮತ್ತು ಖಾಸಗಿ ಸೈನ್ಯಗಳು ಇರತಕ್ಕದ್ದಲ್ಲವೆಂದು ಭಾರತ ಸರಕಾರವು ಸ್ವೀಕರಿಸಿದ ಎರಡು ಗೊತ್ತುವಳಿಗಳನ್ನು ಹೇಗೆ ಕಾರ್ಯರೂಪಕ್ಕೆ ಇಳಿಸಬೇಕು. ಎಂಬ ಬಗ್ಗೆ ತಾ. ೩ಕ್ಕೆ ಭಾರತ ಮಂತ್ರಿಮಂಡಳದ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು.

ಮಹಾತ್ಮರು ಮರಣೋನ್ಮುಖರಾದಾಗ ಅಲ್ಲಿದ್ದ ಜನ ನೀರಿಗಾಗಿ ತಡವರಿಸುತ್ತಿರಲು ಮೈಸೂರಿನ ಮಂತ್ರಿಗಳಾದ ಶ್ರೀ ದಾಸಪ್ಪನವರು ಕೂಡಲೇ ಮಹಾತ್ಮರ ನೀರಿನ ಬುಡ್ಡಿಯನ್ನು ತಂದು ಗಾಂಧೀಜಿಯ ತುಟಿಗಳಲ್ಲಿ ಎರಡು ಹನಿ ನೀರು ಬಿಟ್ಟರು. ಪ್ರಜ್ಞೆ ಇಲ್ಲದಿದ್ದರೂ ಮಹಾತ್ಮರು ಗುಟುಕರಿಸಿದರು. ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಅವರ ಪ್ರಾಣ ಪಕ್ಷಿ ಹಾರಿಹೋಯಿತು. ದಾಸಪ್ಪನವರು ಮಹಾತ್ಮರ ಬಳಿಗೇ ಬೆಳೆದು ದೊಡ್ಡವರಾಗಿ ಇಂದಿನ ಪದವಿಗೆ ಏರಿದ್ದಾರೆ.

ಯುಕ್ತಪ್ರಾಂತ

ಯುಕ್ತಪ್ರಾಂತದ ಹಿಂದು ಮಹಾ ಸಭೆಯ ಅಧ್ಯಕ್ಷರಾದ ಮಹಂತ ದಿಗ್ವಿಜಯ ನಾಥರನ್ನು ತಾ ೨ ಕ್ಕೆ ದಿಲ್ಲಿ ಪೋಲೀಸರ ಸೂಚನೆಯ ಮೇರೆಗೆ ಗೋರಖನಾಥ ದೇವಾಲಯದಲ್ಲಿ ಬಂಧಿಸಿ ಅವರನ್ನು ದಿಲ್ಲಿಗೆ ಕರೆದೊಯ್ಯಲಾಯಿತು.

ಅಲಹಾಬಾದ ಕ್ಷತ್ರಿಯ ಸಭೆಯ ಕಾರ್ಯದರ್ಶಿಗಳು, ಮಹಾತ್ಮರ ಕೊಲೆಯಾದ ಶುಕ್ರವಾರವನ್ನು ರವಿವಾರದ ಬದಲು ರಜೆಯ ದಿನವಾಗಿ ಹಿಂದುಸ್ತಾನದಲ್ಲೆಲ್ಲ ಆಚರಿಸಬೇಕೆಂದು ಸೂಚಿಸಿದ್ದಾರೆ.

ಕಾನಪುರದಲ್ಲಿ ತಾ. ೨ ರ ದಿನ ಪರಿಸ್ಥಿತಿ ಸುಧಾರಿಸಿತ್ತು. ಆರ್. ಎಸ್. ಎಸ್. ಹಾಗೂ ಹಿಂದೂ ಮಹಾಸಭೆಯವರನ್ನು ಬಂಧಿಸುವದು ನಡೆದಿದ್ದು ತಾ ೨ ಕ್ಕೆ ನರೇಂದ್ರ ಜಿತಸಿಂಗ ಹಾಗೂ ಮುನಿಸಿಪಾಲಟಿಯ ಇಬ್ಬರು ಸಭಾಸದರು ಬಂಧಿತರಾದರು.

ಬನಾರಸದ ಹಿಂದು ಮಹಾಸಭೆಯ ಪ್ರಮುಖ ಕಾರ್ಯಕರ್ತರಾದ ಡಾ ಭಗವಾನದಾಸ ಅರೋರಾ ಅವರು ಹಿಂದು ಮಹಾ ಸಭೆಗೆ ರಾಜೀನಾಮೆ ಕೊಟ್ಟು ಮಹಾತ್ಮರು ಕೈಕೊಂಡ ಕಾರ್ಯವನ್ನು ಪೂರ್ತಿಗೊಳಿಸಲು ಪ್ರತಿಜ್ಞೆ ಮಾಡಿದ್ದಾರೆ.

ಪಶ್ಚಿಮ ಬಂಗಾಲ

ಮಹಾತ್ಮರ ಕೊಲೆಗಡಕನ ಹೆಸರು ಗೊತ್ತಾಗುತ್ತಲೇ ಕಲಕತ್ತೆಯಲ್ಲಿ ಜನ ರೊಚ್ಚಿಗೆದ್ದು ಭವಾನಿಪುರದಲ್ಲಿರು ಡಾ. ಶಾಮ ಪ್ರಸಾದ ಮುಖರ್ಜಿಯವರ ಮನೆಯ ಮೇಲೆ ಕಲ್ಲೊಗೆಯತೊಡಗಿದರು. ಕೂಡಲೇ ಪೋಲೀಸರು ಜನರನ್ನು ಚದರಿಸಿದರು. ಕಾಂಗ್ರೆಸ ಕಾರ್ಯಕರ್ತರು ಹಿಂಸಾಚಾರದಲ್ಲಿ ತೊಡಗಕೂಡದೆಂದು ಜನಕ್ಕೆ ಬೋಧಿಸುತ್ತಿದ್ದಾರೆ. ಡಾ. ಶ್ಯಾಮಪ್ರಸಾದರ ಮನೆಯ ಸುತ್ತ ಸಶಸ್ತ್ರ ಪೋಲೀಸರ ಕಾವಲಿದೆ.

ಬಿಹಾರ

ಮಹಾತ್ಮರ ಕೊಲೆಯು ಹಿಂದು ಮಹಾಸಭೆಗೆ ಸಂಬಂಧಿಸಿದೆ ಎಂದು ತಿಳಿದು ಬಿಹಾರ ಹಿಂದು ಮಹಾ ಸಭೆಯ ಅಧ್ಯಕ್ಷರಾದ ಕುಮಾರ ಗಂಗಾನಂದ ಸಿಂಹರು ತಮ್ಮ ಅಧ್ಯಕ್ಷಪದಕ್ಕೂ ಅ. ಭಾ. ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿಯ ಸದಸ್ಯತ್ವಕ್ಕೂ ರಾಜೀನಾಮೆ ಕೊಟ್ಟಿದ್ದಾರೆ.

ಧಾರವಾಡ

ಹಾನಗಲ್ಲ ತಾಲೂಕ ಮಾದನಬೀಡ ಗ್ರಾಮದಲ್ಲಿ ಶ್ರೀ ಮಳೆಮಲ್ಲೇಶ್ವರ ಶೇತಕಿ ಸಂಘದ ವತಿಯಿಂದ ಶ್ರೀ ಬಸವೇಶ್ವರ ಮಹಾತ್ಮಾ ಗಾಂಧೀ ಚೌಕಿನಲ್ಲಿ ಸಭೆ ಸೇರಿ ಗಾಂಧೀಜಿಯವರ ನಿಧನದ ಬಗ್ಗೆ ದುಃಖ ಪ್ರದರ್ಶಿಸಲಾಯಿತು. ಅನೇಕರು ಮಾತಾಡಿ ಗಾಂಧೀಜಿಯವರ ಗುಣಗಾನ ಮಾಡಿದರು.

ಬೆಳಗಾವಿ

ಬೆಳಗಾವಿಯಲ್ಲಿ ೧ನೇ ತಾರೀಖು ಎಲ್ಲೆಲ್ಲಿಯೂ ಅಶಾಂತಿಯುಂಟಾಯಿತು. ಮುಂಜಾವಿನಿಂದ ಸಂಜೆಯವರೆಗೂ ಹೋಳೀ ದೃಶ್ಯವೆ ಕಾಣುತಿತ್ತು. ಕೆಲ ಹುಡುಗರು ಪೇಡೆ ಹಂಚಿದರೆಂಬ ಸುದ್ದಿಯಿಂದ ಗದ್ದಲ ಪ್ರಾರಂಭವಾಯಿತು ಡಾ. ಜಠಾರ, ಸಾತೆ ಮತ್ತು ಜಿಗಜಿನ್ನಿಯವರಿಗೆ ಸ್ವಲ್ಪ ಗಾಯಗಳಾದವು. ಈಗ ಪರಿಸ್ಥಿತಿ ಹಿಡಿತದಲ್ಲಿ ಬಂದಿದೆ.

ಬೆಳಗಾವಿಯ ಕವಲೂರಾಗಿರುವ ಕಣಬರಗಿಯಲ್ಲಿ ಅನಾಹುತ ಸಂಭವಿಸಬಹುದೆಂಬದಾಗಿ ಮೂರು ನಾಲ್ಕು ದಿನಗಳಿಂದ ಒಂದೇಸವನೆ ಸುದ್ದಿಗಳು ಬರುತ್ತಲಿದ್ದವು ೩ ನೇ ತಾರೀಖು ರಾತ್ರಿ ಶ್ರೀಧರಪಂತ ಕುಲಕರ್ಣಿಯವರ ಮನೆಗೆ ಅಲ್ಲಿ ಬೆಂಕಿ ಹಚ್ಚಲಾಗಿತ್ತು. ಅಧಿಕಾರಿಗಳು ಅಲ್ಲಿಗೆ ಹೋಗಿ ಎಲ್ಲಬಗೆಯ ಬಂದೋಬಸ್ತನ್ನಿಟ್ಟಿರುವರು.

ಬಿನಾಪೂರದಲ್ಲಿ ೨ ನೇ ತಾರೀಕಿನಂದು ಮುಂಜಾನೆ ೯ ಗಂಟೆಗೆ ಹಳ್ಳಿಗಳಿಂದ ಸಂಘಟಿತವಾದ ಹಾಗು ಪಿಸ್ತೂಲು ಬಂದೂಕು ಹತ್ಯಾರ ಬರ್ಚಿ ಮೊದಲಾದ ಎರಡುನೂರಕ್ಕೆ ಮೇಲ್ಪಟ್ಟು ಗುಂಡಾಜನರ ತಂಡ ಆವೇಶದಿಂದ ಒಳನುಗ್ಗಿತು. ನಿವೃತ್ತ ನ್ಯಾಯಾಧೀಶ ಶ್ರೀ ಲೋಕೂರ ನಾರಾಯಣರಾಯರ ಸುಂದರ ವಾಡೆಗೆ ಬೆಂಕಿ ಹಚ್ಚಿ ಅದನ್ನು ಭಸ್ಮ ಮಾಡಿದರು. ಸುಮಾರು ೧ ಲಕ್ಷ ರೂಪಾಯಿಗಳಷ್ಟು ಹಾನಿಯಾಗಿದೆ. ೨೪ಗಂಟೆಗಳ ವರೆಗೆ ಬೆಂಕಿಯು ಹಾಗೆಯೇ ಧಗಧಗಿಸುತ್ತಿತ್ತು.

ಕನ್ನಡ ಸಂಸ್ಥಾನ

ದಾವಣಗೆರೆಯಲ್ಲಿ ೨ ನೇ ತಾರೀಖು ಆರ್. ಎಸ್. ಎಸ್. ಹಾಗು ಸೇವಾದಲದವರಲ್ಲಿ ಸಣ್ಣ ಪ್ರಮಾಣದಲ್ಲಿ ತಿಕ್ಕಾಟ ನಡೆಯಿತು ಕೆಲವರು ಆರ್. ಎಸ್. ಎಸ್. ದವರ ಮನೆಗಳನ್ನು ಹೊಕ್ಕು ಕಾಗದಪತ್ರಗಳನ್ನು ವಶಪಡಿಸಿಕೊಂಡು ಹೋದರು. ಆರ್. ಎಸ್. ಎಸ್. ದಲ್ಲಿ ಸೇರುವದಿಲ್ಲೆಂದು ಅವರಿಂದ ಬರೆಯಿಸಿಕೊಂಡರೆಂದೂ ತಿಳಿಯುತ್ತದೆ.

ಉಲಸೂರಿನ, ನಿವಾಸಿಯಾದ ಅರುಲಿನಂಧನ್ ಎಂಬವರು ಮಹಾತ್ಮರ ಕೊಲೆಯ ಸುದ್ದಿಯನ್ನು ಕೇಳಿ ಮನೆಯಲ್ಲಿ ಕುಳಿತಲ್ಲಿಯೇ ಪ್ರಾಣ ಬಿಟ್ಟರೆಂದು ತಿಳಿಯುತ್ತದೆ.

ಮೈಸೂರ ಸಂಸ್ಥಾನದ ಹಿಂದೂ ಮಹಾಸಭೆಯ ಬೆಂಗಳೂರಿನಲ್ಲಿಯ ಮನೆಯನ್ನು ಹಾರಿಸಿಬಿಡುವ ಪ್ರಯತ್ನ ೧ ನೇ ತಾರೀಖು ರಾತ್ರಿ ನಡೆಯಿತು. ಒಂದು ದೇಶೀ ಬಾಂಬು ಅವರ ಹಿತ್ತಲದಲ್ಲಿ ಸ್ಫೋಟವಾಯಿತು.

ಬೆಂಗಳೂರು—ಮೈಸೂರು.

ಬೆಂಗಳೂರು ಕ್ಯಾಂಟೋನ್ಮೆಂಟಿನ ... ಭಾಗದಲ್ಲಿ ಒಂದು ... ಸ್ಫೋಟವಾಗಿ ಒಬ್ಬನು ಸತ್ತಿರುವನು ... ಪೋಲೀಸರು ... ದಸ್ತಗಿರಿ ಮಾಡಲಾಗಿದೆ.

ಮಹಾತ್ಮಾ ಗಾಂಧಿಯವರ ... ದಿನಗಳ ವರೆಗೆ ... ಪಾಲಿಸಲು ಮೈಸೂರ ಸರಕಾರವು ... ವಿಧಿಸಿದ್ದಾರೆ. ... ಸರಕಾರೀ ಸಮಾರಂಭಗಳು ... ದಿಲ್ಲ.

ಮೈಸೂರ ಹಿಂದುಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಜಿ ಎ ರಾಮಾಚಾರ್ಯ ಕಾರ್ಯಕರ್ತರಾದ ದೇವದಾಸ ಮತ್ತು ಆರ್ ಎಸ್ ಎಸ್ ದ ಕಾರ್ಯಕರ್ತರಾದ ಶ್ರೀ ವಾಸುದೇವಮೂರ್ತಿ ಇವರ ಮನೆಯನ್ನು ಪೋಲೀಸರು ದಾಳಿ ಮಾಡಿದರು. ಕೆಲ ಕಾಗದಪತ್ರಗಳನ್ನು ಜಪ್ತುಮಾಡಿಕೊಂಡು ಹೋಗಿರುವರು.

ಬೆಂಗಳೂರಿನಲ್ಲಿ ಹಿಂದು ಮುಸಲ್ಮಾನರೊಳಗೊಂಡು ಸುಮಾರು ಒಂದು ಲಕ್ಷ ಜನರು ೩ನೇ ತಾರೀಖು ದುಃಖಸೂಚಕ ಸಭೆಯಲ್ಲಿ ಸೇರಿದ್ದರು. ಮೈಸೂರ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ದುಃಖಸೂಚಕ ಗೊತ್ತುವಳಿ ಸ್ವೀಕೃತವಾಯಿತು.

ಬೆಂಗಳೂರಿನಲ್ಲಿ ಸುಮಾರು ೩೦ ಆರ್. ಎಸ್. ಎಸ್. ಕಾರ್ಯಕರ್ತರ ಮನೆಗಳನ್ನು ಪೋಲೀಸರು ಶೋಧ ಮಾಡಿ ಚೂರಿ ಮುಂತಾದ ಅನೇಕ ಶಸ್ತ್ರಾಸ್ತ್ರಗಳನ್ನು ಕೆಲ ಕಾಗದ ಪತ್ರಗಳನ್ನು ವಶಪಡಿಸಿಕೊಂಡು ಹೋದರು ಇನ್ನೂ ಅನೇಕ ಮನೆಗಳ ಶೋಧ ನಡೆಯುತಿದೆ. ಹಿಂದುಸ್ತಾನ ಸರಕಾರದವರು ಆರ್. ಎಸ್. ಎಸ್. ದ ಮೇಲೆ ಯಾವ ಬಗೆಯ ಕ್ರಮ ತೆಗೆದುಕೊಳ್ಳುವರೆಂಬುದನ್ನು ಮೈಸೂರ ಸರಕಾರ ನಿರೀಕ್ಷಿಸುತ್ತಲಿದೆ.

ಕೊಲ್ಹಾಪುರದಲ್ಲಿ ೩೦ ಕ್ಕೆ ಕೆಲವು ಕಟ್ಟಡ ಹಾಗು ಆಸ್ತಿಗಳಿಗೆ ಬೆಂಕಿ ಹಚ್ಚಲ್ಪಟ್ಟು ಲಕ್ಷಗಟ್ಟಲೆ ರೂಪಾಯಿ ಹಾನಿಯಾಗಿದೆ. ಪತ್ರಿಕೆಗಳ ಮೇಲೆ ಪೂರ್ವ ಪರಿಶೀಲನೆಯ ಹುಕುಮು ಜಾರಿ ಮಾಡಲಾಗಿದೆ. ಹಿಂದೂ ಮಹಾಸಭೆಯ ಧುರೀಣರಾದ ಡಾ. ದಾಪಟರ ಮನೆಯ ಮೇಲೆ ದಾಳಿ ಮಾಡಲು ಪ್ರಯತ್ನಿಸಿದ ಜನಜಂಗುಳಿಯ ಮೇಲೆ ಪೋಲೀಸರು ಗೋಳಿಬಾರು ಮಾಡಬೇಕಾಯಿತು, ಕೆಲವರಿಗೆ ಗಾಯಗಳಾಗಿವೆ. ೪೦ ಅಂಗಡಿಗಳು ಸುಟ್ಟವು.

ಮಿರಜೆಯಲ್ಲಿ ೧ ಮತ್ತು ೨ ನೇ ತಾರೀಖು ಭಯಂಕರ ಸ್ವರೂಪದ ಗಲಭೆಗಳು ನಡೆದವು. ಸುಲಿಗೆ ಕೊಳ್ಳಿ ಮೊದಲಾದವು ಅನಿರ್ಬಂಧವಾಗಿ ಸಾಗಿದವು. ಬೆಂಕಿಯಿಂದ ಇಡೀ ಬಜಾರ ಉರಿಯುತಿದೆ. ಸರಾಫಗಲ್ಲಿ ಪೂರ್ಣ ಸುಟ್ಟುಹೋಗಿದೆ. ಪ್ರಮುಖ ನಾಗರಿಕರ ಮನೆಗಳೂ ಅಗ್ನಿಗಾಹುತಿಯಾಗಿವೆ.

ಸಾಂಗಲಿಯಲ್ಲಿ ಹಿಂದೂ ಮಹಾಸಭೆಯ ಪ್ರಮುಖರ ಮನೆಗಳನ್ನು, ಸಾಂಗಲಿ ಗಣಪತಿ ಮಿಲ್ಲು, ಜಿಲ್ಲಾ ಮ್ಯಾಜಿಸ್ಟ್ರೇಟರ ಮನಾನ ಮೊದಲಾದವುಗಳಿಗೆ ಬೆಂಕಿ ಇಟ್ಟರು. ಸರಾಫಗಲ್ಲಿಯಲ್ಲಿಯ ಅಂಗಡಿಗಳಿಗೂ ಬೆಂಕಿ ಇಡಲಾಯಿತು. ಒಟ್ಟು ೫೦ ಕಟ್ಟಡಗಳಿಗೆ ಬೆಂಕಿ ಬಿದ್ದಿದೆ. ಲಕ್ಷಗಟ್ಟಲೆ ರೂಪಾಯಿ ಹಾನಿಯಾಗಿದೆ.

ಜಗದಮೂಲೆ ಮೂಲೆಯಿಂದ ದುಃಖೋದ್ಗಾರಗಳು

ಅನೂನುಶವಾದ ಕೊಲೆಯ ಮೂಲಕ ಈ ಮಹಾವಿಭೂತಿಯು ಅಸ್ತಂಗತವಾದ ವಾರ್ತೆಯು, ಹಬ್ಬುತ್ತಲೇ ಜಗದ ಮೂಲೆ ಮೂಲೆಯಿಂದ ದುಃಖೋದ್ಗಾರಗಳು ಹೊರಹೊರಟವು. ಹೀಗೆ ದುಃಖ ವ್ಯಕ್ತಪಡಿಸಿದವರಲ್ಲಿ ರಾಜ ಮಹಾರಾಜರಿದ್ದಾರೆ. ದೇಶ ವಿದೇಶಗಳ ಮಂತ್ರಿಗಳು ರಾಜಕಾರಣಿಗಳು ತತ್ವಜ್ಞಾನಿಗಳು ಮುಂದಾಳುಗಳು ಎಲ್ಲ ಬಗೆಯವರೂ ಇದ್ದಾರೆ.

ಜಾರ್ಜ ಬಾದಶಹರ ದುಃಖಾಶ್ರು

ಮಹಾತ್ಮರ ಮರಣ ವಾರ್ತೆಯನ್ನು ಕೇಳುತ್ತಲೇ ಜಾರ್ಜ ಬಾದಶಹರು ಲಾರ್ಡ ಮೌಂಟಬ್ಯಾಟನ್ನರ ಮುಖಾಂತರ ಹೀಗೆ ಸಂದೇಶ ಕಳುಹಿಸ್ಸಾರೆ:—

ಗಾಂಧಿಯವರ ಮರಣ ವಾರ್ತೆಯಿಂದ ನಾನೂ ನನ್ನ ರಾಣಿಯೂ ಅತ್ಯಂತ ಸ್ತಂಭಿತರಾಗಿದ್ದೇವೆ. ಇವರ ಮರಣದಿಂದ ಮಾನವ ಕುಲಕ್ಕೂ ಹಿಂದೂಸ್ತಾನದ ಜನತೆಗೂ ತುಂಬಲಾಗದ ಹಾನಿಯಾಗಿದೆ. ಈ ಬಗ್ಗೆ ನಮಗಾದ ದುಃಖಾತಿರೇಕವನ್ನು ಭಾರತದ ಜನತೆಗೆ ದಯವಿಟ್ಟು ತಿಳಿಸಬೇಕು.

ಬ್ರಿಟನದ ಮುಖ್ಯ ಪ್ರಧಾನ ಆ್ಯಟ್ಲೆಯವರ ಉದ್ಗಾರ

ಗಾಂಧೀಜಿಯ ಮರಣ ವಾರ್ತೆಯನ್ನು ಕೇಳಿ ಬಾದಶಹರ ಸರಕಾರಕ್ಕೆ ವಜ್ರಾಘಾತವಾದಂತಾಯಿತು. ಗಾಂಧಿಯವರಷ್ಟು ಅವರ ದೇಶದ ಇತಿಹಾಸದಲ್ಲಿ ಇನ್ನಾರೂ ಹೆಚ್ಚಿನ ಪಾತ್ರ ವಹಿಸಿರುವದಿಲ್ಲ.

ಅವರು ಜೀವನದುದ್ದಕ್ಕೂ ಶಾಂತಿಗಾಗಿ ಹೆಣಗಿದರು. ಹಿಂಸಾಚಾರವನ್ನು ತೀವ್ರವಾಗಿ ಖಂಡಿಸಿದರು. ಜಗತ್ತಿನ ಎಲ್ಲ ದೇಶಗಳಲ್ಲಿಯೂ ಇವರ ಮರಣದಿಂದ ಎಲ್ಲ ಬಗೆಯ ಜನರಿಗೆ ಅತೀವ ದುಃಖವಾಗಿದೆ.

ಇಂದಿನ ಪ್ರಕ್ಷುಬ್ಧವಾದ ಮತ್ತು ದಾರಿಗಾಣದ ದಿನಮಾನಗಳಲ್ಲಿ ಗಾಂಧಿಯವರು ತಮ್ಮ ಇರವಿನಿಂದ ನೈತಿಕ ಮತ್ತು ಆಧ್ಯಾತ್ಮಿಕ ಜ್ವಲಂತ ಹಾಗೂ ಸ್ಫೂರ್ತಿಪ್ರದ ಉದಾಹರಣೆಯಾಗಿದ್ದರು. ಹಿಂದುಸ್ತಾನದ ಈ ಅಪಾರ ದುಃಖದ ಗಂಡಾಂತರದಲ್ಲಿ ಇಂಗ್ಲಂಡವೂ ಸಹ ಭಾಗಿಯಾಗಿದೆ.

ಅವರು ತಮ್ಮ ಜೀವನದ ಕೊನೆಕೊನೆಗೆ ಜಾತೀಯ ವೈರವನ್ನು ಶಾಂತ ಉಪಾಯಗಳಿಂದ ಒಳ್ಳೆಯ ಯಶಸ್ವಿಯಾಗಿ ತೊಡೆದು ಹಾಕಿದರು. ಮತ್ತು ಭಾರತೀಯರಲ್ಲಿ ಸಾರ್ವತ್ರಿಕ ಸಹಕಾರ ಭಾವವನ್ನು ಜಾಗೃತಗೊಳಿಸಿದರು.

ಅವರು ಹಾಕಿಕೊಟ್ಟ ದಾರಿಯಲ್ಲಿಯೇ ಹೆಜ್ಜೆ ಹಾಕಬೇಕೆಂದು ಬ್ರಿಟಿಶ ಸರಕಾರದ ತೀವ್ರ ಆಶೆಯಿದೆ. ಮತ್ತು ಅವರ ನೈತಿಕ ಪ್ರಭಾವವು ಜನರನ್ನು ಇನ್ನು ಮುಂದೆಯೂ ಶಾಂತಿಯ ದಾರಿಯಲ್ಲಿ ನಡೆಯಹಚ್ಚುವದೆಂದು ನಂಬಿದ್ದೇನೆ.

ಸ್ಮಟ್ಸರ ದುಃಖೋದ್ಗಾರ

“ಗಾಂಧೀಜಿಯವರ ಕೊಲೆಯ ಸಮಾಚಾರ ಕೇಳಿ ನನಗೆ ಅತೀವ ದುಃಖವಾಯಿತು. ನನ್ನ ದುಃಖದಲ್ಲಿ ಜಗತ್ತಿನ ಇತರ ಭಾಗದವರೆಲ್ಲ ಭಾಗಿಗಳಾಗುವರೆಂದು ನಂಬಿರುವೆ.” ಎಂದು ದಕ್ಷಿಣ ಆಫ್ರಿಕೆಯ ಮುಖ್ಯ ಮಂತ್ರಿ ಸ್ಮಟ್ಸರು ಉದ್ಗಾರ ತೆಗೆದರು.

ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು

ಅಧ್ಯಕ್ಷ ಟ್ರೂಮನ್ನರಿಗೆ ಎದ್ದ ಕೂಡಲೆ ಗಾಂಧೀಜಿಯ ಕೊಲೆಯ ಸುದ್ದಿ ತಿಳಿಯಿತು. ಅವರು ಎಲ್ಲ ಘಟನೆಗಳನ್ನು ಆಗಿಂದಾಗ ತಿಳಿಸಬೇಕೆಂದು ಆಜ್ಞೆ ವಿಧಿಸಿದರು.

“ಗಾಂಧೀಯವರ ಜೀವನ ಹಾಗು ಅವರು ಸಾಧಿಸಿದ ಕಾರ್ಯಗಳೇ ಅವರಿಗೆ ಸ್ಮಾರಕದಂತಿವೆ” ಎಂದು ಉದ್ಗಾರ ತೆಗೆದರು.

ಫ್ರೆಂಚ ಶಾಸನ ಸಭೆಯ ಶ್ರದ್ಧಾಂಜಲಿ

ಫ್ರೆಂಚ ರಾಷ್ಟ್ರೀಯ ಶಾಸನ ಸಭೆಯ ರಾಷ್ಟ್ರೀಯ ಅಧ್ಯಕ್ಷರಾದ ಎಂ. ಹೆರ್ರಿಯೇ ಯವರು ಮಹಾತ್ಮರ ಮರಣ ವಾರ್ತೆಯನ್ನು ಸಭೆಗೆ ಅರುಹಲು ಸಭೆಯು ಕ್ಷಣಹೊತ್ತು ಸ್ತಗಿತವಾಗಿ ಎಲ್ಲರೂ ಎದ್ದು ನಿಂತು ಮೌನದಿಂದ ತಮ್ಮ ದುಃಖವನ್ನು ಸೂಚಿಸಿದರು. “ಗಾಂಧಿಯವರು ಪ್ರೇಮವೇ ವೈರಕ್ಕಿಂತ ಬಲಶಾಲಿ ಎಂಬುದನ್ನು ಜನಕ್ಕೆ ಕಲಿಸಿಕೊಟ್ಟ ತತ್ವವೇತ್ತರು ಮತ್ತು ಶ್ರೇಷ್ಠ ದೇಶಭಕ್ತರು” ಎಂದು ಉದ್ಗಾರ ತೆಗೆದು ಶಾಸನ ಸಭೆಯ ಮುಖಾಂತರ ಸಹಾನುಭೂತಿಯ ಸಂದೇಶ ಕಳುಹಿದರು. ಅಲ್ಲದೆ ಅವರು ಫ್ರಾನ್ಸದ ಮುಖ್ಯ ಮಂತ್ರಿಗಳಿಂದ ಅಖಂಡ ಫ್ರಾನ್ಸ ರಾಷ್ಟ್ರದ ಪರವಾಗಿ ಮಂಡಿಸಲ್ಪಟ್ಟ ದುಃಖ ಸೂಚಕ ಗೊತ್ತುವಳಿಯನ್ನು ಓದಿ ಹೇಳಿದರು.

ಫ್ರಾನ್ಸದ ಮುಖ್ಯ ಮಂತ್ರಿ ಶುಮನ್ನರ ಗೊತ್ತುವಳಿ

“ಮಹಾತ್ಮಾ ಗಾಂಧಿಯವರ ಈ ಮರಣದ ಕಾರಣಕ್ಕಾಗಿ ಫ್ರೆಂಚ ರಾಷ್ಟ್ರೀಯ ಶಾಸನಸಭೆಯು ಭಾರತ ಸರಕಾರಕ್ಕೂ ಅಲ್ಲಿಯ ಜನತೆಗೂ ತನ್ನ ಆಳವಾದ ದುಃಖವನ್ನು ನಿವೇದಿಸುತ್ತದೆ.

ಮಹಾತ್ಮಾ ಗಾಂಧಿಯವರು ಫ್ರಾನ್ಸದ ಮಿತ್ರರಾಗಿದ್ದರು, ಶ್ರೇಷ್ಠ ದೇಶಭಕ್ತರಾಗಿದ್ದರು ಮತ್ತು ಪ್ರೇಮದ ಮೂಲ್ಯವನ್ನು ತಿಳಿಸಿಕೊಟ್ಟ ಅಮೋಘ ತತ್ವವೇತ್ತರಾಗಿದ್ದರು.”

ಫ್ರಾನ್ಸದ ವಿದೇಶ ಮಂತ್ರಿ ಜಾರ್ಜ ಬಿಡಾಲ್ಟ

ಗಾಂಧಿಯವರ ಮರಣ ವಾರ್ತೆಯು ನಮ್ಮ ಕಾಲದ ಅತೀವ ದುಃಖದಾಯಕ ಸಮಾಚಾರಗಳಲ್ಲಿ ಒಂದು. ತ್ಯಾಗವೂ ಸದ್ಭಾವಗಳೂ ಮತ್ಸರವನ್ನು ಸುಲಭವಾಗಿ ಜಯಿಸಬಲ್ಲವೆಂದು ತೋರಿಸಿಕೊಟ್ಟ ಇವರು ಓರ್ವ ಕಲಿತಿರುಕನ ಹೀನ ಕೃತ್ಯಕ್ಕೆ ತುತ್ತಾಗಿ ನಮ್ಮನ್ನು ತೊರೆದು ಹೋದರು. ಇದರಿಂದ ಭಾರತ ಜನಾಂಗಕ್ಕೆಷ್ಟೇ ದುಃಖವಾಗಿರದೆ ವಿಶ್ವ ಬಂಧುತ್ವವನ್ನು ಪುರಸ್ಕರಿಸುವವರಿಗೆಲ್ಲ ಅತೀವ ವೇದನೆಯಾಗಿದೆ. ಹಿಂಸೆಯನ್ನು ನಿರ್ನಾಮಗೊಳಿಸಲುದ್ಯುಕ್ತರಾದ ಈ ಅಹಿಂಸಾವಾದಿ ಹಿಂಸೆಗೆ ಗುರಿಯಾದರು. ಫ್ರಾನ್ಸ ದೇಶವು ಇಂದಿನ ರಾತ್ರಿ ಗಾಂಧಿಯವರ ಶವ ಫಲಕದ ಹತ್ತಿರವೇ ನಿಂತುಕೊಂಡಿದೆ. ಅವರ ತ್ಯಾಗವು ಅವರ ಜೀವನ ಕಾರ್ಯಕ್ಕೆ ಕಳಸವಾಗಿದೆ.

ಮೆಕಾರ್ಥರರ ಉದ್ಗಾರ

ಜಪಾನದಲ್ಲಿ ಆಕ್ರಮಕ ಸೈನ್ಯದ ಸರ್ವಸೇನಾಪತಿಯಾದ ಜನರಲ್ ಡಗ್ಲಸ್ ಮೆಕಾರ್ಥರರು ಹೀಗೆ ಉದ್ಗಾರ ತೆಗೆದರು.

“ಅರ್ವಾಚೀನ ಇತಿಹಾಸದಲ್ಲಿಯೇ ಅತ್ಯಂತ ಶ್ರೇಷ್ಠ ಮಾನವ ಮಹಾತ್ಮಾ ಗಾಂಧಿಯವರ ಕೊಲೆಯಂತಹ ಬೀಭತ್ಸ ಉದಾಹರಣೆ ಇನ್ನೊಂದಿಲ್ಲ. ಅಹಿಂಸೆಯ ಮೂರ್ತಿಯು ಹಿಂಸೆಯಿಂದ ಪರಂಧಾಮಕ್ಕೆ ಹೋದುದು ತರ್ಕಕ್ಕೆ ನಿಲುಕಲಾರದ ವಿಷಯವಾಗಿದೆ. ಮಹಾತ್ಮರು ಇಂದಿನ ಯುಗದವರಲ್ಲ. ಮುಂದಿನ ಯುಗದ ಆದರ್ಶವನ್ನು ಮುಂಗಡ ಪ್ರಸಾರಗೊಳಿಸಲು ಬಂದ ದಿವ್ಯ ಪುರುಷರವರು.”

ಜಪಾನದ ಮುಖ್ಯ ಮಂತ್ರಿ

ಸಾಂಸ್ಕೃತಿಕ ಮತ್ತು ಜಾಗತಿಕ ಶಾಂತಿ ಇವೇ ಅವರ ಪ್ರೇಮದ ವಿಷಯವಾಗಿದ್ದವು.

ಶ್ರೀ ಅಸಫ್ ಅಲ್ಲಿ

ಅಮೇರಿಕೆಯಲ್ಲಿ ಹಿಂದೀ ರಾಯಭಾರಿಗಳಾಗಿರುವ ಶ್ರೀ ಅಸಫ ಅಲ್ಲಿ ಅವರು ಹೀಗೆ ಉದ್ಗಾರತೆಗೆದರು.

“ಮಹಾತ್ಮರ ನಿಧನವು ಭಾರತದ ಇತಿಹಾಸದಲ್ಲಿಯೇ ಶೋಚನೀಯವಾದ ಘಟನೆ. ಈ ಶಾಂತಿಯ ರಾಜನು ಯೇಸು ಕ್ರಿಸ್ತನಂತೆ ಕೊನೆಗೆ ಆತ್ಮಾರ್ಪಣ ಮಾಡಿದನು.”

ಲಾರ್ಡ ಲಿನ್‌ಲಿಥಗೊ

“ಯಮನು ಮಾಡುವ ಕೆಲಸವನ್ನು ಕೊಲೆಗಡಕನು ಮಾಡಿದ್ದಾನೆ. ಮಹಾತ್ಮರ ನಿಧನದಿಂದ ಹಿಂದುಸ್ತಾನವು ಮೊದಲಿನ ಹಿಂದುಸ್ತಾನವಾಗಲಾರದು ಹಾಗೂ ಅದರ ಭವಿತವ್ಯವನ್ನು ಊಹಿಸುವದು ಸಹ ಕಠಿಣವಾಗಿದೆ.”

ಬ್ರಿಟನ್ನಿನ ವಿದೇಶ ಮಂತ್ರಿ ಬೆವಿನ್

ಹಿಂದುಸ್ತಾನದ ಹಾನಿಯಿಂದ ನಮಗೆ ಅತೀವ ದುಃಖವಾಗಿರುವದು. ಅವರ ಶಾಂತಿ ಪ್ರಯತ್ನಗಳನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದಾಗ ಅವರ ಕೊಲೆಯ ಸುದ್ದಿ ಸಿಡಿಲಿನಂತೆ ಬಂದೆರಗಿತು.

ಬ್ರಿಟನ್ನಿನ ವಿಮಾನ ಮಂತ್ರಿ ಅರ್ಥರ ಹೆಂಡರಸನ್

ಮಹಾತ್ಮರ ನಿಧನದಿಂದ ನನಗೆ ವೈಯಕ್ತಿಕ ಹಾನಿಯಾಗಿದೆ. ಮೂರು ವಾರಗಳ ಹಿಂದೆ ನಾನು ಅವರನ್ನು ದಿಲ್ಲಿಯಲ್ಲಿ ಕಂಡಾಗ ಅವರು ನನ್ನ ಮೇಲೆ ಮಾಡಿದ ಪರಿಣಾಮವನ್ನು ನಾನೆಂದಿಗೂ ಮರೆಯಲಾರೆ. ಮಾನವ ಇತಿಹಾಸದಲ್ಲಿ ಅವರು ಒಬ್ಬ ಶ್ರೇಷ್ಠ ದೈವೀ ಪುರುಷರಾಗಿದ್ದರು.

ಡಿ ವೆಲೆರಾರ ಉದ್ಗಾರ

ಆಯರದ ಮುಖ್ಯ ಮಂತ್ರಿಗಳಾದ ಈ ಮಾನ್ ಡಿ ವೆಲೆರಾ ಅವರು ಪಂ. ಜವಾಹರಲಾಲರಿಗೆ ಈ ರೀತಿ ತಿಳಿಸಿದ್ದಾರೆ.

“ಮಹಾತ್ಮಾ ಗಾಂಧಿಯವರ ಶೋಚನೀಯ ನಿಧನದ ಸುದ್ದಿ ಕೇಳಿದೆ. ಆಯರಿಶ್ ಸರಕಾರ ಮತ್ತು ಜನತೆಯ ಪರವಾಗಿ ನಿಮಗೂ ಹಿಂದೀಯರಿಗೂ ಸಹಾನುಭೂತಿಯನ್ನರ್ಪಿಸುತ್ತೇನೆ. ಈ ಹಾನಿ ಕೇವಲ ಭಾರತದ್ದೊಂದೇ ಅಲ್ಲ. ಜಗತ್ತು ಶ್ರೇಷ್ಠ ಮುಂದಾಳುವನ್ನು ಕಳೆದುಕೊಂಡಂತಾಯಿತು. ಹಿಂದುಸ್ತಾನವು ಶೀಘ್ರಗತಿಯಿಂದ ಮಹಾತ್ಮರ ಆದರ್ಶಗಳನ್ನು ಸಾಧಿಸಲು ಪ್ರಯತ್ನಿಸುವದೆಂದು ಆಶಿಸುತ್ತೇನೆ.

ಡಚ್ ಮುಖ್ಯ ಮಂತ್ರಿ ಡಾ. ಲೂಯಿ ಬೀಲ

ಮಹಾತ್ಮರ ನಿಧನದ ವಾರ್ತೆ ಕೇಳಿ ದೊಡ್ಡ ಆಘಾತವಾಯಿತು. ಭಾರತೀಯರ ಸೇವೆಗಾಗಿ ಅವರು ಮಾಡದ ತ್ಯಾಗವೇ ಇಲ್ಲ.

ಕಾನೆಡಾದ ಮುಖ್ಯ ಮಂತ್ರಿ

ಹಿಂಸೆಯ ಉಚ್ಚಾಟನೆಯಲ್ಲಿ ಸತತ ಪರಿಶ್ರಮ ಮಾಡಿದ ಇಂತಹ ತ್ಯಾಗದ ಜೀವನವು ಅದೇ ಹಿಂಸೆಯಿಂದ ಪ್ರಾಣಕ್ಕೆ ಎರವಾದುದು ಬಹು ಭೀಕರವಾಗಿದೆ.

ಸಿಂಹಳದ ಮುಖ್ಯ ಮಂತ್ರಿ ಸೇನಾನಾಯಕೆ

ಮಹಾತ್ಮರ ಮೃತ್ಯುವಿನಿಂದ ಜಗತ್ತು ಓರ್ವ ಮುಂದಾಳುವನ್ನು ಕಳೆದುಕೊಂಡಿತು. ಅವರ ಸಂದೇಶವು ಶಾಶ್ವತವಾಗಿ ಉಳಿಯುವದು. ಶಾಂತಿ ಸ್ಥಾಪನೆಯ ಅವರ ಪ್ರಯತ್ನವು ಮುಂದಿನ ಪೀಳಿಗೆಗಳನ್ನು ಈ ಕಾರ್ಯದಲ್ಲಿ ಪ್ರೋತ್ಸಾಹಿಸದಿರದು.

ಇಜಿಪ್ತದ ಮುಖ್ಯ ಮಂತ್ರಿ ನೊಕ್ರಾಶಿ ಪಾಶಾ

ಹಿಂದು ಮುಸ್ಲಿಂ ಐಕ್ಯಕ್ಕೆ ಪ್ರಯತ್ನಿಸುತ್ತಿದ್ದ ಈ ಹಿಂದೀ ಮುಂದಾಳುವಿನ ಕೊಲೆಯ ಸುದ್ದಿ ಕೇಳಿ ಇಜಿಪ್ತಕ್ಕೆ ಅತೀವ ದುಃಖವಾಗಿದೆ. ಅವರು ನರೋತ್ತಮರಾಗಿದ್ದರು.

ಬರ್ನಾರ್ಡ ಶಾ

“ಅತಿ ಒಳ್ಳೆಯವರಾಗಿರುವದು ಎಂತಹ ಘಾತುಕವೆಂಬುದು ಇದರಿಂದ ಸ್ಪಷ್ಟವಾಗುವದು”

ಫಕೂರ ಅರಸರು

ಮಹಾತ್ಮರ ನಿಧನ ವಾರ್ತೆ ಕೇಳಿ ಅತ್ಯಂತ ದುಃಖವಾಯಿತು. ಅವರ ಶಾಂತಿಯ ಪ್ರಯತ್ನವು ಯುಗಯುಗಕ್ಕೂ ಆದರ್ಶವಾಗಿ ಉಳಿಯುವದು.

ಇದೇ ಬಗೆಯಾಗಿ ಜಗತ್ತಿನ ಬೇರೆ ಬೇರೆ ಪ್ರಮುಖ ದೇಶಗಳ ಸರಕಾರಗಳಿಂದಲೂ ಆಯಾ ಸರಕಾರಗಳ ಮುಖ್ಯ ಮಂತ್ರಿಗಳಿಂದಲೂ ದುಃಖಾಶ್ರುಗಳು ಸುರಿಮಳೆಯಾಗಿ ಭಾರತಕ್ಕೆ ಹರಿದುಬಂದಿವೆ. ಡೆನ್ಮಾರ್ಕ, ಮಾಸ್ಕೋ, ಬಗದಾದ, ಪೋರ್ತುಗಾಲ, ಸ್ವೀಡನ್, ಝೆಕೋಸ್ಲೋವಾಕಿಯಾ, ಇಟಲಿ, ಇರಾಣ ಮೊದಲಾದ ದೇಶಗಳಿಂದ ಸಾಂತ್ವನ ಸಂದೇಶಗಳು ಬಂದಿವೆ.

ಭಾರತದೇಶದಲ್ಲಿಯಂತೂ ಮಹಾತ್ಮರ ಮರಣ ವಾರ್ತೆಯಿಂದ ಎಲ್ಲರೂ ಶೋಕ ಸಾಗರದಲ್ಲಿ ಮುಳುಗಿದ್ದಾರೆ. ಈ ಸುದ್ದಿಯ ಆಘಾತವನ್ನು ತಾಳಲಾರದೆ ಮಿರಜದ ಓರ್ವ ಪುಸ್ತಕ ವ್ಯಾಪಾರಿಯಾದ ಧರ್ಮವೀರ ಎಂಬವರು ಕುಳಿತಲ್ಲಿಯೇ ಕುಸಿದು ಪ್ರಾಣಬಿಟ್ಟರು. ಹಾಗೂ ಜಮಶೇದಪುರದಲ್ಲಿ ನೆರೆದ ಒಂದು ಕೂಲಿಕಾರರ ಸಭೆಯಲ್ಲಿ ಮಹಾತ್ಮರ ನಿಧನವನ್ನು ಸಾರುತ್ತಲೇ ಓರ್ವ ಕೂಲಿಕಾರನು ಸ್ತಂಭೀಭೂತನಾಗಿ ಮರಳಿ ಚೇತರಿಸಲೇ ಇಲ್ಲ.

ಕೆಳಗೆ ಕೆಲವು ಮಾತ್ರ ಭಾರತೀಯರ ಸಂದೇಶಗಳನ್ನು ಕೊಡಲಾಗಿದೆ.

ಶ್ರೀಮತಿ ಅರುಣಾ ಅಸಫ ಅಲ್ಲಿ

ಹಿಂದುಸ್ತಾನಕ್ಕೆ ಮರಳಿ ಬರಲು ಹೊರಟು ಈಗ ಲಂಡನ್ನಿಗೆ ಬಂದು ಮುಟ್ಟಿದ ಶ್ರೀಮತಿ ಅರುಣಾ ಅಸಫ ಅಲ್ಲಿ ಅವರು ಹೀಗೆ ಹೇಳಿದರು.

“ಮಹಾತ್ಮರ ಕೊಲೆಯ ಹೊಣೆಯು ಇಡೀ ಭಾರತದ ಮೇಲೆ ಇದೆ. ಹಿಂದುಸ್ತಾನದಲ್ಲಿ ಬೆಳೆದು ನಿಂತ ಈ ಪ್ರತಿಗಾಮೀ ಶಕ್ತಿಯನ್ನು ಪ್ರತಿಭಟಿಸಲು ಎಲ್ಲರೂ ಒಂದಾಗಬೇಕು. ಹಿಂದೀಯರು ಮಹಾತ್ಮರನ್ನು ಬದುಕಿಸಿಕೊಳ್ಳಲು ಇತ್ತೀಚೆಗೆ ಅಯೋಗ್ಯರಾಗುತ್ತ ಬಂದಿದ್ದರು. ಪ್ರತ್ಯಕ್ಷವಾಗಿ ಗುಂಡು ಹಾಕಿದವನೊಬ್ಬನೇ ಈ ಕೀಳ್ಕೊಲೆಗೆ ಕಾರಣನಲ್ಲ.

ಮೈಸೂರ ಮಹಾರಾಜರು

ಮಹಾತ್ಮರ ಮರಣದಿಂದ ಸಮೀಪದವರೊಬ್ಬರು ಹೋದಂತಾಯಿತು. ಆದರೆ ಅವರ ಸ್ಫೂರ್ತಿ ನಮ್ಮೊಂದಿಗೆ ಇರುವದು. ದುಃಖವನ್ನು ತಡೆದುಕೊಳ್ಳಲು ದೇವರು ನಮಗೆ ಶಕ್ತಿ ಕೊಡಲಿ. ಅವರ ಸಾಧುವಾದ ಸಲಹೆ ಹಾಗೂ ಜಾಣತನದ ಮಾರ್ಗದರ್ಶನ ನಮಗಿನ್ನು ಲಭಿಸದಾದರೂ ಈ ಸಾಧುವು ಬಿಟ್ಟುಹೋದ ತತ್ವಜ್ಞಾನ ಮತ್ತು ಜೀವನ ಪಾಠಗಳ ಪರಂಪರೆಗಳು ಅಮೌಲ್ಯವಾಗಿವೆ. ಅವನ್ನು ನಾವು ಅನುಸರಿಸಬೇಕು.

ಮೈಸೂರ ಮನೆತನಕ್ಕೆ ಆಗಾಗ ಮಹಾತ್ಮರ ಆಶೀರ್ವಾದ ಹಾಗೂ ಮಾರ್ಗದರ್ಶನದ ಲಾಭ ದೊರೆಯುತಿತ್ತು. ಇಡೀ ಜನಾಂಗದ ದುಃಖದಲ್ಲಿ ನಾವೂ ನಮ್ಮ ಪ್ರಜೆಗಳೂ ಶ್ರದ್ಧಾಂಜಲಿ ಅರ್ಪಿಸುವೆವು.

ಯುಕ್ತಪ್ರಾಂತದ ಗವ್ಹರ್ನರ ಶ್ರೀಮತಿ ಸರೋಜಿನಿ ನಾಯಡು

ಮಹಾತ್ಮರು ಹಿಂದೂ ಧರ್ಮದಲ್ಲಿ ಹುಟ್ಟಿದ ಮಹಾವಿಭೂತಿ. ಅವರನ್ನು ಓರ್ವ ಹಿಂದೂ ಮನುಷ್ಯನು ಕೊಲೆಮಾಡಿದ್ದು ನೋಡಿ ಹಾಯ್ ವಿಧಿಯೇ ಎನ್ನುವಂತಾಗಿದೆ.

ನಮ್ಮಲ್ಲಿ ಅನೇಕರು ಅವರ ಜೀವನದೊಂದಿಗೆ ಸಮರಸರಾಗಿದ್ದರು. ಅವರ ಜೀವನ ನಮ್ಮ ಜೀವನ ಒಂದನ್ನೊಂದು ಅವಲಂಬಿಸಿದಷ್ಟು ನಿಕಟವಾಗಿ ನಾವು ಅವರ ಛಾಯಾನುವರ್ತಿಗಳಾಗಿದ್ದೆವು. ಆದುದರಿಂದ ಅವರ ಕೊಲೆಯಿಂದ ನಮ್ಮ ಕೊಲೆಯೇ ಆದಂತಾಗಿದೆ. ಪ್ರೇಮ ಮತ್ತು ಆತ್ಮಶಕ್ತಿಗಳೇ ವೈರಿಯನ್ನು ಗೆಲ್ಲುವ ಖಡ್ಗ. ನಮ್ಮ ಗುರುವು ಶಾಂತಿಯ ದಾರಿಯಿಂದ ನಡೆದು ಜಯಶಾಲಿಗಳಾದರು. ಮಹಾತ್ಮರು ಯೇಸೂ ಕ್ರಿಸ್ತನ ಹಾಗೆ ಅಮರರಾದರು.

ಭಾರತ ಸರಕಾರದ ಕೇಂದ್ರಶಾಸನ ಸಭೆ

ಭಾರತದ ಕೇಂದ್ರ ಶಾಸನ ಸಭೆಯು ಶೋಕ ತೀವ್ರ ಶೋಕಮಯ ವಾತಾವರಣದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರಿಗೆ ಶ್ರದ್ಧಾಂಜಲಿಗಳನ್ನು ಅರ್ಪಿಸಿತು. ಸಭೆಯ ವೇದಿಕೆಯಲ್ಲಿ ಪಶ್ಚಿಮ ಬಂಗಾಲದ ಗವರ್ನರರಾದ ಶ್ರೀ ಸಿ. ರಾಜಗೋಪಾಲಾಚಾರ್ಯ, ಯುಕ್ತಪ್ರಾಂತದ ಗವರ್ನರರಾದ ಶ್ರೀಮತಿ ಸರೋಜಿನಿ ನಾಯಡು ಮಧ್ಯಪ್ರಾಂತದ ಗವರ್ನರರಾದ ಶ್ರೀ ಮಂಗಳದಾಸ ಪಕ್ವಾಸಾ ಮತ್ತು ಪೂರ್ವಪಂಜಾಬದ ಗವರ್ನರರಾದ ಸರ್ ಚಂದೂಲಾಲ ತ್ರಿವೇದಿ ಮೊದಲಾದವರು ಆಸೀನರಾಗಿದ್ದರು.

ಭಾರತದ ಮುಖ್ಯಮಂತ್ರಿ ಶ್ರೀ ಪಂಡಿತ ಜವಾಹರಲಾಲರು ಹೀಗೆ ನುಡಿದರು.

“ಭಾರತದ ದಿವ್ಯ ಪ್ರಭೆ ಇಂದು ಮಾಯವಾಗಿದೆ. ಆದರೆ ಅವರು ಹೊತ್ತಿಸಿದ ಜ್ಯೋತಿಯು ಮಿನುಗುವವರೆಗೆ ಈ ನಾಡಿನಲ್ಲಿ ಕತ್ತಲೆ ಸಂಭವಿಸುವದಿಲ್ಲ. ನಾವು ಇನ್ನಾದರೂ ಮಹಾತ್ಮರ ಸ್ಮರಣೆ ಮಾಡಿ ಅವರ ಉಪದೇಶಗಳಂತೆ ಆಚರಿಸೋಣ.

ಕೋಚೀನ ಮಹಾರಾಜರು

ಮಹಾತ್ಮರು ಬಾಳಿ ಬದುಕಿದ ತತ್ವಗಳಿಗಾಗಿ ಪ್ರತಿಯೊಬ್ಬ ಹಿಂದುವೂ ತನ್ನ ಜೀವನವನ್ನು ಮೀಸಲಾಗಿರಿಸಬೇಕು. ನನ್ನ ಸಂಸ್ಥಾನದಲ್ಲಿಯ ಪ್ರತಿಯೊಬ್ಬ ಮುಸಲ್ಮಾನನನ್ನೂ ನಾನು ರಕ್ಷಿಸುವೆನೆಂದು ಪಂಡಿತ ನೆಹರೂ ಅವರಿಗೆ ಆಶ್ವಾಸನ ಕೊಡುತ್ತೇನೆ.

ಭೋಪಾಲ ನವಾಬರು

ಗಾಂಧೀಜಿಯ ಧ್ಯೇಯವಾದ ಶಾಂತಿ ಸದಿಚ್ಛೆಗಳನ್ನು ಶಾಶ್ವತವಾಗಿ ಕಾಪಾಡುವದರಿಂದಲೇ ಅವರನ್ನು ಗೌರವಿಸಬೇಕು. ಆಗ ಮಾತ್ರ ಅವರ ಆತ್ಮಕ್ಕೆ ಶಾಂತಿ ದೊರಕುವದು. ಅದಕ್ಕಾಗಿ ಸಂಸ್ಥಾನದ ಹಿಂದು ಮುಸಲ್ಮಾನರು ಮುಂದೆ ಬಂದು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಲಿ.

ಛತ್ತಾರಿ ನವಾಬರು

ಹಿಂದುಸ್ತಾನವು ಇಂದು ತನ್ನ ಆತ್ಮವನ್ನೇ ಕಳೆದುಕೊಂಡಿತು. ಗಂಡಾಂತರದ ಸಮಯದಲ್ಲಿ ಪಾಮರರಾದ ನಾವು ಅವರ ದಿವ್ಯ ಮಾರ್ಗದರ್ಶನಕ್ಕೆ ಎರವಾದೆವು. ದುಃಖದಿಂದ ನಾನು ದಿಙ್ಮೂಢನಾಗಿದ್ದೇನೆ.

ಜಿನ್ನಾರ ಉದ್ಗಾರ

ಪಾಕಿಸ್ತಾನದ ಗವರ್ನರ ಜನರಲರಾದ ಕಾಯದೆ ಆಝಂ ಜಿನ್ನಾರು ಮಹಾತ್ಮರ ಬಗ್ಗೆ ದುಃಖ ವ್ಯಕ್ತಪಡಿಸುತ್ತ, ನಮ್ಮ ರಾಜಕೀಯ ಮತಭೇದಗಳೇನೇ ಇದ್ದರೂ ಹಿಂದೂ ಸಮಾಜದಲ್ಲಿ ಅವರು ಶ್ರೇಷ್ಠ ಪುರುಷರಾಗಿದ್ದರೆಂದೂ ಅವರೆಲ್ಲರ ಸಾರ್ವತ್ರಿಕ ಆದರ ಹಾಗೂ ವಿಶ್ವಾಸದ ಧುರೀಣರಾಗಿದ್ದರೆಂದೂ ಹೇಳಿದರು.

ಜಿನ್ನಾರ ಉದ್ಗಾರದ ಬಗ್ಗೆ ಓರ್ವ ಮುಸಲ್ಮಾನರ ಪ್ರತಿಕ್ರಿಯೆ

ಓರ್ವ ಮುಸಲ್ಮಾನರು ಕಲಕತ್ತೆಯ ಸ್ಟೇಟ್ಸಮನ್ ಪತ್ರಿಕೆಯಲ್ಲಿ ಜಿನ್ನಾರು ಮಹಾತ್ಮಾ ಗಾಂಧಿಯವರ ಕೊಲೆಯ ವಿಷಯದಲ್ಲಿ ತೆಗೆದ ಉದ್ಗಾರಗಳಲ್ಲಿ ಅಡಕವಾದ ಧ್ವನಿಯ ಬಗ್ಗೆ ಅಸಂತೋಷ ವ್ಯಕ್ತಪಡಿಸಿ ಹೀಗೆ ಬರೆದಿದ್ದಾರೆ—

“ಗಾಂಧೀಜಿ ಹಿಂದೂಗಳ ಸಾರ್ವತ್ರಿಕ ಗೌರವಕ್ಕೆ ಮಾತ್ರ ಪಾತ್ರರಾದವರೆಂದು ಹೇಳಿ ಜಿನ್ನಾರು ಮಹಾತ್ಮರ ಯೋಗ್ಯತೆಯನ್ನು ತಗ್ಗಿಸಿ ಮಾತನಾಡಿದ್ದಾರೆ. ಅಲ್ಲದೆ ಅವರು ಹಿಂದೂ ಸಮಾಜದಲ್ಲಿ ಹುಟ್ಟಿ ಬಂದ ಶ್ರೇಷ್ಠ ವ್ಯಕ್ತಿಗಳಲ್ಲೊಬ್ಬರೆಂದು ಹೇಳಿದ್ದು ತಪ್ಪು. ಇಡೀ ಜಗತ್ತಿನಲ್ಲಿಯೇ ಶ್ರೇಷ್ಠ ಜೀವಂತ ಪುರುಷರೆಂದು ಭೂಮಂಡಲದ ಅನೇಕ ಮುಸಲ್ಮಾನರು ಅವರನ್ನು ಗೌರವಿಸಿದ್ದರು. ಅವರ ಘನತೆಯು ಒಂದು ವಿಶಿಷ್ಟ ಸಮಾಜಕ್ಕಾಗಲಿ ದೇಶಕ್ಕಾಗಲಿ ಸೀಮಿತವಾಗಿರಲಿಲ್ಲ. ಅವರದು ಜಾಗತಿಕ ಘನತೆ.”

ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಕತ ಅಲ್ಲಿ ಖಾನ

ಈ ಕ್ರೂರ ಕೃತ್ಯವನ್ನು ಜಗತ್ತಿನ ಎಲ್ಲ ಜನರೂ ನಿಂದಿಸದಿರಲಾರರು. ಮಹಾತ್ಮರು ಆಧುನಿಕ ಕಾಲದ ಮಹಾ ವಿಭೂತಿಯಾಗಿದ್ದರು ಜಾತೀಯ ಸೌಹಾರ್ದತೆಗೆ ಅವಿಶ್ರಾಂತ ಪರಿಶ್ರಮಪಡುತಿದ್ದರು. ಅವರ ನಿಧನದಿಂದ ಶಾಂತಿ ಸ್ಥಾಪನೆಯ ಕಾರ್ಯಕ್ಕೆ ದೊಡ್ಡ ವಿಘ್ನ ಒದಗಿತು.

ಎಚ್. ಎಸ್. ಸುಹ್ರವರ್ದಿ

ಭೂಮಿಯೇ ಇಬ್ಭಾಗವಾದಷ್ಟು ದುಃಖದಾಯಕ ಸಂಗತಿಯು. ನಮ್ಮ ಸಂಕಟ ಕಾಲದಲ್ಲಿ ಇನ್ನಾರ ಉಪದೇಶ ಕೇಳಹೋಗಬೇಕು? ಅವರು ನಮ್ಮ ಕೃತಿ ನೋಡಲಿದ್ದಾರೆ. ಅವರ ಪ್ರೀತಿಯ ವಿಷಯವಾದ ಜಾತೀಯ ಸೌಹಾರ್ದಕ್ಕೆ ಹಾಗೂ ಜನತಾ ಸೇವೆಗೆ ನಾವೆಲ್ಲ ಬದ್ಧಕಂಕಣರಾಗಿ ಅವರ ಆತ್ಮಕ್ಕೆ ಶಾಂತಿಯನ್ನು ನೀಡೋಣ.

ಯಮುನಾತಟದಲ್ಲಿ ಮಹಾತ್ಮರ ಕಳೇಬರದ ಅಗ್ನಿಸಂಸ್ಕಾರ

ಲಕ್ಷಾಂತರ ಜನಸಮ್ಮರ್ದ— ಎಲ್ಲೆಲ್ಲಿಯೂ ಶೋಕಾಂಧಕಾರ-ವಿಮಾನದಿಂದ ಪುಷ್ಪವೃಷ್ಟಿ

ಗುರುವಾರ ೧೨ ಕ್ಕೆ ತ್ರಿವೇಣಿಯಲ್ಲಿ ಅಸ್ಥಿ ವಿಸರ್ಜನೆ

ದಿಲ್ಲಿಯ ಯಮುನಾ ತಟದಲ್ಲಿ ರಾಜಘಾಟ ಎಂಬಲ್ಲಿ ೩೧ ಶನಿವಾರ ಸಂಜೆ ೪-೫೫ಕ್ಕೆ ಮಹಾತ್ಮಾ ಗಾಂಧಿಯವರ ಮೂರನೆಯ ಮಕ್ಕಳಾದ ಶ್ರೀ ರಾಮದಾಸ ಗಾಂಧಿ ಅವರು ೧೦-೧೨ ಲಕ್ಷ ಜನಸ್ತೋಮದ ಎದುರಿಗೆ ಮಹಾತ್ಮರ ಪಾರ್ಥಿವದೇಹಕ್ಕೆ ಅಗ್ನಿಸಂಸ್ಕಾರ ಮಾಡಿದರು. ೭ ಗಂಟೆಯ ಹೊತ್ತಿಗೆ ಮಹಾತ್ಮರ ಐಹಿಕ ಶರೀರವು ಭಸ್ಮವಾಗಿ ಪಂಚತ್ವಹೊಂದಿತು.

ಅಂತ್ಯಸಂಸ್ಕಾರ ನಡೆಯಲಿದ್ದ ರಾಜಘಾಟದಲ್ಲಿ ಮುಂಜಾವಿನಿಂದಲೇ ಲಕ್ಷೋಪಲಕ್ಷ ಜನರು ಬಂದು ಬಂದು ತುಂಬುತ್ತಿದ್ದರು. ಗವರ್ನರ ಜನರಲ್ ಲಾರ್ಡ ಮೌಂಟಬ್ಯಾಟನ್ನರು, ಲೇಡಿ ಮೌಂಟಬ್ಯಾಟನ್ನರು ಅವರ ಇಬ್ಬರು ಹೆಣ್ಣುಮಕ್ಕಳು, ಮದ್ರಾಸದ ಗವ್ಹರ್ನರರಾದ ಸರ್ ಆರ್ಚಿಬಾಲ್ಡ ನೈ, ಚೀನಿ ರಾಯಭಾರಿ, ಡಾ. ಚಿಲುನ್‌ಲೋ, ಸೈನ್ಯ ಮತ್ತು ಸಿವಿಲ್ ಅಧಿಕಾರಿಗಳು ಮಹಾತ್ಮರ ಅಂತ್ಯ ದರ್ಶನಕ್ಕೆ ಬಂದಿದ್ದರು. ರಾಮ ಭಜನೆ ಅಖಂಡ ಸಾಗಿತ್ತು.

ಮಹಾತ್ಮರ ಅಂತ್ಯದ ಸಂದರ್ಶನಕ್ಕೆಂದು ಬಂದ ಅಪಾರ ಜನಸ್ತೋಮಕ್ಕೆ ಅನುಕೂಲವಾಗಲೆಂದು ತಾ. ೩೧ ಶನಿವಾರ ದಿನ ಬಿರ್ಲಾಭವನದ ಬಾಗಿಲನ್ನು ನಸುಕಿನ ೬ ಗಂಟೆಗೇ ತೆರೆಯಲಾಗಿತ್ತು.

ದಿಲ್ಲಿಯ ನಗರವೆಲ್ಲ ಶೋಕ ಸಾಗರದಲ್ಲಿಮುಳುಗಿತ್ತು. ಸರಕಾರಿಯ ಕಟ್ಟಡಗಳ ಗವರ್ನರ ಜನರಲ್ಲರ ಹಾಗೂ ವಿದೇಶೀ ರಾಯಭಾರಿಗಳ ವಾಸಭವನಗಳ ಪತಾಕೆಗಳೆಲ್ಲ ಅರ್ಧಕ್ಕೆ ಇಳಿಸಲ್ಪಟ್ಟಿದ್ದವು.

ಗಾಂಧೀಜಿಯವರ ಆಪ್ತೇಷ್ಟರು ಅವರ ಕಳೇಬರದಬಳಿ ಕುಳಿತು ಶುಕ್ರವಾರ ರಾತ್ರಿಯೆಲ್ಲ ಜಾಗರಣಮಾಡಿ ಭಜನೆ ಮಾಡಿದರು.

ಬಿರ್ಲಾಭವನದಿಂದ ಯಮುನಾಘಾಟದ ವರೆಗೆ ಪೋಲೀಸರ ವ್ಯವಸ್ಥೆ ಚನ್ನಾಗಿತ್ತು. ಬಿರ್ಲಾಭವನದ ಬಳಿಗಂತೂ ಪೋಲೀಸರ ಹಾಗೂ ಸೈನಿಕರ ವ್ಯೂಹವನ್ನೇ ರಚಿಸಲಾಗಿತ್ತು. ದಿಲ್ಲಿ ನಗರದ ವ್ಯವಹಾರಗಳೆಲ್ಲ ಸ್ಥಗಿತವಾಗಿದ್ದವು. ಮುಖ್ಯಮಂತ್ರಿಗಳಾದ ಪಂ. ಜವಾಹರಲಾಲರು ಗಂಭೀರ ಭಾವದಿಂದ ಎಲ್ಲ ವ್ಯವಸ್ಥೆಯನ್ನೂ ನೋಡುತ್ತ ಓಡಾಡುತ್ತಿದ್ದರು. ಹೂಗಳ ಹಾಸಿಗೆಯ ಮೇಲೆ ಮಹಾತ್ಮರು ಪವಡಿಸಿದ್ದರು. ಸಂದರ್ಶನಕ್ಕೆ ಬಂದವರೆಲ್ಲ ಹೂ ಗೊಂಚಲುಗಳನ್ನು ಮಹಾತ್ಮರ ಪಾದದ ಬಳಿ ಇರಿಸಿ ಶಾಂತವಾಗಿ ಕೈಮುಗಿದು ಮರಳುತ್ತಿದ್ದರು.

ಶೀಖ, ಗುರ್ಖಾ, ರಜಪುತಾನಾ ಹೀಗೆ ಹಿಂದುಸ್ತಾನದ ಸೈನ್ಯಶಾಖೆಯ ಎಲ್ಲ ದಳಗಳು ದುಃಖಸೂಚಕ ಸಮವಸ್ತ್ರಗಳನ್ನು ಧರಿಸಿ ಬಿರ್ಲಾಭವನದ ಎದುರಿಗೆ ನಿಂತಿದ್ದವು. ಹಿಂದೀ ವೈಮಾನಿಕ ದಲದವರೂ ನಾವಿಕ ದಲದವರೂ ಬಂದಿದ್ದರು.

ಪಾದದಿಂದ ಎದೆಯ ವರೆಗೆ ಮಹಾತ್ಮರನ್ನು ಶುಭ್ರ ಖಾದಿಯಿಂದ ಮುಚ್ಚಿಬಿಡಲಾಗಿತ್ತು. ಅವರ ಮುಖವು ಪ್ರಾರ್ಥನಾಮಗ್ನವಾದಂತೆ ಅಮ್ಲಾನವಾಗಿ ಶಾಂತವಾಗಿ ಶೋಭಿಸುತ್ತಿತ್ತು.

ಮಹಾತ್ಮರ ತಲೆಯ ಬದಿಗೆ ಚಂದನದ ಧೂಪವಿತ್ತು. ಶ್ರೀ. ದೇವದಾಸ ಗಾಂಧಿಯವರು ರಾತ್ರಿಯೆಲ್ಲ ತಮ್ಮ ಪಿತೃದೇವರ ಹತ್ತಿರವೇ ಕುಳಿತಿದ್ದರು. ಸಂದಾರ ಪಟೇಲರಂತೂ ಅಧೋವದನರಾಗಿ ಮಿಸುಕದೆ ಕುಳಿತಿದ್ದರು. ಅಮೃತ್‌ಕೌರರು ಗಾಂಧೀಜಿಯ ಪಾದದ ಬಳಿ ಕುಳಿತಿದ್ದರು. ಪಂಡಿತ ಗೋವಿಂದ ವಲ್ಲಭಪಂತರು ವಿಶೇಷ ವಿಮಾನದಿಂದ ಹಾರಿ ಬಂದರು.

ಯಮುನಾನದಿಯ ದಂಡೆಗೆ, ಈ ಅಮರ ಪುರುಷನಿಗೆ ಅಮರ ಸ್ಮಾರಕ ಕಟ್ಟಿಸಲು ಅನುಕೂಲವಾಗಲೆಂದು ರಾಜಘಾಟದ ವಿಶಾಲ ಸ್ಥಳದಲ್ಲಿ ಅಂತ್ಯವಿಧಿಯನ್ನು ಜರುಗಿಸಬೇಕೆಂದು ತೀರ್ಮಾನಿಸಲಾಯ್ತು.

ಗಾಂಧೀಜಿಯವರ ಶವವನ್ನು ಅವರ ಮೊಮ್ಮಗಳು, ಪ್ಯಾರೇಲಾಲರು ಮೊದಲಾದವರು ಸೇರಿ ಬಿರ್ಲಾಭವನದಿಂದ ಎತ್ತಿ ತಂದು ಪುಷ್ಪಾಲಂಕೃತ ಸೈನ್ಯಶಾಖೆಯ ವಾಹನವೊಂದರ ಮೇಲೆ ಇರಿಸಿದರು. ಸರದಾರ ಪಟೇಲರು ಆ ವಾಹನದಲ್ಲಿ ಮಹಾತ್ಮರ ಪಾದತಲದಲ್ಲಿ ಕುಳಿತಿದ್ದರು. ರಾಮದಾಸ ಗಾಂಧಿ ಮತ್ತು ಸಂರಕ್ಷಕ ಮಂತ್ರಿ ಸರದಾರ ಬಲದೇವಸಿಂಗರೂ ಅದೇ ವಾಹನದಲ್ಲಿ ನಿಂದಿಸಿದ್ದರು.

ಲಾರ್ಡ ಮೌಂಟಬ್ಯಾಟನ್ನರು ಸಪತ್ನೀಕರಾಗಿ ತಮ್ಮ ಇಬ್ಬರು ಹೆಣ್ಣುಮಕ್ಕಳೊಡನೆ ಬಂದಿದ್ದರು ಶ್ರೀಮತಿ ಸರೋಜಿನಿ ನಾಯಡು, ಸರ್ ಚಂದುಲಾಲ ತ್ರಿವೇದಿಯವರು ಸಕಾಲಕ್ಕೆ ಬಂದೊದಗಿದರು. ಸತೀ ಮೌಂಟಬ್ಯಾಟನ್ನರೂ ಮದ್ರಾಸದಲ್ಲಿದ್ದವರು ವಿಮಾನಾರೂಢರಾಗಿ ಹಾರಿ ಬಂದರು.

ಶನಿವಾರ ತಾ. ೩೧ರ ಮುಂಜಾವಿನ ೧೧-೪೫ ಗಂಟೆ. ಅದೊ, ಮಹಾತ್ಮರ ಮಹಾಪ್ರಸ್ಥಾನದ ಮೆರವಣಿಗೆ ಬಿರ್ಲಾಭವನದಿಂದ ಹೊರಟಿದೆ!

ಹೂಗಳ ರಾಶಿಯಲ್ಲಿ ವಾಹನವೆಲ್ಲ ಮುಚ್ಚಿಹೋಗಿದೆ. ಮಹಾತ್ಮರ ಮುಖ ಮಾತ್ರ ಕಾಣುತ್ತಿದೆ. ಮೆರವಣಿಗೆ ಹೊರಡುತ್ತಲೇ ಪಂ. ಜವಾಹರಲಾಲರೂ ದೇವದಾಸ ಗಾಂಧಿಯವರೂ ಮಹಾತ್ಮರ ಎಡಬಲ ಪಕ್ಕಗಳಲ್ಲಿ ಬಂದು ಕುಳ್ಳಿರಹತ್ತಿದ್ದಾರೆ. ಸರದಾರ ಪಟೇಲರು ಪಂಡಿತ ಜವಾಹರಲಾಲರ ಹಿಂಬದಿಗಾದರು. ದೇವದಾಸರು ಎಲ್ಲಕ್ಕೂ ಮುಂದೆ ಆಸೀನರಾದರು. ಗಾಂಧೀಜಿಯವರ ಇನ್ನುಳಿದ ನಿಕಟವರ್ತಿಗಳೂ ಆಶ್ರಮವಾಸಿಗಳೂ ವಾಹನದ ಹಿಂದೆ ಮುಂದೆ ನಡೆಯಹತ್ತಿದ್ದಾರೆ. ಗುರ್ಖಾ ಮತ್ತು ಕೊಡೆ ವೈಮಾನಿಕರು ಜನಸಾಗರವನ್ನು ನಿಯಂತ್ರಿಸಿ ಇವರಿಗೆ ದಾರಿ ಮಾಡಿಕೊಡುತ್ತಿದ್ದಾರೆ.

ಹೆಜ್ಜೆಹೆಜ್ಜೆಗೂ 'ಮಹಾತ್ಮಾ ಗಾಂಧೀಕಿ ಜಯ' ಎಂಬ ಘೋಷವು ಆಕಾಶವನ್ನು ಆವರಿಸಿದೆ.

ರಾಜಮಾರ್ಗದ ಎಡಬಲಕ್ಕಿದ್ದ ಗಿಡಮರಗಳೆಲ್ಲ ಮಹಾತ್ಮರ ಅಂತ್ಯದರ್ಶನಕ್ಕೆ ಕಾತರರಾದ ಜನಭಾರದಿಂದ ಬಾಗಿ ಹೋಗಿವೆ. ಮೆರವಣಿಗೆಯಲ್ಲಿ ಹಿಂದು, ಶೀಖ, ಫಾರಸಿ, ಬೌದ್ಧ, ಕ್ರಿಶ್ಚಿಯನ್, ಹರಿಜನ, ಮುಸ್ಲಿಂ ಹೀಗೆ ಸರ್ವ ಜಾತಿಮತಗಳ ಜನರೂ ಸೇರಿಕೊಂಡಿದ್ದಾರೆ! ಅಸಂಖ್ಯಾತ ಕಪ್ಪು ಪತಾಕೆಗಳು ತಲೆತಗ್ಗಿಸಿ ದುಃಖ ಮಗ್ನವಾಗಿ ದಾರಿಗುಂಟ ಸಾಗಿವೆ. ಅದೋ ಲೆಕ್ಕವಿಲ್ಲದಷ್ಟು ಸಾಯಕಲ್ಲುಗಳು ಸಹ ದಿಕ್ಕುಗಾಣದೆ ಸರಿಯಲು ಬಾರದೆ ನಿಶ್ಚೇಷ್ಟಿತವಾಗಿ ಬಿದ್ದುಕೊಂಡಿವೆ ಕಂಡಿತೆ?

ಬಿರ್ಲಾಭವನದಿಂದ ರಾಜಘಾಟವು ೫ ಮೈಲು ದೂರದಲ್ಲಿದೆ. ಕೆಂಪು ಕೋಟೆಯ ದಕ್ಷಿಣಕ್ಕೆ ಯಮುನಾ ಪೂಲಿನ ದಕ್ಷಿಣಕ್ಕೆ ಈ ಘಾಟದೆ.

ರಾಜಘಾಟದಲ್ಲಿ ೩ ಅಡಿ ಎತ್ತರದ ೧೨ ಅಡಿ ಚೌರಸ ವೇದಿಕೆಯೊಂದು ರಚಿತವಾಗಿದೆ. ಈ ಸ್ಥಳ ಹಿಂದಿನ ದಿನ ಕಲ್ಲುಮುಳ್ಳು ಗಿಡಗಂಟಿಗಳಿಂದ ಆವೃತವಾಗಿತ್ತು. ಆದರೆ ಕೆಲವೇ ತಾಸುಗಳಲ್ಲಿ ಆ ವಿಶಾಲ ಭೂಭಾಗವು ಚೊಕ್ಕಟಗೊಳಿಸಲ್ಪಟ್ಟಿತ್ತು.

ಮೆರವಣಿಗೆಯು ಹಾರ್ಡಿಂಜ ಬೀದಿಗೆ ಬರುತ್ತಲೇ ವಿಮಾನ ಶಾಖೆಯ ನೂರು ವಿಮಾನಗಳು ಹಾರಿ ಬಂದು ಪುಷ್ಪವೃಷ್ಟಿ ಮಾಡಿದವು. ೩ ನೂರು ೪ ನೂರು ಮಹಿಳೆಯರು ಮಹಾತ್ಮರಿಗೆ ಪ್ರಿಯವಾದ ಭಜನಗೀತಗಳನ್ನು ಭಕ್ತಿಭಾವದಿಂದ ಹಾಡುತ್ತ ವಾಹನದ ಮುಂದೆ ಸಾಗಿದ್ದಾರೆ. ಜನಸಮೂಹವು ಹೆಚ್ಚುತ್ತಲೇ ಸಾಗಿದೆ. ಈಗ ೫ ಲಕ್ಷ ಜನರಾದರೂ ಆಗಿರಬೇಕು.

ಅಕೋ, ಮೆರವಣಿಗೆ ರಾಜಘಾಟಕ್ಕೆ ಸಮೀಪಿಸಿತು. ೫ ಮೈಲಿನ ದಾರಿ ನಡೆದು ಬರಲು ಮೆರವಣಿಗೆಗೆ ೫ ತಾಸು ೩೫ ನಿಮಿಷ ತಗಲಿದವು. ಅಂದರೆ ಮೆರವಣಿಗೆ ರಾಜಘಾಟವನ್ನು ೪-೨೦ಕ್ಕೆ ಮುಟ್ಟಿತು.

ಗಾಂಧೀಜಿಯವರ ಅಂತ್ಯ ಸಂಸ್ಕಾರಕ್ಕಾಗಿ ಗಂಧದ ಕೊರಡುಗಳ ಚಿತೆಯನ್ನು ಏರ್ಪಡಿಸಿದ್ದಾರೆ. ಇನ್ನು ಅಲ್ಪಾವಕಾಶದಲ್ಲಿಯೇ ರಾಷ್ಟ್ರಪಿತನನ್ನು ಅಗ್ನಿ ನಾರಾಯಣನು ಆಲಿಂಗಿಸಿ ತನ್ನ ಬಳಿ ಬರಮಾಡಿಕೊಳ್ಳುತ್ತಾನೆ. ಶೋಕಸ್ವರವೂ ಜಯಘೋಷವೂ ಮುಗಿಲನ್ನು ಮುಟ್ಟಿ ಬಿಟ್ಟಿದೆ!

ಮಾನವ ಕುಲೋದ್ಧಾರಕರಾದ ಮಹಾತ್ಮರ ಅಂತ್ಯದರ್ಶನ ಪಡೆಯಲು ಜನ ನುಗ್ಗಹತ್ತಿದ್ದಾರೆ ಸೈನಿಕರು ಅವರನ್ನು ನಿಗ್ರಹಿಸಲಾರದಾಗಿದ್ದಾರೆ. ಗದ್ದಲದಲ್ಲಿ ಎಷ್ಟೋ ಜನಕ್ಕೆ ಎಚ್ಚರತಪ್ಪುತ್ತಿದೆ. ಚಿಕ್ಕಮಕ್ಕಳು ತಿಕ್ಕಾಟದಲ್ಲಿ ಬದುಕುವದು ಕಠಿಣವಾಗಹತ್ತಿದೆ. ಅದೋ ಇದನ್ನು ನೋಡಲಾರದೆ ಸ್ವತಃ ಲಾರ್ಡ ಮೌಂಟಬ್ಯಾಟನ್ನರೇ ಜನಸಂದಣಿಯಲ್ಲಿ ನುಗ್ಗಿ ಸೈನಿಕರಿಗೆ ವ್ಯವಸ್ಥೆ ಕಾಯಲು ಮಾರ್ಗದರ್ಶನ ಮಾಡಹತ್ತಿದ್ದಾರೆ!

ಲೇಡಿ ಮೌಂಟಬ್ಯಾಟನ್ನರು, ಸರದಾರ ಪಟೇಲರು, ಪಂಡಿತ ಜವಾಹರಲಾಲರು ಚಿಕ್ಕಮಕ್ಕಳನ್ನು ಎತ್ತಿಕೊಂಡು ಸುರಕ್ಷಿತ ಸ್ಥಳಗಳಿಗೆ ಒಯ್ಯುವದರಲ್ಲಿ ನಿರತರಾಗಿರುವ ಈ ಅಪೂರ್ವ ದೃಶ್ಯ ನಿಮಗೆ ಕಂಡಿತೆ? ಇತ್ತ ಬನ್ನಿರಿ, ಅಲ್ಲಿ ರೆಡ್‌ಕ್ರಾಸಿನ ಶುಶ್ರೂಷಾ ಪಥಕದವರು ಎಚ್ಚರ ತಪ್ಪಿದ ಹಿರಿಯರನ್ನು ಎತ್ತಿ ಬಂಡಿಗಳಿಗೆ ಸಾಗಿಸಹತ್ತಿದ್ದಾರೆ.

ಅಯ್ಯೋ, ಅದು ನೋಡಿ ಗಾಂಧೀಜಿಯ ಆಶ್ರಮವಾಸಿಗಳು. ಮಹಾತ್ಮರ ಪಾರ್ಥಿವಶರೀರವನ್ನು ಎತ್ತಿ ತಂದು ಗಂಧದ ಕಟ್ಟಿಗೆಯ ಚಿತೆಯ ಮೇಲೆ ಇಡಹತ್ತಿದ್ದಾರೆ! ಮತ್ತೆ ಹೊಸ ಹೂಗಳ ಖಾದಿ ಮಾಲೆಗಳು ಮಹಾತ್ಮರ ಪಾದಗಳಿಗೆ ಅರ್ಪಿಸಲ್ಪಡಹತ್ತಿವೆ. ಮೊದಲ ಮಾಲೆಯನ್ನು ಚೀನೀ ರಾಯಭಾರಿಯು ಮಹಾತ್ಮರಿಗೆ ಅರ್ಪಿಸುತ್ತಿದ್ದಾನೆ. ಆ ಮೇಲೆ ಅನೇಕರು ಬಂದು ಪುಷ್ಪಾರ್ಪಣ ಮಾಡುತ್ತಿದ್ದಾರೆ. ಪಂಡಿತ ರಾಮಧನ ಶರ್ಮರ ವೇದಘೋಷ ನಡೆದಿದೆ ಕೇಳಿಸಿತೆ? ರಾಮದಾಸ ಗಾಂಧಿಯವರು ಧರ್ಮವಿಧಿಯನ್ನು ಪೂರೈಸುತ್ತಿರುವದು ಕಾಣಿಸುವದೆ? ಅಕೋ ಅವರೇ ಕೊನೆಗೆ ಮಹಾನುಭಾವನಾದ ರಾಷ್ಟ್ರಪಿತನಿಗೆ ಅಗ್ನಿ ಸಂಸ್ಕಾರ ಮಾಡಿದರು. ಜನರ ದುಃಖ ಒತ್ತರಿಸಿ ಬರುತ್ತಿದೆ! ಡಾ. ರಾಜೇಂದ್ರ ಪ್ರಸಾದರು, ಪಂಡಿತ ಗೋವಿಂದ ವಲ್ಲಭಪಂತರು ಹುಡುಗರಂತೆ ಬಿಕ್ಕಿಬಿಕ್ಕಿ ಅಳಹತ್ತಿದ್ದಾರೆ. ಎಂದ ಮೇಲೆ ಇನ್ನುಳಿದವರ ಪಾಡೇನು? ಜನರೆಲ್ಲ ಜಯಘೋಷ ಮಾಡಿ "ಮಹಾತ್ಮಾ ಅಮರ ಹೋಗಯೆ" ಎಂದು ಏಕಕಂಠದಿಂದ ಉದ್ಘೋಷಿಸಹತ್ತಿದ್ದಾರೆ!

ಈ ಬದಿಗೆ ತುಸು ಕಣ್ಣು ಹೊರಳಿಸಿರಿ. ಸರದಾರ ವಲ್ಲಭಭಾಯಿ ಪಟೇಲರು ನೆಲದ ಮೇಲೆ ಕುಳಿತು ಅಳುತ್ತಿರುವ ಹುಡಿಗೆಯೋರ್ವಳನ್ನು ಸಮಾಧಾನಪಡಿಸಹತ್ತಿರುವದು ಕಾಣಿಸುತ್ತದೆ.

ಚಿಂತಾಭಾರದಿಂದ, ಪಾಪ, ಪಂಡಿತ ಜವಾಹರಲಾಲರು ಹತ್ತುವರ್ಷದ ಮುಪ್ಪು ಇಂದೇ ಬಂದ ಡಸಿದಂತೆ ಕಾಣುತ್ತಿದ್ದಾರೆ. ಅವರು ಜನಸಾಗರದಲ್ಲಿ ಸಂಚರಿಸಿ ವ್ಯವಸ್ಥೆ ಕಾಯಲು ಹಾತೊರೆಯುತ್ತಿರುವದು ಕಾಣುವದಲ್ಲವೆ?

ಗಂಧದ ಕಟ್ಟಿಗೆ ಕೆಂಡವಾಗಿ ಪ್ರಜ್ವಲ ಜ್ವಾಲೆಯಾಗಿ ಹೊತ್ತಿ ಹಬ್ಬಿತು. ಆಗಸವೆಲ್ಲ ಪರಿಮಳದಿಂದ ಮಗಮಗಿಸಿ ಮಹಾತ್ಮರ ಅಂತಃಕರಣದ ಸುಗಂಧವು ಕೊನೆಯದಾಗಿ ವಿತರಣಗೊಳ್ಳುತ್ತಿದೆ.

ಯಮುನಾ ತೀರದಲ್ಲಿ ದಿಲ್ಲಿಯಿಂದ ೫ ಮೈಲು ಅಂತರದಲ್ಲಿದ್ದ ಪಕ್ಕಿಯೆಡಿಂದರಿಂದ ಅಲ್ಲಿಯ ಗೌಳಿಗರು ಮಹಾತ್ಮರ ಸಂಸ್ಕಾರಕ್ಕಾಗಿ ಶುದ್ಧ ತುಪ್ಪವನ್ನು ತಂದಿದ್ದು ಅದನ್ನೇ ಅಗ್ನಿಯನ್ನು ಪುಟಗೊಳಿಸಲು ಉಪಯೋಗಿಸಲಾಯ್ತು. ಹೊರೆ ಹೊರೆ ಕರ್ಪೂರವಿದೆ.

ಸೂರ್ಯ ನಾರಾಯಣನು ಇದನ್ನು ನೋಡಲೊಲ್ಲದೆ ಅತ್ತ ಅಧೋಮುಖನಾಗಿ ಅಸ್ತಾಚಲದ ಮರೆಗಡಗುತ್ತಿರಲು ಇತ್ತ ಜನಸ್ತೋಮವೂ ಮ್ಲಾನವದನರಾಗಿ ನಿರುತ್ಸಾಹದಿಂದ ಗಂಭೀರವಾಗಿ ಹೆಜ್ಜೆ ಹಾಕುತ್ತ ಮನೆಯ ಹಾದಿ ಹಿಡಿದರು. ಜನಗಳ ಗಂಭೀರವಾದ ಮಾರ್ಗಕ್ರಮಣದ ರೀತಿಯಲ್ಲಿ ಮಹಾತ್ಮರು ಸರ್ವವ್ಯಾಪಿಯಾದರಲ್ಲದೆ, ಕಣ್ಮರೆಯಾದರೆಂದು ಹೇಳುವದೇ ಎಂಬ ಅಭ್ಯಾಸವು ಕಂಡು ಬರುವಂತಿದೆ.

ರಾಜಘಾಟವು ರಾತ್ರಿ ಬಹಳ ಹೊತ್ತಿನ ನಂತರವೂ ಜನಸಂದಣಿಯಿಂದ ತುಂಬಿತ್ತು. ಅಂತ್ಯದರ್ಶನ ಅಭಿಸದವರು ಕೊನೆಗೆ ಚಿತೆಯನ್ನಾದರೂ ನೋಡುವಾ ಎಂಬ ಭಕ್ತಿಯಿಂದ ಅಲ್ಲಿ ಬರುತ್ತಿದ್ದರು. ಚಿತೆಯ ಸುತ್ತಲೂ ಹಾರಿಬಿದ್ದ ಗಂಧದ ಕಟ್ಟಿಗೆಯ ತುಂಡುಗಳನ್ನು ಪವಿತ್ರ ಅವಶೇಷಗಳೆಂದು ಆದರದಿಂದ ಎತ್ತಿಕೊಳ್ಳುತ್ತಿದ್ದರು. ಹಲವರು ಅಲ್ಲಿ ಬಿದ್ದ ಹೂಗಳ ಪಕಳೆಗಳನ್ನು ಆಯ್ದು ಕಣ್ಣಿಗೆ ಒತ್ತಿಕೊಳ್ಳುತ್ತಿದ್ದರು. ಚಿತೆಯ ಸುತ್ತ ಸಮಗ್ರ ರಾತ್ರಿ ಸೈನಿಕರ ಕಾವಲಿದೆ.

ಮಹಾತ್ಮರ ಅಸ್ಥಿ ಸಂಚಯನ

ತ್ರಿವೇಣಿ ಸಂಗಮದಲ್ಲಿ ವಿಸರ್ಜಿಸಲಾಗುವದು

ಮಹಾತ್ಮಾ ಗಾಂಧಿಯವರ ಅಸ್ಥಿ ಸಂಚಯನವು ತಾ ೨ಕ್ಕೆ ಸೋಮವಾರ ವಿಧ್ಯುಕ್ತವಾಗಿ ನಡೆದಿತು. ಅಸ್ಥಿಗಳನ್ನು ಗಂಗಾಜಲದಲ್ಲಿ ತೊಳೆದು ರಾಮನಾಮಗಳು ಕೆತ್ತಲ್ಪಟ್ಟ ಹಿತ್ತಾಳಿಯ ಪಾತ್ರೆಯೊಂದರಲ್ಲಿ ಇಡಲಾಗಿದ್ದು ಅವುಗಳನ್ನು ಪ್ರಯಾಗದ ತ್ರಿವೇಣಿಸಂಗಮದಲ್ಲಿ ೧೨ ನೇ ತಾ. ವಿಸರ್ಜಿಸಲಾಗುವದು. ಸಂಚಯನದ ಕಾಲದಲ್ಲಿ ಬೂದಿಯೊಳಗೆ ಪಿಸ್ತೂಲಿನ ಒಂದು ಗುಂಡು ದೊರಕಿತು.

ಮಹಾತ್ಮರನ್ನು ದಹಿಸಲಾದ ವೇದಿಕೆಯನ್ನು ಈಗ ಹೂಗಳ ರಾಶಿಯಿಂದ ಮುಚ್ಚಿಬಿಡಲಾಗಿದೆ.

ಅಸ್ಥಿ ಸಂಚಯನಕ್ಕೆ ೧೫ ತಾಸು ಸಮಯ ಹಿಡಿಯಿತು. ಈ ಕಾಲಕ್ಕೆ ಸಾವಿರಾರು ಜನರು ಶ್ರದ್ಧಾಂಜಲಿಯನ್ನು ಅರ್ಪಿಸಲು ಬಂದಿದ್ದರು. ಈ ಕಾಲಕ್ಕೆ ಶಾಂತತೆಯನ್ನು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ವೈಮಾನಿಕರನ್ನು ತೋಫುಖಾನೆಯವರನ್ನು ಇಡಲಾಗಿತ್ತು.

ಅಸ್ಥಿ ಸಂಚಯನವನ್ನು ರಾಮದಾಸ ಗಾಂಧಿಯವರು ಮಾಡಿದರು. ಈ ಕಾಲಕ್ಕೆ ಪಂಡಿತ ಜವಾಹರಲಾಲ ಮೊದಲಾದ ಮಂತ್ರಿಗಳು ಶ್ರೀಮತಿ ಸರೋಜಿನಿ ನಾಯಡು, ಸರ್ ಅಕಬರ ಹೈದರಿ, ನವಾಬ ಜೈನಯಾರಜಂಗ, ಛತ್ತಾರಿ ನವಾಬರು ಮತ್ತು ಅನೇಕ ಮುಸ್ಲಿಂ ಮುಖಂಡರು ಆಗಮಿಸಿದ್ದರು.



ಜ್ಯೋತಿಷಿ— ಕೃಷ್ಣಶಾಸ್ತ್ರಿ ಛಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಫೆಬ್ರುವರಿ ೯ ರಿಂದ ೧೫ ವರೆಗೆ

ಮೇಷ

ಪ್ರಕೃತಿ ಸ್ವಸ್ಥ ಸುಖ ಅನುಕೂಲ ಅದರೆ ಹೆಂಡತಿ ಯುದು ಮತ್ತು ಮಕ್ಕಳದು ಕೆಡುವದು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ತೊಂದರೆ ಹೆಚ್ಚು. ಪ್ರತಿಯೊಬ್ಬನ ವರ್ತನೆಯಲ್ಲಿ ತೀರ ವೈಚಿತ್ರ್ಯ. ಅಪ್ತರು ಒತ್ತಾಯಪಡಿಸಿ ಕೆಲವೊಂದು ಬೇಡಿಕೆಗಳನ್ನು ಮುಂದೆ ಮಾಡುವರು. ಮನೆ ಬೀಳುವದರಿಂದ ಸ್ವಲ್ಪ ಹಾನಿ. ಉದ್ಯೋಗದಲ್ಲಿ ಪ್ರಗತಿ ಅನುಕೂಲ ಅದರೆ ಪ್ರತಿಷ್ಠೆ ಮತ್ತು ಲಾಭ ಸಾಧಾರಣವೇ. ಬಂಧು ವರ್ಗದವರಲ್ಲಿ ಒಬ್ಬರ ಉನ್ನತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಡಂಬಡಿಕೆಯು ಸಂಭವ. ಪ್ರವಾಸ ಮತ್ತು ಪತ್ರ ವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅಶ್ವಿನಿಯ ಕೊನೆಯ ೪ ಮತ್ತು ಭರಣಿಯ ಮೊದಲನೆ ಚರಣಕ್ಕೆ ಹೆಚ್ಚು ತೊಂದರೆ. ತಾ ೧೮, ೧೨, ೧೫ ಅನುಕೂಲ.

ಅದೇ ರೀತಿ ೧೫ ನೇ ತಾರೀಖು ಮುಂಜಾನೆ ೯—೩೦ ರಿಂದ ಗುರು ವೃಶ್ಚಿಕದಿಂದ ಧನುರಾಶಿಗೆ ಬಂದು ಕೆಲ ತಿಂಗಳ ಆ ರಾಶಿಯಲ್ಲಿಯೇ ಉಳಿಯುವನು. ಅರ್ಥಾತ್ ಅವನು ಈ ರಾಶಿಯ ವರೆಗೆ ೯ ನೆಯವನಾಗುವನು. ಅದರಿಂದ ಕಿಂಚಿತ್ ಧಾರ್ಮಿಕವು ಮಕ್ಕಳ ಉತ್ಕರ್ಷ ಮಾನಸಿಕ ಸಮಾಧಾನದ ಅನೇಕ ಮಾತುಗಳು ಸಂಭವಿಸುವವು.

ವೃಷಭ

ಪ್ರಕೃತಿ ಎಲ್ಲರದೂ ಅನುಕೂಲ. ಅದರೆ ಹೆಂಡತಿ ಮತ್ತು ಮಕ್ಕಳಿಂದ ಕೆಲ ಕೆಲಸಗಳಲ್ಲಿ ವಿರುದ್ಧ ವರ್ತನೆ. ಬಂಧು ವರ್ಗದವರೊಡನೆ ವಿಶೇಷ ವಿರೋಧ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಮಾನ್ಯ. ಅದರೆ ಲಾಭ ಕುಂಟಬ ಮಿತ್ರ ಇರದಿದ್ದ ಸಂಭವ. ವಾದದಲ್ಲಿ ಬಹಳ ಅನುಕೂಲ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ರೋಹಿಣಿಯ ಕೊನೆಯ ೪ ಮತ್ತು ಮೃಗದ ಮೊದಲನೆ ಚರಣಕ್ಕೆ ಹೆಚ್ಚು ತೊಂದರೆ. ತಾ ೧೧, ೧೨, ೧೩, ೧೪ ಅನುಕೂಲ.

೧೫ ನೇ ತಾರೀಕಿಗೆ ಬರುವ ೮ ನೇ ಗುರು ಪ್ರತಿಯೊಂದು ಕೆಲಸದಲ್ಲಿ ದಗದಗಿ ಕಷ್ಟ ಮತ್ತು ಮನೋಭಂಗ. ವಿಪರೀತ ಬುದ್ಧಿಯ ವ್ಯವಹಾರ ಮಂಗಲ ಕಾರ್ಯಗಳಲ್ಲಿ ಹದಿನೆಂಟು ವಿಘ್ನಗಳು ಬಂದು ಸಾಧ್ಯವಾಗುವವು. ಇಮ್ಮಡಿ ವೆಚ್ಚ ಅದರೆ ಅರ್ಥ ಯಶಸ್ಸು. ಅಲ್ಪಸ್ವಲ್ಪ ಅವಚಿತ ಲಾಭ ಮೊದಲಾದ ಫಲಗಳನ್ನು ಕೊಡುವನು.

ಮಿಥುನ

ನಿಮ್ಮ ಪ್ರಕೃತಿ ಅನುಕೂಲ. ಅದರೆ ಹೆಂಡತಿಗೆ ಮತ್ತು ಮನೆಯಲ್ಲಿಯ ಕೆಲ ಜನರಿಗೆ ದೇಹಕ್ಲೇಶ ಮತ್ತು ಮಾನಸಿಕ ಅಸ್ವಸ್ಥತೆ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ. ಕುಂಬ ಲಾಭ ಮತ್ತು ಒಳ್ಳೆ ಪ್ರತಿಷ್ಠೆ. ಮಿತ್ರ ಸುಖ ಉತ್ತಮ ಅದರೆ ಅವರಲ್ಲಿ ಒಬ್ಬರಿಗೆ ವಿಪರೀತ ಸಂಕಟ ಒದಗುವವು ಕೊಟ್ಟ ವಚನವನ್ನು ನೀವು ತಪ್ಪಿಸಿಕೊಳ್ಳುವ ಪ್ರವೃತ್ತಿಯನ್ನು ತೋರಿಸಹತ್ತುವದರಿಂದ ಕೆಲ ಜನರು ಬಹಳ ಸಿಟ್ಟಿಗೇಳುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹೆಚ್ಚಿನ ಅನುಕೂಲತೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ ಮೃಗದ ೪ ನೆ ಮತ್ತು ಆರಿದ್ರೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ ೧೧, ೧೨, ೧೩, ೧೪ ಅನುಕೂಲ.

೧೫ ಕ್ಕೆ ಬರುವ ೭ ನೇ ಗುರು ಸ್ತ್ರೀ ಮತ್ತು ಮಿತ್ರ ಸುಖ ಲೌಕಿಕ ಮತ್ತು ಸತ್ತೆ ... ಹೆಚ್ಚಳ. ಪ್ರವಾಸ ಲಾಭ ಮತ್ತು ಶರೀರ ಸುಖ ... ಇವುಗಳಿಗೆ ಅನುಕೂಲ. ಅದರೆ ಕೌಟುಂಬಿಕದಲ್ಲಿ ಸ್ವಲ್ಪ ಕಲಹ ಮುಂತಾದ ಫಲಗಳನ್ನು ಕೊಡುವನು.

ಕರ್ಕ

ಹೆಂಡತಿಗೆ ಸ್ವಲ್ಪ ಕ್ಲೇಶ ಬಂಧು ವರ್ಗದವರು ಹಿತವಿರೋಧಕ ಕೆಲಸಗಳನ್ನು ಮಾಡುವರು ಮತ್ತು ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ ಉದ್ಯೋಗದಲ್ಲಿ ಲಾಭ ಮತ್ತು ಪ್ರತಿಷ್ಠೆ ಅನುಕೂಲ. ಅದರೆ ಪ್ರಗತಿ ಮಾತ್ರ ಕುಂಠಿತವಾಗುವದು. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಅಸ್ವ

ಹುಲ್ಲ ಸ್ವಲ್ಪ ಕಿಟಿಕಿಟಿ ಹೆಚ್ಚುವ ಅಂಜಿಕೆ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಪುಷ್ಯದ ೪ ನೆ ಮತ್ತು ಅಶ್ಲೇಷದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ ೯, ೧೩, ೧೪, ೧೫ ಅನುಕೂಲ.

ತಾ ೧೫ ಕ್ಕೆ ಬರುವ ೬ ನೇ ಗುರು ಮಿತ್ರ ವಿರೋಧ, ಉತ್ಕರ್ಷದಲ್ಲಿ ವಿಘ್ನ, ಶತ್ರುಗಳಿಗೆ ಹೆಚ್ಚಳ, ಲಾಭದ ವಿಷಯದಲ್ಲಿ ಸ್ವತಂತ್ರ ಉದ್ದಿಮೆದಾರರಿಗಿಂತ ನೋಕರರಿಗೆ ಅನುಕೂಲ ಮೊದಲಾದ ಫಲಗಳನ್ನು ಕೊಡುವನು.

ಸಿಂಹ

ಪ್ರಕೃತಿ ಸಾಧಾರಣ ಹೆಂಡತಿಗೂಡ ಮೇಲಿಂದ ಮೇಲೆ ವಿರೋಧ ಅದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಕುಂಬ ಲಾಭ ಮತ್ತು ವಿಚಿತ್ರ ಘಟನೆಗಳಿಂದ ದೊಡ್ಡ ಪ್ರತಿಷ್ಠೆ ಅದರೆ ವೆಚ್ಚ ಮತ್ತು ಶತ್ರುಗಳ ತೊಂದರೆಯೂ ಭಯಂಕರ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ನಿರ್ಣಾಯಕರೇ ವಿರುದ್ಧ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಮಘಾದ ೪ ನೆ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು ತಾ. ೧೧, ೧೨, ೧೩ ಅನುಕೂಲ.

೧೫ ನೇ ತಾರೀಕಿಗೆ ಬರುವ ೫ ನೇ ಗುರು ಲಾಭ ಮತ್ತು ಮಿತ್ರಸುಖ. ಆರೋಗ್ಯ ಮತ್ತು ಮಕ್ಕಳಿಗೆ ಉತ್ಕರ್ಷ ಧಾರ್ಮಿಕ ಮತ್ತು ಮಂಗಲಕಾರ್ಯಗಳಿಗೆ ಅನುಕೂಲ ಮೊದಲಾದ ಫಲಗಳನ್ನು ಕೊಡುವನು.

ಕನ್ಯಾ

ಪ್ರಕೃತಿಗೆ ಕಿರಕಳ ಕ್ಲೇಶ. ಸ್ತ್ರೀಸುಖ ಅನುಕೂಲ ಅದರೆ ಉಳಿದ ವಿಷಯಗಳಲ್ಲಿ ಅಲ್ಪಸ್ವಲ್ಪ ಪ್ರಾಪಂಚಿಕ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಅದರೆ ಪ್ರತಿಷ್ಠೆಗೆ ಬಹಳ ಕುಂದು. ಕೊಡತಕ್ಕೊಳ್ಳುವ ವ್ಯವಹಾರದಲ್ಲಿ ಜಿಕೀರಿ ಮತ್ತು ಕಿರಿಕ್ಕಾಟದ ಪ್ರಸಂಗ. ಮಕ್ಕಳು ಮತ್ತು ಬಂಧುವರ್ಗದವರಿಂದ ತೊಂದರೆಯ ಕೃತ್ಯಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು ಪ್ರವಾಸ ಉತ್ತಮ ಅದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಉತ್ತರಾದ ೪ ನೆ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೯, ೧೩, ೧೪, ಅನುಕೂಲ.

೧೫ ಕ್ಕೆ ಬರುವ ೪ ನೇ ಗುರು ಸ್ಥಾವರ ಮತ್ತು ವಾಹನ ಸುಖಕ್ಕೆ ಅನುಕೂಲ ಅದರೆ ಲಾಭ ಭಾಗ್ಯ ಮತ್ತು ಮಕ್ಕಳ ಸುಖಕ್ಕೆ ಪ್ರತಿಕೂಲ ಇರುವನು

ತುಲಾ

ಪ್ರಕೃತಿ ಸಾಧಾರಣ ಅದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ ಅದರೆ ಮಗ ಅಥವಾ ಮಗಳಲ್ಲಿ ಯಾರಾದರೊಬ್ಬರು ಸರಿಯಿಲ್ಲದ ಕೆಲಸ ಮಾಡುವ ಹಟ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅನುಕೂಲ ಅದರೆ ಪ್ರತಿಷ್ಠೆಗೆ ಒಂದು ಬಗೆಯ ಅಘಾತವಾಗುವ ಅಂಜಿಕೆ ಮಿತ್ರಸುಖ ಅನುಕೂಲ. ವಾಹನದಿಂದ ಹಾನಿ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು ಪ್ರವಾಸ ... ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ... ಚಿತ್ತಾದ ೪ ನೆ ಮತ್ತು ಸ್ವಾತಿಯ ಮೊದಲನೆ ಮೂರು ಚರಣಗಳಿಗೆ ತೊಂದರೆ ... ತಾ. ೧೧, ೧೨, ೧೫ ಅನುಕೂಲ.

೧೫ ಕ್ಕೆ ಬರುವ ೩ ನೇ ಗುರು ಮಿತ್ರ ಮತ್ತು ಸ್ತ್ರೀಸುಖ ... ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ... ಬಹಳ ಉತ್ತಮ ಫಲಗಳನ್ನು ಕೊಡುವನು.

ವೃಶ್ಚಿಕ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಪ್ರಾಪಂಚಿಕ ಸುಖದಲ್ಲಿ ಬಹಳ ವೃದ್ಧಿಯಿಂದಹೆಚ್ಚ ಳ ಪ್ರತಿಯೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಯಶಸ್ಸು. ಉದ್ಯೋಗದಲ್ಲಿ ಬಹಳ ಸುಸ್ಥಿತಿ

ಅದರೆ ಮಿತ್ರರು ಮತ್ತು ವರಿಷ್ಠರು ಹಾಗು ಆಶ್ರಯದಾತರಿಂದ ಬಹಳ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಸ್ಥಾವರದಲ್ಲಿ ಬಹಳ ಅನುಕೂಲತೆ ಪ್ರವಾಸಾದಿ ಕೆಲಸ ಅನುಕೂಲ ಅನುರಾಧೆಯ ೪ ನೆ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೯, ೧೩, ೧೪ ಅನುಕೂಲ.

ತಾ. ೧೫ ಕ್ಕೆ ಬರುವ ೨ ನೇ ಗುರು ಕೌಟುಂಬಿಕ ಉತ್ಕರ್ಷ ಲೌಕಿಕ ಮತ್ತು ಸತ್ತೆಯ ಹೆಚ್ಚಳ ಮಕ್ಕಳಲ್ಲಿ ಹೆಚ್ಚಿಚ್ಚು ಸಮಾಧಾನ ಅದರೆ ಬಂಧು ವರ್ಗದವರು ಮತ್ತು ಪೂಜ್ಯರೆಂದು ತಿಳಿದುಕೊಂಡು ವ್ಯಕ್ತಿಗಳಿಂದ ಸ್ವಲ್ಪ ತೊಂದರೆ ಮೊದಲಾದ ಫಲಗಳನ್ನು ಕೊಡುವನು.

ಧನು

ಪ್ರಕೃತಿ ಮತ್ತು ಸ್ತ್ರೀಸುಖ ಅನುಕೂಲ. ಅದರೆ ಉಳಿದ ಪ್ರಾಪಂಚಿಕತೊಂದರೆ ಇದ್ದುದೇ ಉದ್ಯೋಗದಲ್ಲಿ ಪ್ರಗತಿ. ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಅದರೆ ಪ್ರತಿಯೊಂದು ಕೆಲಸ ಬಹಳ ತೊಂದರೆಯಿಂದ ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ, ಸ್ಥಾವರದಲ್ಲಿ ಸುಧಾರಣೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಮೂಲಾದ ೪ ನೆ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ ೯, ೧೧, ೧೨, ೧೫ ಅನುಕೂಲ.

ತಾ. ೧೫ಕ್ಕೆ ಬರುವ ೧ ನೆ ಗುರು ಪ್ರಕೃತಿ ಹೆಂಡತಿ ಮತ್ತು ಸಂತತಿ ಸುಖ ಸ್ಥಾವರ ಮತ್ತು ಭಾಗ್ಯವೃದ್ಧಿ ಇವುಗಳಿಗೆ ಅನುಕೂಲ. ಅದರೆ ಕೌಟುಂಬಿಕ ಕಲಹ, ರೋಖ ಹಣದ ಸಂಗ್ರಹ ಮೊದಲಾದ ಫಲಗಳನ್ನು ಕೊಡುವನು.

ಮಕರ

ಪ್ರಕೃತಿ ಮತ್ತು ಸ್ತ್ರೀ ಸುಖ ಕಡಮೆ. ಅದರೆ ಮಕ್ಕಳಲ್ಲಿ ಉತ್ಕರ್ಷ ನೆರವೇರೊಯವರಲ್ಲಿ ವಿಶೇಷ ವಿರೋಧ. ಸ್ಥಾವರದಲ್ಲಿ ಅನುಕೂಲ ಕೆಲಸಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕಡಮೆ. ಅದರೆ ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಮಿತ್ರಸುಖ ಅನುಕೂಲ. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾಷಾಢದ ೪ ನೇ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೧, ೧೨, ೧೩, ೧೪ ಅನುಕೂಲ.

೧೫ ನೇ ತಾರೀಕಿಗೆ ಬರುವ ೧೨ ನೇ ಗುರು ಪ್ರಕೃತಿ ಸ್ತ್ರೀ ಸುಖ ಇವುಗಳಿಗೆ ತೊಂದರೆ. ಲಾಭಕ್ಕಿಂತ ವೆಚ್ಚ ಹೆಚ್ಚು. ಶತ್ರುಗಳ ಹೆಚ್ಚಳ. ಮಂಗಲ ಮತ್ತು ಧಾರ್ಮಿಕ ಕೃತ್ಯಗಳು ಮೊದಲಾದ ಫಲಗಳನ್ನು ಕೊಡುವನು.

ಕುಂಭ

ಪ್ರಕೃತಿಯ ಬಗ್ಗೆ ಅಸಮಾಧಾನ. ಸ್ತ್ರೀ ಸುಖ ಕಡಮೆ. ಅದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಅದರೆ ವೆಚ್ಚ ವಿಪರೀತ. ಸರಕಾರೀ ಕೆಲಸ ವಾದ ಮತ್ತು ಸ್ಪರ್ಧೆ ಇವುಗಳಲ್ಲಿ ಬಹಳ ತೊಂದರೆ ಮತ್ತು ಹಾನಿ. ಮಿತ್ರಸುಖ ಅನುಕೂಲ. ಪ್ರವಾಸಾದಿ ಕೆಲಸ ಹಿತದ್ದು ಧನಿಷ್ಠಾದ ೪ನೆ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೯, ೧೦, ೧೧, ೧೨ ಅನುಕೂಲ.

೧೫ ನೇ ತಾರೀಕಿಗೆ ಬರುವ ೧೧ ನೇ ಗುರು ಲಾಭ. ಮಿತ್ರ ಸ್ತ್ರೀ ಮತ್ತು ಸಂತತಿ ಸುಖ. ಶತ್ರುನಾಶ ಇವುಗಳಿಗೆ ಬಹಳ ಉತ್ತಮನಿರುವನು.

ಮೀನ

ಪ್ರಕೃತಿ ಉತ್ತಮ. ಅದರೆ ಉಳಿದ ಪ್ರಾಪಂಚಿಕ ವಿಷಯಗಳಲ್ಲಿ ಅಸಮಾಧಾನ. ಉದ್ಯೋಗದಲ್ಲಿ ಪ್ರಗತಿ. ಪ್ರತಿಷ್ಠೆ ಮತ್ತು ಲಾಭ ಮನಸ್ಸಿನಂತೆ ಅದರೆ ವೆಚ್ಚವೂ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೆ ಅಸ್ಥೈರ್ಯ ಹಾನಿ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ, ಉತ್ತರಾಭಾದ್ರಪದದ ೪ ನೆ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು, ತಾ. ೯, ೧೩, ೧೪ ಅನುಕೂಲ.

೧೫ ನೇ ತಾರೀಕಿಗೆ ಬರುವ ೧೦ ನೇ ಗುರು ಲಾಭಕ್ಕೆ ಸಾಮಾನ್ಯ. ಅದರೆ ಪ್ರಕೃತಿ ಕೌಟುಂಬಿಕ ಉತ್ಕರ್ಷ ಲೌಕಿಕ ಮತ್ತು ಅಧಿಕಾರಕ್ಕೆ ಉತ್ತಮನಿರುವನು.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟದ ಪರವಾಗಿ ಹ. ರಾ. ಪೂಜಾರಿಯವರಿಂದ ಮುದ್ರಿತ ಪ್ರಕಟಿತವಾಯಿತು.